ಸೋಮವಾರ, ನವೆಂಬರ್ 20, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಛಠ್ ಪೂಜೆ

ಛಠ್ ಪೂಜೆಯ ಅಂಗವಾಗಿ ಮಧ್ಯಪ್ರದೇಶದ ಜಬಲ್‌ಪುರದಲ್ಲಿ ಮಹಿಳೆಯರು ಭಾನುವಾರ ಧಾರ್ಮಿಕ ವಿಧಿವಿಧಾನಗಳನ್ನು ಪೂರೈಸಿದರು

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರ ನೇತೃತ್ವದ 'ಕರ್ನಾಟಕ ಮಾದರಿ' ಸರ್ಕಾರ ಆರು ತಿಂಗಳ ಆಡಳಿತ ಪೂರೈಸಿ ಯಶಸ್ವಿಯಾಗಿ ಮುನ್ನಡೆಯುತ್ತಿದೆ

6 ತಿಂಗಳ ಅನನ್ಯ ಸಾಧನೆ



ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿ

ಪ್ರಮುಖ ಸಾಧನೆಗಳು

- 19 ಲಕ್ಷ ರೈತರಿಗೆ **ರೂ. 1,500 ಕೋಟಿ** ಬೆಳೆ ವಿಮೆ
- **40 ಸಾವಿರ** ಕೃಷಿ ಹೊಂಡ ನಿರ್ಮಾಣ
- **9 ಲಕ್ಷ** ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ
- **16 ಲಕ್ಷ** ರೈತರಿಗೆ ಬೆಳೆ ಸಾಲ
- **18,230** ಸ್ವಸಹಾಯ ಗುಂಪುಗಳಿಗೆ ಬಡ್ಡಿ ಸಾಲ
- **48 ಲಕ್ಷ** ಯಶಸ್ವಿನಿ ಫಲಾನುಭವಿಗಳು
- **12,593** ಹೆ. ನೀರಾವರಿ ಸಾಮರ್ಥ್ಯ ರಚನೆ
- ರಸ್ತೆ ಅಭಿವೃದ್ಧಿ ಮತ್ತು ನಿಯಂತ್ರಣ ಪ್ರಾಧಿಕಾರ ಸ್ಥಾಪನೆ
- 10 ಕೋಟಿ ಮಾನವ ದಿನಗಳ ಸೃಜನೆ. **ರೂ. 4,451 ಕೋಟಿ** ಪಾವತಿ
- ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರರಿಗೆ **98,080 ಮನೆಗಳನ್ನು** ನಿರ್ಮಿಸಲಾಗಿದೆ
- ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ
- **50** ಅಲ್ಪಸಂಖ್ಯಾತರ ಮೊರಾರ್ಜಿ ವಸತಿ ಶಾಲೆಗಳಲ್ಲಿ ದಾಖಲಾತಿಯನ್ನು ದ್ವಿಗುಣಗೊಳಿಸಲಾಗಿದೆ
- ಸಕಾಲ ಸೇವೆಗಳಡಿ **1.91 ಕೋಟಿ** ಅರ್ಜಿಗಳ ವಿಲೇವಾರಿ
- ಕಂದಾಯ ನ್ಯಾಯಾಲಯದಲ್ಲಿ **59,757 ಪ್ರಕರಣ** ಇತ್ಯರ್ಥ
- ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ 9.5 ಲಕ್ಷ ವಿದ್ಯಾರ್ಥಿಗಳಿಗೆ **ರೂ. 525 ಕೋಟಿ** ವಿದ್ಯಾರ್ಥಿ ವೇತನ ನೀಡಿಕೆ
- ಕರ್ನಾಟಕ ರಾಜ್ಯ ಶಿಕ್ಷಣ ನೀತಿ ರೂಪಿಸಲು **ಆಯೋಗ**
- ಪರೀಕ್ಷೆಗಳು ಪಾರದರ್ಶಕವಾಗಿ ನಡೆಸಲು ಕಾಯ್ದೆ ರಚನೆ
- ಪ್ರತಿ ತಿಂಗಳು ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯಮಟ್ಟದ **ಜನತಾದರ್ಶನ**
- **185.74 ಕೋಟಿ ರೂ.** ವೆಚ್ಚದಲ್ಲಿ ಅನೀಮಿಯಾ ಮುಕ್ತ ರಾಜ್ಯವನ್ನಾಗಿಸಲು ಪೌಷ್ಠಿಕ ಕರ್ನಾಟಕ ಯೋಜನೆಗೆ ಸಿದ್ಧತೆ

ಶಕ್ತಿ – ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ: ಪ್ರತಿನಿತ್ಯ **60 ಲಕ್ಷ** ಮಹಿಳಾ ಪ್ರಯಾಣಿಕರು. ಇದುವರೆಗೆ 97.30 ಕೋಟಿ ಟ್ರಿಪ್

ಗೃಹಜ್ಯೋತಿ – ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ: **1.56 ಕೋಟಿಗೂ** ಅಧಿಕ ಕುಟುಂಬಗಳಿಗೆ ಉಚಿತ ವಿದ್ಯುತ್ ನೀಡಿಕೆ

ಯುವನಿಧಿ – ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 | ₹1500: **4.5 ಲಕ್ಷ** ಯುವ ಜನರಿಗೆ ನೆರವಾಗುವ ನಿರೀಕ್ಷೆ

ಅನ್ನಭಾಗ್ಯ – ಬಡವರಿಗೆ ಪ್ರತಿ ತಿಂಗಳು 10 kg: **3.92 ಕೋಟಿ** ಫಲಾನುಭವಿಗಳಿಗೆ 2444 ಕೋಟಿ ರೂ. ವರ್ಗಾವಣೆ

ಗೃಹಲಕ್ಷ್ಮಿ – ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000: **99.52 ಲಕ್ಷ** ಖಾತೆಗಳಿಗೆ ನಗದು ವರ್ಗಾವಣೆ

ನುಡಿದಂತೆ ನಡೆದಿದ್ದೇವೆ...

ರಾಜ್ಯದ **ಶೇಕಡಾ 96 ಕ್ಕಿಂತಲೂ** ಅಧಿಕ ಮಂದಿಗೆ ಒಂದಲ್ಲ ಒಂದು ರೀತಿಯಲ್ಲಿ ಗ್ಯಾರಂಟಿ ಯೋಜನೆಗಳಿಂದ ಪ್ರಯೋಜನ

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

ಧರ್ಮಾಭಿಮಾನ ತೋರಿಸಲು ಭಯಪಡುವುದಿಲ್ಲ: ಜಾತ್ಯತೀತತೆ ಬಗ್ಗೆ ಮಾತಾಡುವ ಯೋಗ್ಯತೆ ಕಾಂಗ್ರೆಸ್‌ಗಿಲ್ಲ– ಎಚ್‌ಡಿಕೆ

‘ಸಂದರ್ಭ ಬಂದರೆ ದತ್ತ ಮಾಲೆ ಹಾಕುವೆ’

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ‘ದತ್ತ ಮಾಲೆ ಏಕೆ ಹಾಕಬಾರದು, ಸಮಯ ಬಂದರೆ ದತ್ತ ಮಾಲೆಯನ್ನೂ ಹಾಕುತ್ತೇನೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

‘ದತ್ತಮಾಲೆ ಹಾಕುವುದು ದೇವರ ಕಾರ್ಯಕ್ರಮ, ಕಾನೂನು ಬಾಹಿರ ಅಲ್ಲ. ಕಾನೂನು ಬಾಹಿರವಾದ ಯಾವುದೇ ಕೆಲಸ ಮಾಡುವುದಿಲ್ಲ. ಸಂಸ್ಕೃತಿ ಉಳಿಸಲು ಕಾನೂನಾತ್ಮವಾಗಿ ಏನು ಬೇಕಾದರೂ ಮಾಡುತ್ತೇನೆ’ ಎಂದರು.

‘ಜಾತ್ಯತೀತತೆ ಎಂದರೆ ಏನು? ಅಲ್ಲೆಲ್ಲೋ ಹೋಗಿ ಕಾಂಗ್ರೆಸ್‌ನ ಒಬ್ಬ ಮಂತ್ರಿ ಮಾತನಾಡಿದ್ದಾರಲ್ಲ, ನಮ್ಮ ಸಮಾಜದ ಖಾದರ್ ಅವರಿಗೆ ಬಿಜೆಪಿ ಶಾಸಕರು ಕೈಮುಗಿಯಬೇಕು, ಇದು ಜಾತ್ಯತೀತತೆ ಎಂದಿದ್ದಾರೆ. ಅದು ಜಾತ್ಯತೀತತೆಯೇ, ಜಾತ್ಯತೀತತೆ ಬಗ್ಗೆ ಚರ್ಚೆ ಮಾಡಲು ಕಾಂಗ್ರೆಸ್‌ನವರಿಗೆ ಯಾವ ಯೋಗ್ಯತೆ ಇದೆ’ ಎಂದು ಪ್ರಶ್ನಿಸಿದರು.

‘ಅವರಿಗೆ ಅವರ ಧರ್ಮದ ಬಗ್ಗೆ ಅಷ್ಟು ಅಭಿಮಾನ ಇದ್ದರೆ, ನಮ್ಮ ಧರ್ಮಾಭಿಮಾನ ತೋರಿಸಲು ನಾನು ಭಯಪಡುವುದಿಲ್ಲ. ಅಗತ್ಯ ಬಂದರೆ ನಮ್ಮ ಸಂಸ್ಕೃತಿ ಉಳಿಸಲು ದತ್ತಮಾಲೆ ಹಾಕುತ್ತೇನೆ’ ಎಂದರು.

‘ವರುಣ ಕ್ಷೇತ್ರ ಹೊರ ಗುತ್ತಿಗೆಗೆ ಕೊಟ್ಟಿದ್ದೀರಾ’


ಕುಮಾರಸ್ವಾಮಿ

‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ವರುಣ ಕ್ಷೇತ್ರದ ಜನರು ನಿಮ್ಮನ್ನು ಶಾಸಕರನ್ನಾಗಿ ಆಯ್ಕೆ ಮಾಡಿಕೊಂಡಿದ್ದರು. ಈಗ ನಿಮ್ಮ ಮಗ ಡಾ. ಯತೀಂದ್ರ ಅವರಿಗೆ ಕ್ಷೇತ್ರವನ್ನು ಹೊರಗುತ್ತಿಗೆಗೆ ನೀಡಿದ್ದೀರಾ’ ಎಂದು ಎಚ್‌.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

‘ಕ್ಯಾಶ್ ಫಾರ್ ಪೋಸ್ಟಿಂಗ್’ ಹ್ಯಾಷ್ ಟ್ಯಾಗ್‌ನೊಂದಿಗೆ ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಭಾನುವಾರವೂ ಟೀಕಾಪ್ರಹಾರ ಮುಂದುವರಿಸಿರುವ ಅವರು, ‘ಕ್ಷೇತ್ರವನ್ನು ಹೊರಗುತ್ತಿಗೆ ನೀಡುವುದರ ಜತೆಯಲ್ಲೇ ಮಗನನ್ನು ಆಶ್ರಯ ಸಮಿತಿ ಅಧ್ಯಕ್ಷನನ್ನಾಗಿ ಮಾಡಿದ್ದೀರಿ. ಕೆಡಿಪಿ ಸದಸ್ಯರನ್ನಾಗಿ ಮಾಡಿ, ಸರ್ಕಾರದ ಅಧಿಕಾರಿಗಳ ಸಭೆ ನಡೆಸುವ ಅಧಿಕಾರವನ್ನೂ ನೀಡಿದ್ದೀರಿ. ಇದಕ್ಕೆ ಕಾನೂನಿನಲ್ಲಿ ಅವಕಾಶ ಇದೆಯೆ’ ಎಂದು ಕೇಳಿದ್ದಾರೆ.

‘ನೀವು ಮತ್ತು ನಿಮ್ಮ ಮಗ ದೂರವಾಣಿ ಸಂಭಾಷಣೆಯಲ್ಲಿ ಮಾತನಾಡಿದ್ದು ವರ್ಗಾವಣೆ ದಂಧೆ ಕುರಿತು ಎನ್ನುವುದರಲ್ಲಿ ಅನುಮಾನವಿಲ್ಲ. ನೀವು ಆರೂವರೆ ಕೋಟಿ ಕನ್ನಡಿಗರ ಪ್ರತಿನಿಧಿ. ವಿಷಯಾಂತರ ಮಾಡಬೇಡಿ. ನೇರವಾಗಿ ಉತ್ತರ ಕೊಡಿ. ಬೌನ್ಸರುಗಳಂತೆ ಸಚಿವರನ್ನು ಛೂಬಿಟ್ಟರೆ ನಾನು ಹೆದರಿ ಓಡುತ್ತೇನೆ ಎಂದು ಭಾವಿಸಿದರೆ ಅದು ನಿಮ್ಮ ಪೆದ್ದುತನ’ ಎಂದು ಮುಖ್ಯಮಂತ್ರಿಯವರ ಸಚಿವಾಲಯದಲ್ಲಿ ಆರ್. ಮಹದೇವ್ ಅವರನ್ನು ವಿಶೇಷ ಕರ್ತವ್ಯಾಧಿಕಾರಿಯಾಗಿ ನೇಮಿಸಿ ಜವಾಬ್ದಾರಿ ಹಂಚಿಕೆ ಮಾಡಿರುವ ಪಟ್ಟಿಯನ್ನೂ ಸಂದೇಶದೊಂದಿಗೆ ಲಗತ್ತಿಸಿದ್ದಾರೆ.

‘ಸಿಎಸ್‌ಆರ್ ಎಂದರೆ ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿ ಎಂದರ್ಥ. ಈಗ ಅದು ಕರಪ್ಟ್ ಸನ್ ಆಫ್ ಸಿದ್ದರಾಮಯ್ಯ ಎಂದಾಗಿದೆ. ಸಿಎಸ್‌ಆರ್ ನಿಧಿಯ ಮೇಲೂ ಕಣ್ಣು ಹಾಕಿ ವಸೂಲಿಗೆ ಮಗನನ್ನು ಬಿಟ್ಟಿದ್ದೀರಾ’ ಎಂದು ಕೇಳಿದ್ದಾರೆ.

‘ನೀಲಿಚಿತ್ರ ತೋರಿಸಿದವರು ಅಧಿಕಾರದಲ್ಲಿದ್ದಾರೆ’

‘ಸಾತನೂರಿನ ಟೆಂಟ್‌ನಲ್ಲಿ ನೀಲಿಚಿತ್ರ ತೋರಿಸಿಕೊಂಡು ಜೀವನ ನಡೆಸಿದವರನ್ನು ಜನ ಗೆಲ್ಲಿಸಿದ್ದಾರೆ. ಕಾಂಗ್ರೆಸ್ ಪಕ್ಷ ಅವರಿಗೇ ಅಧಿಕಾರ ಕೊಟ್ಟಿದೆ’ ಎಂದು ಎಚ್‌.ಡಿ. ಕುಮಾರಸ್ವಾಮಿ ಪರೋಕ್ಷ ವಾಗ್ದಾಳಿ ನಡೆಸಿದರು.

‘ಜೆಡಿಎಸ್ ಕಾರ್ಯಕರ್ತರು ಮುಖ್ಯಮಂತ್ರಿ ಮತ್ತು ಮಂತ್ರಿಗಳ ಮನೆ ಮುಂದೆ ಪೋಸ್ಟರ್‌ಗಳನ್ನು ಅಂಟಿಸಬಹುದು, ಬಂದೋಬಸ್ತ್ ಮಾಡಿಕೊಳ್ಳಿ ಎಂದು ಗುಪ್ತಚರ ಇಲಾಖೆ ಸುತ್ತೋಲೆ ಹೊರಡಿಸಿದೆ. ಇದು ಅವರ ಅಭಿರುಚಿಯನ್ನು ತೋರಿಸುತ್ತದೆ. ಟೆಂಟ್‌ನಲ್ಲಿ ನೀಲಿ ಚಿತ್ರ ತೋರಿಸಿಕೊಂಡು ಬಂದವರು ಈ ಸರ್ಕಾರದಲ್ಲಿ ಇದ್ದಾರೆ. ಅವರಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ’ ಎಂದರು.

‘ಸಾತನೂರಿನ ಟೆಂಟ್‌ಗಳಲ್ಲಿ ಮಲೆಯಾಳಿ ಚಿತ್ರಕ್ಕೆ ನೀಲಿಚಿತ್ರದ ತುಣುಕು ಸೇರಿಸಿ ತೋರಿಸುತ್ತಿದ್ದರು. ಅದೇ ಮನಃಸ್ಥಿತಿ ಮುಂದುವರಿಸಿಕೊಂಡು ಬಂದಿದ್ದಾರೆ. ಅವರ ಜೀವನ, ಸಂಸ್ಕೃತಿ, ಬದುಕೇ ಅಷ್ಟು. ಏನು ಮಾಡೋದು’ ಎಂದು ಲೇವಡಿ ಮಾಡಿದರು.

ಕುಮಾರಣ್ಣ ಬುದ್ಧಿ ಸ್ಥಿಮಿತ ಕಳೆದುಕೊಂಡಿದ್ದಾರೆ: ಡಿಕೆಶಿ

‘ನಾನು ನೀಲಿ ಚಿತ್ರಗಳನ್ನು ಪ್ರದರ್ಶನ ಮಾಡುತ್ತಿದ್ದೆ ಎಂದು ಆರೋಪ ಮಾಡಿರುವ ಕುಮಾರಣ್ಣ ಬುದ್ಧಿ ಸ್ಥಿಮಿತತೆ ಕಳೆದುಕೊಂಡಿದ್ದಾರೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿರುಗೇಟು ನೀಡಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ‘ನಾನು ಇಂದಿರಾ ಗಾಂಧಿ ಅವರ ಹೆಸರಿನಲ್ಲಿ ಟೂರಿಂಗ್ ಟಾಕೀಸ್‌ಗಳನ್ನು ಇಟ್ಟಿದ್ದೆ. ಒಂದಲ್ಲ ಮೂರ್ನಾಲ್ಕು ಕಡೆ ಟೆಂಟ್‌ಗಳನ್ನು ಇಟ್ಟಿದ್ದೆ. ದೊಡ್ಡಆಲಹಳ್ಳಿ, ಹಾರೋಬೆಲೆ, ಕೋಡಿಹಳ್ಳಿಗಳಲ್ಲಿ ನಡೆಸುತ್ತಿದ್ದೆ. ಹುಣಸೇಹಳ್ಳಿಯಲ್ಲಿ ಈಗಲೂ ಟೆಂಟ್ ಇದೆ. ಈ ಊರುಗಳಿಗೆ ಹೋಗಿ ಮಾಧ್ಯಮದವರೇ ಸಮೀಕ್ಷೆ ನಡೆಸಿ, ನಾನು ಯಾವ ಚಿತ್ರಗಳ ಪ್ರದರ್ಶನ ಮಾಡಿಸುತ್ತಿದ್ದೆ ಎಂದು ಜನರ ಬಳಿ ಕೇಳಿ. ಕುಮಾರಸ್ವಾಮಿ ಅವರಿಗೆ ನೀವೇ ಉತ್ತರಿಸಿ’ ಎಂದರು.

‘ನಿಮ್ಮ ಮೇಲೆ ಕುಮಾರಸ್ವಾಮಿ ಸರಣಿ ಆರೋಪಗಳನ್ನು ಮಾಡುತ್ತಿರುವುದರ ಹಿಂದಿನ ಕಾರಣವೇನು’ ಎಂದು ಕೇಳಿದಾಗ, ‘ಅವರು ದೊಡ್ಡವರು. ಏನೇ ಹೇಳಿದರೂ ನಾನು ವೈಯಕ್ತಿಕವಾಗಿ ತೆಗೆದುಕೊಳ್ಳುವುದಿಲ್ಲ. ಅವರು ಬಳಸುತ್ತಾರೆ ಎಂದು ನಾನು ಏಕವಚನ ಬಳಸುವುದಿಲ್ಲ. ಅದು ಅವರ ಸಂಸ್ಕೃತಿ’ ಎಂದರು.

‘ನನ್ನನ್ನು ಕರೆಂಟ್ ಕಳ್ಳ ಎನ್ನುತ್ತೀರಿ, ನೀವು ದರೋಡೆ ಮಾಡಿಕೊಂಡು ಕುಳಿತಿದ್ದೀರಿ. ಕೂಲಿ ಮಾಡುವವನು ತಿಳಿಯದೆ ಮಾಡಿದ್ದಾನೆ, ನನಗೆ ಗೊತ್ತಿಲ್ಲ ಎನ್ನಬಹುದಿತ್ತು. ನಾನು ಹಾಗೆ ಹೇಳಿಲ್ಲ. ದಂಡ ಕಟ್ಟಿದ್ದೀನಿ. ಶೋಭಾ ಅಪಾರ್ಟ್‌ಮೆಂಟ್ ಕಟ್ಟಿದ್ದಾರೆ. ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕನಾಗಿದ್ದ ರಾಜೇಂದ್ರ ಚೋಳನ್ ಅದೇ ಅಪಾರ್ಟ್‌ಮೆಂಟ್‌ನಲ್ಲಿ ಇದ್ದ. ಅದಕ್ಕೆ ಆರು ತಿಂಗಳು ಕಡಿಮೆ ಬಿಲ್ ಬಂದಿದೆ. ಯಾಕೆ ಅಂತ ಕೇಳಿ’ ಎಂದು ಸವಾಲು ಹಾಕಿದರು.

‘ಅಧಿಕಾರದ ಅವಧಿ ಇನ್ನೂ ನಾಲ್ಕು ವರ್ಷ ಇದೆ. ಸರಿಪಡಿಸಿಕೊಳ್ಳಿ. ಇಲ್ಲದಿದ್ದರೆ ಬೆಲೆ ತೆರಬೇಕಾಗುತ್ತದೆ. ಗ್ಯಾರಂಟಿ ಮೂಲಕ ಬಡವರ ಬದುಕು ಸರಿಯಾಗಿದೆ ಎಂದು ಹೇಳಬಹುದು. ನಿಮ್ಮ ಜಾಹೀರಾತು ನೋಡಿದ್ದೇನೆ. ನೀವು ಅಧಿಕಾರಕ್ಕೆ ಬಂದ ಆರು ತಿಂಗಳಲ್ಲಿ ಎಷ್ಟು ಕೊಲೆಗಳಾಗಿವೆ? ಮಹಿಳಾ ಅಧಿಕಾರಿ ಹತ್ಯೆಯೇ ಆಯಿತು. ಮನೆಯಿಂದ ಹೊರಗೆ ಬರಲು ಜನ ಹೆದರುತ್ತಿದ್ದಾರೆ. ಗೃಹ ಇಲಾಖೆ ಎಷ್ಟು ಪರಿಣಾಮಕಾರಿಯಾಗಿದೆ ಎಂಬುದಕ್ಕೆ ಇದು ಉದಾಹರಣೆ’ ಎಂದರು.

ಬಿಜೆಪಿಯಿಂದ ಆರ್ಥಿಕ ದಿವಾಳಿ: ಲಾಡ್

ಪ್ರಜಾವಾಣಿ ವಾರ್ತೆ

ಸಂತೋಷ್ ಲಾಡ್

ಹುಬ್ಬಳ್ಳಿ: ‘ಬಿಜೆಪಿಯವರು ಕಳೆದ ಹತ್ತು ವರ್ಷಗಳಲ್ಲಿ ದೇಶವನ್ನು ನಾಶ ಮಾಡಿದ್ದಾರೆ. ಆರ್ಥಿಕವಾಗಿ ದೇಶ ದಿವಾಳಿಯಾಗಿದ್ದು, ₹165 ಲಕ್ಷ ಕೋಟಿ ಸಾಲ ಇದೆ’ ಎಂದು ಸಚಿವ ಸಂತೋಷ್ ಲಾಡ್ ಟೀಕಿಸಿದರು.

ಭಾನುವಾರ ಸುದ್ದಿಗಾರ ರೊಂದಿಗೆ ಮಾತನಾಡಿದ ಅವರು, ‘ಒಬ್ಬ ವ್ಯಕ್ತಿಯನ್ನು ದೇವರೆಂದು ಪ್ರತಿಬಿಂಬಿಸುವುದು, ಅವರನ್ನೇ ವಿಶ್ವಗುರು ಎಂದು ಹೇಳುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಳ್ಳೆಯದಲ್ಲ. ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ನೇತೃತ್ವ ವಹಿಸಿದ ನರೇಂದ್ರ ಮೋದಿ ಅವರು ಹತ್ತು ವರ್ಷ ಏನು ಮಾಡಿದ್ದಾರೆ ಎಂಬ ಬಗ್ಗೆ ಚರ್ಚೆ ನಡೆಸಬೇಕು’ ಎಂದು ಆಗ್ರಹಿಸಿದರು.

‘ಪ್ರತಿ ವರ್ಷ ಒಂದಿಲ್ಲೊಂದು ರಾಜ್ಯಗಳಲ್ಲಿ ಚುನಾವಣೆಗಳು ನಡೆಯುತ್ತವೆ. ಮೋದಿ ಅವರು ಚುನಾವಣೆ ಭಾಷಣ ಮಾಡಿ, ಕಾಂಗ್ರೆಸ್‌ಗೆ ಬೈದಿದ್ದು ಬಿಟ್ಟರೆ ಹತ್ತು ವರ್ಷಗಳಲ್ಲಿ ಏನೂ ಮಾಡಿಲ್ಲ’ ಎಂದು ಟೀಕಿಸಿದರು.

‘ವಿಜಯೇಂದ್ರ ಅವರ ಹಸ್ತಕ್ಷೇಪ, ಭ್ರಷ್ಟಾಚಾರದ ಕಾರಣಕ್ಕೆ ಬಿ.ಎಸ್. ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಇಳಿಸಲಾಯಿತು ಎಂದು ಬಿಜೆಪಿಯವರೇ ಹೇಳಿದ್ದರು. ಈಗ ಅವರನ್ನೇ ಏಕೆ ಅಧ್ಯಕ್ಷರನ್ನಾಗಿ ಮಾಡಿದ್ದಾರೆ’ ಎಂದು ಪ್ರಶ್ನಿಸಿದರು.

‘ಧೃತರಾಷ್ಟ್ರನಿಗೂ ಮುಖ್ಯಮಂತ್ರಿ ಸಿದ್ದರಾಮಯ್ಯಗೂ ವ್ಯತ್ಯಾಸವಿಲ್ಲ’

ಬೆಂಗಳೂರು: ‘ಪುತ್ರ ವ್ಯಾಮೋಹದಲ್ಲಿ ಸಿದ್ದರಾಮಯ್ಯ ಅವರಿಗೂ ಧೃತರಾಷ್ಟ್ರನಿಗೂ ಯಾವುದೇ ವ್ಯತ್ಯಾಸ ಇಲ್ಲ’ ಎಂದು ಬಿಜೆಪಿ ಹೇಳಿದೆ.

‘ಎಕ್ಸ್’ ಮೂಲಕ ಸಿದ್ದರಾಮಯ್ಯ ಅವರನ್ನು ತರಾಟೆಗೆ ತೆಗೆದುಕೊಂಡಿರುವ ಬಿಜೆಪಿ, ವರ್ಗಾವಣೆಗೆ ಫೋನ್ ಕರೆ ಮಾಡಿ ‘ಹಲೋ ಅಪ್ಪಾ’ ಎಂದ ಡಾ.ಯತೀಂದ್ರ ಅವರನ್ನು ಸಿದ್ದರಾಮಯ್ಯ ಸಮರ್ಥನೆ ಮಾಡುತ್ತಿರುವ ಪರಿ ಅಚ್ಚರಿ ಹುಟ್ಟಿಸುತ್ತಿದೆ ಎಂದು ಕಾಲೆಳೆದಿದೆ.

‘ಸ್ವಾತಂತ್ರ್ಯ ಇಲ್ವಾ? ಅಧಿಕಾರ ಇಲ್ವಾ? ಮುಖ್ಯಮಂತ್ರಿ ಮಗ ಅಲ್ವಾ? ಕ್ಷೇತ್ರ ನೋಡಿಕೊಳ್ಳಬಾರದಾ? ನನಗೆ ಕ್ಷೇತ್ರ ಬಿಟ್ಟು ಕೊಟ್ಟಿಲ್ವಾ? ಹೀಗೆ ಪ್ರಶ್ನಿಸುವ ಸಿದ್ದರಾಮಯ್ಯಗೂ ಧೃತರಾಷ್ಟ್ರನಿಗೂ ಏನಾದರೂ ವ್ಯತ್ಯಾಸ ಇದೆಯೆ’ ಎಂದು ಪ್ರಶ್ನಿಸಿದೆ.

ಅಸಹಾಯಕ ‘ಕೈ’ ಶಾಸಕರು: ‘ನಿಮ್ಮ ಭ್ರಷ್ಟ ಆಡಳಿತಕ್ಕೆ ಬೇಸತ್ತು ರಾಜೀನಾಮೆ ನೀಡುತ್ತೇನೆ ಎಂದು ಹೇಳುತ್ತಿರುವ ಕಾಂಗ್ರೆಸ್ ಶಾಸಕರ ಪಟ್ಟಿಗೆ ಜಗಳೂರು ಶಾಸಕ ದೇವೇಂದ್ರಪ್ಪ ಹೊಸ ಸೇರ್ಪಡೆ’ ಎಂದು ಟೀಕಿಸಿದೆ.

‘ಆಡಳಿತ ಪಕ್ಷದ ಶಾಸಕರು ತಮ್ಮದೇ ಸರ್ಕಾರದ ವಿರುದ್ಧ ಈ ರೀತಿ ರಾಜೀನಾಮೆ ನೀಡುವಷ್ಟರ ಮಟ್ಟಿಗೆ ಅಸಹಾಯಕರಾಗಿರುವುದು ಕರ್ನಾಟಕದ ಇತಿಹಾಸದಲ್ಲಿ ಇದೇ ಮೊದಲು’ ಎಂದು ಹೇಳಿದೆ.

‘ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೇ, ಕಲೆಕ್ಷನ್ ಮತ್ತು ಪಂಚ ರಾಜ್ಯಗಳಿಗೆ ಕಳುಹಿಸಿದ ಕಾಂಚಾಣದ ಲೆಕ್ಕವನ್ನು ಡೈರಿಯಲ್ಲಿ ಬರೆದಿಟ್ಟುಕೊಳ್ಳುವ ರೀತಿ, ರಾಜೀನಾಮೆ ನೀಡಲು ಸಿದ್ಧ ಎಂದಿರುವ ನಿಮ್ಮದೇ ಪಕ್ಷದ ಶಾಸಕರ ಹೆಸರನ್ನೂ ಬರೆದಿಟ್ಟುಕೊಳ್ಳಿ. ಭವಿಷ್ಯದಲ್ಲಿ ನಿಮಗೆ ಪ್ರಯೋಜನಕ್ಕೆ ಬಂದರೂ ಬರಬಹುದು ಅಲ್ಲವೇ’ ಎಂದು ಲೇವಡಿ ಮಾಡಿದೆ.

ಸುದ್ದಿ 2 ನಿಮಿಷ

‘ಯತ್ನಾಳ ವಿಶ್ವಾಸ ಗಳಿಸುವೆ’

ಕೆ.ಆರ್.ಪೇಟೆ (ಮಂಡ್ಯ): ‘ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಯಾವುದೇ ಹೇಳಿಕೆ ಕೊಡಲು ಸರ್ವ ಸ್ವತಂತ್ರರಾಗಿದ್ದಾರೆ. ಅವರ ಮಾತನ್ನು ಗೌರವದಿಂದ ಸ್ವೀಕರಿಸುತ್ತೇನೆ. ಅವರ ವಿಶ್ವಾಸ ಗಳಿಸಿ ಪಕ್ಷವನ್ನು ಮುನ್ನಡೆಸುತ್ತೇನೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಯತ್ನಾಳ ಅವರು ನೋವಿನಿಂದ ಕೆಲವು ಸಮಸ್ಯೆಗಳನ್ನು ಹೇಳಿಕೊಂಡಿರಬಹುದು. ಆದರೆ, ಅವರ ಮಾತುಗಳನ್ನು ತಪ್ಪಾಗಿ ಅರ್ಥೈಸುವುದು ಬೇಡ. ಶಾಸಕ ರಮೇಶ ಜಾರಕಿಹೊಳಿ ಸೇರಿದಂತೆ ಕೆಲವರ ಅಸಮಾಧಾನ ಬಗೆಹರಿದಿದೆ. ಮುಂದೆ ಎಲ್ಲರೊಂದಿಗೆ ಚರ್ಚಿಸಿ ಉತ್ತರ ಕಂಡುಕೊಳ್ಳುತ್ತೇವೆ’ ಎಂದರು.

‘ವಿಧಾನಸಭೆ ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ಆರ್.ಅಶೋಕ ಸಮರ್ಥರಾಗಿದ್ದಾರೆ. ಇದರ ಬಗ್ಗೆ ಕಾಂಗ್ರೆಸ್ ಮುಖಂಡರು ಮಾತನಾಡುವುದು ಬೇಡ. ಯಾರ ಸಾಮರ್ಥ್ಯ ಏನು ಎಂಬುದನ್ನು ಲೋಕಸಭಾ ಚುನಾವಣೆಯಲ್ಲಿ ಜನರು ತೀರ್ಮಾನ ಮಾಡಲಿದ್ದಾರೆ’ ಎಂದರು.

ಮೈಸೂರು ವರದಿ: ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ನಂತರ, ಭಾನುವಾರ ಇದೇ ಮೊದಲ ಬಾರಿಗೆ ನಗರಕ್ಕೆ ಭೇಟಿ ನೀಡಿದ ವಿಜಯೇಂದ್ರ ಮಠ-ದೇವಸ್ಥಾನಗಳಿಗೆ ಹಾಗೂ ಮುಖಂಡರ ಭೇಟಿಗೆ ಸಮಯ ಮೀಸಲಿಟ್ಟರು. ಮುಖ್ಯಮಂತ್ರಿ ಸಿದ್ದರಾಮಯ್ಯ ತವರಿನಲ್ಲಿ ತಮ್ಮ ಪಕ್ಷದ ಕಾರ್ಯಕರ್ತರಲ್ಲಿ ಉತ್ಸಾಹ ತುಂಬಿದರು.

ಕಾರ್ಯಕರ್ತರು, ಮುಖಂಡರಿಂದ ಅದ್ದೂರಿ ಸ್ವಾಗತ ಪಡೆದ ವಿಜಯೇಂದ್ರ ಮೊದಲಿಗೆ ಸಂಸದ ವಿ.ಶ್ರೀನಿವಾಸಪ್ರಸಾದ್ ಅವರನ್ನು ಅವರ ನಿವಾಸದಲ್ಲಿ ಭೇಟಿಯಾಗಿ ಆಶೀರ್ವಾದ ಪಡೆದರು. ನಂತರ ಅವಧೂತ ದತ್ತ ಪೀಠದಲ್ಲಿ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಸುತ್ತೂರು ಮಠದಲ್ಲಿ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಭೇಟಿಯಾಗಿ ಆಶೀರ್ವಾದ ಪಡೆದರು. ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು.

ಅವರಿಗೆ ಸ್ಥಳೀಯ ನಾಯಕರು ಸಾಥ್ ನೀಡಿದರು.

ಕಾಡಾನೆ ದಾಳಿ: ರೈತ ಮಹಿಳೆ ಸಾವು

ಮಂಡ್ಯ: ತಾಲ್ಲೂಕಿನ ಕೊತ್ತತ್ತಿ ಬಳಿಯ ಲಾಳನಕೆರೆ– ಪೀಹಳ್ಳಿ ಬಳಿ ಭಾನುವಾರ ಕೃಷಿ ಕೆಲಸಕ್ಕೆ ತೆರಳುತ್ತಿದ್ದ ಮಹಿಳೆ ಕಾಡಾನೆ ದಾಳಿಯಿಂದ ಸ್ಥಳದಲ್ಲೇ ಮೃತಪಟ್ಟರು.

ಲಾಳನಕೆರೆ ಗ್ರಾಮದ ಸಾಕಮ್ಮ (50) ಮೃತರು. ಲಾಳನಕೆರೆ– ಪೀಹಳ್ಳಿ ನಡುವೆ ಅರಣ್ಯ ಪ್ರದೇಶವಿದೆ. ಅಲ್ಲಿಂದ ಆನೆ ಬಂದಿದೆ. ಎದೆ ಹಾಗೂ ತಲೆ ಭಾಗಕ್ಕೆ ತುಳಿದಿದ್ದರಿಂದ ಸಾಕಮ್ಮ ತೀವ್ರವಾಗಿ ಗಾಯಗೊಂಡು ಸಾವಿಗೀಡಾದರು.

ಪತಿಯಿಂದ ದೂರವಾಗಿದ್ದ ಸಾಕಮ್ಮ ಲಾಳನಕೆರೆ ಗ್ರಾಮದ ತವರು ಮನೆಯಲ್ಲಿ ವಾಸವಾಗಿದ್ದರು. ಒಬ್ಬ ಪುತ್ರಿ ಇದ್ದು, ಅವರಿಗೆ ಮದುವೆಯಾಗಿದೆ. ಕೃಷಿ ಕೂಲಿ ಕೆಲಸ ಮಾಡಿಕೊಂಡು ಅವರು ಜೀವನ ಸಾಗಿಸುತ್ತಿದ್ದರು.

ದೇವಿಯರ ಹೊನ್ನಾಟ

ಬೆಳಗಾವಿ ಜಿಲ್ಲೆ ರಾಮದುರ್ಗದ ಹಲಗತ್ತಿ ಗ್ರಾಮ ದೇವಿ ಜಾತ್ರೆ ಅಂಗವಾಗಿ ದೇವಿಯರ ಹೊನ್ನಾಟ ಭಾನುವಾರ ಗ್ರಾಮದ ಗಲ್ಲಿಗಳಲ್ಲಿ ಸಂಭ್ರಮದಿಂದ ಜರುಗಿತು

ಬಿಎಸ್‌ಪಿಯಿಂದ 21ರಂದು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಎಚ್‌. ಕಾಂತರಾಜ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗ ಸಿದ್ಧಪಡಿಸಿದ್ದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವರದಿಯನ್ನು (ಜಾತಿ ಗಣತಿ) ಸ್ವೀಕರಿಸಬೇಕು ಮತ್ತು ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯನ್ನು ಜಾರಿಗೊಳಿಸಬೇಕು ಎಂದು ಆಗ್ರಹಿಸಿ ಎಲ್ಲ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಇದೇ 21ರಂದು ಪ್ರತಿಭಟನೆ ನಡೆಸಲು ಬಿಎಸ್‌ಪಿ ನಿರ್ಧರಿಸಿದೆ.

‘ಪಕ್ಷ ಅಧಿಕಾರಕ್ಕೆ ಬಂದರೆ ಮೊದಲ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಂಡು ಹಿಂದುಳಿದ ವರ್ಗಗಳಿಗೆ ಸಂಬಂಧಪಟ್ಟ ಕಾಂತರಾಜ ವರದಿಯನ್ನು ಮತ್ತು ಪರಿಶಿಷ್ಟ ಜಾತಿಯ ಮಾದಿಗ ಮತ್ತು ಮಾದಿಗ ಸಂಬಂಧಿತ ಜಾತಿಗಳಿಗೆ ಒಳ ಮೀಸಲಾತಿ ಕಲ್ಪಿಸುವ ಸಲವಾಗಿ ರಚಿಸಿರುವ ಸದಾಶಿವ ಆಯೋಗದ ವರದಿಯನ್ನು ಜಾರಿ ಮಾಡುವುದಾಗಿ ಕಾಂಗ್ರೆಸ್ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿತ್ತು. ಈ ವರದಿಗಳನ್ನು ಜಾರಿ ಮಾಡಿ, ಇಲ್ಲದಿದ್ದರೆ ಕುರ್ಚಿ ಖಾಲಿ ಮಾಡಿ ಎನ್ನುವ ಸಾಮಾಜಿಕ ನ್ಯಾಯಕ್ಕಾಗಿ ಈ ಆಂದೋಲನ ಹಮ್ಮಿಕೊಳ್ಳಲಾಗಿದೆ’ ಎಂದು ಬಿಎಸ್‌ಪಿ ರಾಜ್ಯ ಘಟಕದ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ ತಿಳಿಸಿದ್ದಾರೆ.

ಬಿಜೆಪಿ ಮುಖಂಡ ಮಣಿಕಂಠ ಮೇಲೆ ಹಲ್ಲೆ: ಗಂಭೀರ ಗಾಯ

ಮದ್ಯದ ಬಾಟಲಿಯಿಂದ ಕಾರಿನ ಮೇಲೆ ದಾಳಿ: ಖಂಡನೆ

ಪ್ರಜಾವಾಣಿ ವಾರ್ತೆ

ಚಿತ್ತಾಪುರ (ಕಲಬುರಗಿ ಜಿಲ್ಲೆ): ವಿಧಾನಸಭಾ ಚುನಾವಣೆಯಲ್ಲಿ ಚಿತ್ತಾಪುರ ಕ್ಷೇತ್ರದಿಂದ ಸ್ಪರ್ಧಿಸಿದ್ದ ಬಿಜೆಪಿಯ ಮಣಿಕಂಠ ರಾಠೋಡ ಮತ್ತು ಅವರ ಅಪ್ಪನ ಮೇಲೆ ಅಪರಿಚಿತರ ಗುಂಪು ಶನಿವಾರ ತಡರಾತ್ರಿ ಹಲ್ಲೆ ಮಾಡಿ, ತೀವ್ರವಾಗಿ ಗಾಯಗೊಳಿಸಿ ಪರಾರಿಯಾಗಿದೆ.

ಮಾಲಗತ್ತಿ ಸಮೀಪದ ಫಾರ್ಮ್‌ಹೌಸ್‌ನಿಂದ ಕಲಬುರಿಗೆಗೆ ತೆರಳುತ್ತಿದ್ದಾಗ ಕಾಗಿಣಾ ನದಿ ಸೇತುವೆಯ ಸಮೀಪ ಸುಮಾರು 8 ಜನರಿದ್ದ ತಂಡ ನಾಲ್ಕು ಬೈಕ್‌ಗಳ ಮೇಲೆ ಬಂದರು. ಕಾರಿನ ಮೇಲೆ ಮಾರಕಾಸ್ತ್ರಗಳು, ಮದ್ಯದ ಬಾಟಲಿಯಿಂದ ದಾಳಿ ಮಾಡಿದರು. ಬಾಟಲಿಯ ಗಾಜಿನ ಚೂರುಗಳು ತಗುಲಿ ಮಣಿಕಂಠ ಅವರ ಎಡ ಕಿವಿ, ಎಡಗೈ ಹಾಗೂ ಅಪ್ಪ ಶ್ರೀಕಾಂತ ತಲೆಗೂ ಗಾಯವಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಇಬ್ಬರನ್ನೂ ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಮಣಿಕಂಠ ಮೇಲೆ ದಾಳಿ ಮಾಡಿ, ಕೊಲೆಗೆ ಯತ್ನಿಸಿದ ಆರೋಪದಡಿ ದುಷ್ಕರ್ಮಿಗಳ ವಿರುದ್ಧ ಶಹಾಬಾದ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

‘ನ.15ರಂದು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರು ಸೇರಿ ಕೆಲವು ಅಧಿಕಾರಿಗಳ ವಿರುದ್ಧ ಲೋಕಾಯುಕ್ತರಿಗೆ ದೂರು ನೀಡಿದ್ದೆ. ಅವರ ಹಗರಣಗಳನ್ನು ಬಯಲಿಗೆ ತರುತ್ತಿರುವುದರಿಂದ ನನ್ನ ಕೊಲೆಗೆ ಯತ್ನಿಸಿದ್ದಾರೆ’ ಎಂದು ಮಣಿಕಂಠ ಆರೋಪಿಸಿದ್ದಾರೆ.

ಹಲ್ಲೆಯಿಂದ ಗಾಯಗೊಂಡ ಬಿಜೆಪಿ ಮುಖಂಡ ಮಣಿಕಂಠ ರಾಠೋಡ್‌ಗೆ ವೈದ್ಯರು ಚಿಕಿತ್ಸೆ ನೀಡಿದರು

ವಿಜಯೇಂದ್ರ ಖಂಡನೆ

‘ಮಣಿಕಂಠ ಅವರ ಮೇಲೆ ಮಾರಣಾಂತಿಕ ಹಲ್ಲೆಯಾಗಿರುವುದು ಖಂಡನೀಯ. ದುಷ್ಕೃತ್ಯ ಎಸಗಿರುವ ಕಿಡಿಗೇಡಿಗಳನ್ನು ತಕ್ಷಣ ಬಂಧಿಸಿ ಕಠಿಣ ಕ್ರಮ ಕೈಗೊಳ್ಳಬೇಕು’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆಗ್ರಹಿಸಿದ್ದಾರೆ.

‘ಜೀವಕ್ಕೆ ಹಾನಿಯಾದರೆ ಪ್ರಿಯಾಂಕ್ ಹೊಣೆ’

ಬೆಂಗಳೂರು: ‘ನಮ್ಮ ಪಕ್ಷದ ನಾಯಕ ಮಣಿಕಂಠ ರಾಠೋಡ್ ಅವರ ಜೀವಕ್ಕೇನಾದರೂ ಹಾನಿಯಾದರೆ ಅದಕ್ಕೆ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ಕಾಂಗ್ರೆಸ್ ಸರ್ಕಾರವೇ ನೇರ ಹೊಣೆ’ ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎನ್‌.ರವಿಕುಮಾರ್ ಅವರು ಹೇಳಿದ್ದಾರೆ.

‘ಮಣಿಕಂಠ ಅವರ ಮೇಲೆ ಹಲ್ಲೆ ಖಂಡನೀಯ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ದಿನದಿಂದ ಇಲ್ಲಿಯವರೆಗೂ ಸಚಿವ ಪ್ರಿಯಾಂಕ್ ಖರ್ಗೆ, ಮಣಿಕಂಠ ರಾಠೋಡ್ ಅವರನ್ನು ಇನ್ನಿಲ್ಲದಂತೆ ಟಾರ್ಗೆಟ್ ಮಾಡಿ ಕಿರುಕುಳ ನೀಡುತ್ತಿದ್ದಾರೆ’ ಎಂದು ಅವರು ದೂರಿದ್ದಾರೆ.

‘ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಪ್ರತಿದಿನ ನಮ್ಮ ಪಕ್ಷದ ಕಾರ್ಯಕರ್ತರ ಮೇಲೆ ದಬ್ಬಾಳಿಕೆ, ಹಲ್ಲೆ, ಸುಳ್ಳು ಮೊಕದ್ದಮೆ, ಬೆದರಿಕೆ ಪ್ರಕರಣಗಳು ನಡೆಯುತ್ತಿವೆ. ಕಾರ್ಯಕರ್ತರ ಕೊಲೆಯೂ ಆಗಿವೆ’ ಎಂದೂ ಎನ್‌. ರವಿಕುಮಾರ್ ಹೇಳಿದ್ದಾರೆ.

ಸಾಂಬಾರಿನ ಪಾತ್ರೆಗೆ ಬಿದ್ದಿದ್ದ ಮಗು ಸಾವು

ಪ್ರಜಾವಾಣಿ ವಾರ್ತೆ

ಮಹಾಂತಮ್ಮ

ಕಲಬುರಗಿ: ‘ಬಿಸಿಯೂಟ’ದ ಸಾಂಬಾರು ಪಾತ್ರೆಗೆ ಬಿದ್ದು ತೀವ್ರವಾಗಿ ಗಾಯಗೊಂಡು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಾಗಿದ್ದ ವಿದ್ಯಾರ್ಥಿನಿ ಚಿಕಿತ್ಸೆಗೆ ಸ್ಪಂದಿಸದೆ ಭಾನುವಾರ ಮೃತಪಟ್ಟಿದ್ದಾಳೆ.

ಅಫಜಲಪುರ ತಾಲ್ಲೂಕಿನ ಚಿಣಮಗೇರಾ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 2ನೇ ತರಗತಿ ವಿದ್ಯಾರ್ಥಿನಿ ಮಹಾಂತಮ್ಮ ಶಿವಪ್ಪ ತಳವಾರ (8) ಮೃತಳು.

ನವೆಂಬರ್ 16ರಂದು ಸಾಂಬಾರು ಪಾತ್ರೆಗೆ ಮಹಾಂತಮ್ಮ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದಳು. ಕಲಬುರಗಿಯ ಜಿಮ್ಸ್‌ಗೆ ದಾಖಲಿಸಲಾಗಿತ್ತು. ಶುಕ್ರವಾರ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಭಾನುವಾರ ಬೆಳಿಗ್ಗೆ ಮೃತಪಟ್ಟಿದ್ದಾಳೆ.

ಶಾಲೆಯ ಅಡುಗೆ ಸಿಬ್ಬಂದಿ, ಮುಖ್ಯ ಶಿಕ್ಷಕ, ಅಕ್ಷರ ದಾಸೋಹದ ತಾಲ್ಲೂಕು ಸಹಾಯಕ ನಿರ್ದೇಶಕ, ಕ್ಷೇತ್ರ ಶಿಕ್ಷಣಾಧಿಕಾರಿ, ತಾಲ್ಲೂಕು ಇಒ, ಡಿಡಿಪಿಐ ಮತ್ತು ಮಧ್ಯಾಹ್ನ ಬಿಸಿಯೂಟದ ಜಿಲ್ಲಾ ಪಂಚಾಯಿತಿ ಅಧಿಕಾರಿ ವಿರುದ್ಧ ದೇವಲ ಗಾಣಗಾಪುರ ಪೊಲೀಸ್ ಠಾಣೆಯಲ್ಲಿ ಮೃತಳ ತಾಯಿ ಸಂಗೀತಾ ದೂರು ದಾಖಲಿಸಿದ್ದಾರೆ.

ಶಿಕ್ಷಕರು ಮತ್ತು ಸಿಬ್ಬಂದಿ ನಿರ್ಲಕ್ಷ್ಯ ವಹಿಸಿದ್ದಾರೆ. ಅಡುಗೆ ಕೋಣೆಯಲ್ಲಿ ಇರಬೇಕಿದ್ದ ಸುಮಾರು 30 ಲೀಟರ್ ಸಾಮರ್ಥ್ಯದ ಸಾಂಬಾರು ಪಾತ್ರೆ ಹೊರಗಡೆ ಇರಿಸಿದ್ದಾರೆ. ಹಸಿವಿನಿಂದಾಗಿ ಹಲವು ಮಕ್ಕಳು ಸಾಂಬಾರು ಪಾತ್ರೆ ಬಳಿ ಹೋಗಿದ್ದಾರೆ. ಈ ವೇಳೆ ನೂಕುನುಗ್ಗಲಾಗಿ ನನ್ನ ಮಗಳು ಬಿಸಿಯಾಗಿದ್ದ ಸಾಂಬಾರು ಪಾತ್ರೆಗೆ ಬಿದ್ದಿದ್ದಾಳೆ. ದೇಹದ ಮೇಲೆ ಸುಟ್ಟ ಗಾಯಗಳಾಗಿ ಮೃತಪಟ್ಟಿದ್ದಾಳೆ ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

ಈ ಪ್ರಕರಣ ಸಂಬಂಧ ಈಗಾಗಲೇ ಮುಖ್ಯ ಶಿಕ್ಷಕಿ ಲಾಲಬಿ ನದಾಫ, ಸಹ ಶಿಕ್ಷಕ ರಾಜು ಚವ್ಹಾಣ ಅವರನ್ನು ಅಮಾನತು ಮಾಡಲಾಗಿದೆ. ಮುಖ್ಯ ಅಡುಗೆ ಸಿಬ್ಬಂದಿ ಕಸ್ತೂರಿಬಾಯಿ ಎಂ. ತಳಕೇರಿ ಅವರನ್ನು ಸೇವೆಯಿಂದ ವಜಾ ಮಾಡಲಾಗಿದೆ.

ತಡವಾಗಿ ಭೇಟಿ

ಅವಘಡ ನಡೆದು ಎರಡು ದಿನ ಕಳೆದರೂ ಜಿಲ್ಲಾ ಮಕ್ಕಳ ರಕ್ಷಣಾ ಆಯೋಗದ ಅಧಿಕಾರಿಗಳು ಶಾಲೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿರಲಿಲ್ಲ. ಜಿಲ್ಲಾಧಿಕಾರಿಗಳು ತರಾಟೆಗೆ ತೆಗೆದುಕೊಂಡ ಬಳಿಕ ನ.18ರಂದು ತೆರಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

230 ವಿದ್ಯಾರ್ಥಿಗಳಿಗೆ ಗಾಳಿ– ಬೆಳಕಿನ ವ್ಯವಸ್ಥೆಯಿಲ್ಲ

ಎಪಿಎಂಸಿ ಗೋದಾಮಿನಲ್ಲಿ ಶಾಲೆ

• ಚಾಂದ್ ಬಾಷ

ತೆಕ್ಕಲಕೋಟೆ (ಬಳ್ಳಾರಿ ಜಿಲ್ಲೆ): ಕರೂರು ಗ್ರಾಮದ ಡಾ.ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಯು ಏಳು ವರ್ಷಗಳಿಂದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ (ಎಪಿಎಂಸಿ) ಗೋದಾಮಿನಲ್ಲಿ ನಡೆಯುತ್ತಿದೆ. ಆದರೆ ಯಾವುದೇ ಮೂಲಸೌಕರ್ಯಗಳನ್ನು ಕಲ್ಪಿಸಿಲ್ಲ.

ಎಪಿಎಂಸಿ ಕಚೇರಿಯು ಅಡುಗೆ ಕೋಣೆಯಾಗಿದೆ. ಏಳು ಮಳಿಗೆಗಳು ತರಗತಿಗಳಿಗೆ ಬಳಕೆಯಾಗುತ್ತಿವೆ. ಮೂರು ಗೋದಾಮುಗಳಲ್ಲಿ ವಿದ್ಯಾರ್ಥಿಗಳು ಮಲಗುತ್ತಾರೆ.

‘ಶಾಲೆ ಕಟ್ಟಡ ನಿರ್ಮಾಣ ಕಾಮಗಾರಿ 2019ರಲ್ಲಿ ಆರಂಭಗೊಂಡರೂ ಪೂರ್ಣಗೊಂಡಿಲ್ಲ. ಕಟ್ಟಡ ನಿರ್ಮಾಣವಾದ ಕೂಡಲೇ ಅಲ್ಲಿ ವ್ಯವಸ್ಥೆ ಮಾಡುವುದಾಗಿ ಜುಲೈ ತಿಂಗಳಲ್ಲಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಹೇಳಿದ್ದರು. ಆದರೆ, ಪರಿಸ್ಥಿತಿ ಮಾತ್ರ ಬದಲಾಗಿಲ್ಲ’ ಎಂದು ಗ್ರಾಮಸ್ಥರು ಆರೋಪಿಸಿದರು.

‘ಬಳ್ಳಾರಿ-ವಿಜಯನಗರ ಜಿಲ್ಲೆಯ 6 ರಿಂದ 10ನೇ ತರಗತಿಯ ಒಟ್ಟು 230 ವಿದ್ಯಾರ್ಥಿಗಳು ಇಲ್ಲಿ ಕಲಿಯುತ್ತಿದ್ದು, ಅವರಿಗೆ ಅಗತ್ಯ ಸೌಲಭ್ಯಗಳಿಲ್ಲ. ಪಾಠ ಆಲಿಸಲು ಅಷ್ಟೇ ಅಲ್ಲ, ಇರಲು ಮತ್ತು ಮಲಗಲು ಕೂಡ ಜಾಗದ ಕೊರತೆ ಇದೆ. ಮಳಿಗೆಗಳಲ್ಲಿ ಬೆಳಕು ಮತ್ತು ಗಾಳಿ ವ್ಯವಸ್ಥೆಯಿಲ್ಲ. ಆವರಣದಲ್ಲಿ ಸೊಳ್ಳೆಗಳ ಕಾಟವೂ ಇದೆ’ ಎಂದು ಅವರು ಹೇಳಿದರು.

‘ಮಳಿಗೆ, ಗೋದಾಮಿನಲ್ಲಿ ಕಿಟಕಿಗಳಿಲ್ಲ. ಗಾಳಿ, ಬೆಳಕು ಇಲ್ಲ. ಆವರಣದಲ್ಲಿ ರೈತರು ಆಯಾ ಋತುವಿನಲ್ಲಿ ಹಾಕುವ ದವಸ ಧಾನ್ಯದ ಘಾಟಿನಿಂದಲೂ ತುಂಬಾ ಸಮಸ್ಯೆಯಾಗುತ್ತದೆ’ ಎಂದು ವಿದ್ಯಾರ್ಥಿಗಳು ದೂರಿದರು.

‘ಐದು ಶೌಚಾಲಯಗಳಿವೆ. ಸ್ನಾನ, ಶೌಚಕ್ಕೆ ತುಂಬಾ ಹೊತ್ತು ಸಾಲಿನಲ್ಲಿ ಕಾಯಬೇಕು. ವಿದ್ಯುತ್ ಸಮಸ್ಯೆಯಿದ್ದು, ಜನರೇಟರ್ ಇಲ್ಲ. ಅನಿವಾರ್ಯವಾಗಿ ಶೌಚಕ್ಕೆಂದು ಬಯಲಿಗೆ ಹೋದರೆ, ಹಾವು ಮತ್ತು ಚೇಳು ಕಚ್ಚುವ ಭಯವಿದೆ’ ಎಂದರು.

ತೆಕ್ಕಲಕೋಟೆ ಸಮೀಪದ ಕರೂರು ಗ್ರಾಮದ ಎಪಿಎಂಸಿ ವಾಣಿಜ್ಯ ಮಳಿಗೆಗಳಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಯ ತರಗತಿಗಳು ನಡೆಯುತ್ತಿವೆ

ಶಾಲೆಯ ಸಮಸ್ಯೆಗಳನ್ನು ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಶಾಲೆ ಸ್ಥಳಾಂತರಕ್ಕೆ ಕ್ರಮ ಕೈಗೊಳ್ಳುವುದಾಗಿ ಸಮಾಜ ಕಲ್ಯಾಣ ಇಲಾಖೆ ಜಿಲ್ಲಾ ಉಪನಿರ್ದೇಶಕರು ತಿಳಿಸಿದ್ದಾರೆ

ಪಿ. ಖಾಸಿಂ ಸಾಹೇಬ್, ಮುಖ್ಯ ಶಿಕ್ಷಕ, ಡಾ. ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ, ಕರೂರು

ಮಾನವೀಯ, ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಎಪಿಎಂಸಿ ಕಟ್ಟಡವನ್ನು ಶಾಲೆ ನಡೆಸಲು ಉಚಿತವಾಗಿ ನೀಡಿದ್ದೇವೆ. ನಮ್ಮಿಂದ ಸಾಧ್ಯವಾದಷ್ಟು ನೆರವು ನೀಡಲು ಪ್ರಯತ್ನಿಸಿದ್ದೇವೆ

ಎಸ್‌.ಶ್ಯಾಮ್, ಪ್ರಭಾರ ಕಾರ್ಯದರ್ಶಿ, ಎಪಿಎಂಸಿ, ಸಿರುಗುಪ್ಪ

ದಸರೆಗೆ ಕಟ್ಟಡ ಕಾಮಗಾರಿ ಪೂರ್ಣಗೊಳಿಸಲು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ಕ್ರೈಸ್ಟ್) ಎಂಜಿನಿಯರ್‌ಗೆ ತಿಳಿಸಲಾಗಿತ್ತು. ಈ ತಿಂಗಳಾಂತ್ಯಕ್ಕೆ ಕಾಮಗಾರಿ ಪೂರ್ಣಗೊಳ್ಳುವ ವಿಶ್ವಾಸ ಇದೆ

ಸತೀಶ್, ಉಪನಿರ್ದೇಶಕ, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ಬಳ್ಳಾರಿ

ಕಿಯೋನಿಕ್ಸ್: ಒಂಬತ್ತು ದಿನದ ಹಿಂದೆಯೇ ವರ್ಗಾವಣೆ ಆದೇಶ

ವರ್ಗವಾದರೂ ಕದಲದ ಅಧಿಕಾರಿಗಳು!

• ವಿ.ಎಸ್. ಸುಬ್ರಹ್ಮಣ್ಯ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕರ್ನಾಟಕ ವಿದ್ಯುನ್ಮಾನ ಅಭಿವೃದ್ಧಿ ನಿಗಮದ (ಕಿಯೋನಿಕ್ಸ್) ಕೇಂದ್ರ ಕಚೇರಿಯ ಆಯಕಟ್ಟಿನ ಸ್ಥಾನಗಳಲ್ಲಿರುವ ಮೂವರು ವ್ಯವಸ್ಥಾಪಕರು ವರ್ಗಾವಣೆ ಆದೇಶ ಹೊರಡಿಸಿ ಒಂಬತ್ತು ದಿನ ಕಳೆದರೂ ಹುದ್ದೆ ಬಿಟ್ಟು ಕದಲಿಲ್ಲ.

ಕಿಯೋನಿಕ್ಸ್‌ನ ವಾಣಿಜ್ಯ-1 ವಿಭಾಗದ ವ್ಯವಸ್ಥಾಪಕ ವಿಜಯದೇವ ಅವರನ್ನು ಹುಬ್ಬಳ್ಳಿ ಮಾಹಿತಿ ತಂತ್ರಜ್ಞಾನ (ಐ.ಟಿ) ಪಾರ್ಕ್‌ಗೆ ಹಾಗೂ ವಾಣಿಜ್ಯ, ಹಣಕಾಸು ಮತ್ತು ಲೆಕ್ಕಪತ್ರ ಶಾಖೆ, ಸೌಕರ್ಯ, ಮಾನವ ಸಂಪನ್ಮೂಲ ಮತ್ತು ಕಾನೂನು ವಿಭಾಗಗಳ ಜವಾಬ್ದಾರಿ ಹೊಂದಿದ್ದ ಮಾರುತಿ ಎಂ. ಅವರನ್ನು ಶಿವಮೊಗ್ಗ ಐ.ಟಿ ಪಾರ್ಕ್‌ಗೆ ವರ್ಗಾವಣೆ ಮಾಡಲಾಗಿತ್ತು.

ತಾಂತ್ರಿಕ ಶಿಕ್ಷಣ ಇಲಾಖೆಯಿಂದ ನಿಯೋಜನೆ ಮೇಲೆ ಕಿಯೋನಿಕ್ಸ್‌ನ ವಾಣಿಜ್ಯ-2 ವ್ಯವಸ್ಥಾಪಕರ ಹುದ್ದೆಯಲ್ಲಿ ದೀರ್ಘ ಕಾಲದಿಂದ ಇರುವ ಪಿ.ಎಸ್. ಪವಿತ್ರಾ ಅವರ ಸೇವೆಯನ್ನು ಮಾತೃ ಇಲಾಖೆಗೆ ಹಿಂದಿರುಗಿಸಲು ಆದೇಶ ಹೊರಡಿಸಲಾಗಿತ್ತು. ಮೂರೂ ಮಂದಿಯನ್ನು ವರ್ಗಾವಣೆಗೊಳಿಸಿ ನವೆಂಬರ್ 10ರಂದು ಆದೇಶ ಹೊರಡಿಸಲಾಗಿತ್ತು. ಎಲ್ಲರೂ ಹಾಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳಲ್ಲೇ ಮುಂದುವರಿದಿದ್ದಾರೆ.

ಬಿಕ್ಕಟ್ಟಿನಲ್ಲಿರುವ ನಿಗಮ: ಟೆಂಡರ್ ಪ್ರಕ್ರಿಯೆ ಮತ್ತು ಬಿಲ್ ಪಾವತಿಯಲ್ಲಿ ನಿಯಮ ಉಲ್ಲಂಘನೆ ನಡೆದಿದೆ ಎಂದು ಅಕೌಂಟೆಂಟ್ ಜನರಲ್ ವರದಿ ನೀಡಿದ್ದರು. ಬಾಕಿ ಬಿಲ್ ಪಾವತಿಗೆ ಕಿಯೋನಿಕ್ಸ್ ಅಧಿಕಾರಿಗಳು ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ ಎಂದು ಕಿಯೋನಿಕ್ಸ್ ವೆಂಡರ್‌ದಾರರ ವೆಲ್ಫೇರ್ ಅಸೋಸಿಯೇಷನ್ ಆರೋಪಿಸಿತ್ತು. ಇದರಿಂದಾಗಿ ನಿಗಮದಲ್ಲಿ ಅಧಿಕಾರಿಗಳು ಮತ್ತು ವೆಂಡರ್‌ದಾರರ ಮಧ್ಯೆ ಸಂಘರ್ಷದ ವಾತಾವರಣ ಸೃಷ್ಟಿಯಾಗಿತ್ತು.

ನಿಗಮದ ವ್ಯವಸ್ಥಾಪಕ ನಿರ್ದೇಶಕ ಸಂಗಪ್ಪ ಅವರು ನವೆಂಬರ್ 7ರಿಂದ ಒಂದು ತಿಂಗಳ ಕಾಲ ರಜೆಯ ಮೇಲೆ ತೆರಳಿದ್ದಾರೆ. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ (ಕೆಎಸ್‌ಎಫ್‌ಸಿ) ವ್ಯವಸ್ಥಾಪಕ ನಿರ್ದೇಶಕ ಉಜ್ವಲ್ ಕುಮಾರ್ ಘೋಷ್ ಅವರಿಗೆ ಕಿಯೋನಿಕ್ಸ್ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯ ಪ್ರಭಾರವನ್ನು ವಹಿಸಲಾಗಿತ್ತು.

ನಿಗಮದಲ್ಲಿ ಟೆಂಡರ್ ಪ್ರಕ್ರಿಯೆ, ಖರೀದಿ ಮತ್ತು ಪೂರೈಕೆ ವಹಿವಾಟು ಸೇರಿದಂತೆ ಪ್ರಮುಖ ಕೆಲಸಗಳನ್ನು ನಿರ್ವಹಿಸುತ್ತಿರುವ ಮೂವರು ವ್ಯವಸ್ಥಾಪಕರನ್ನು ಕೇಂದ್ರ ಕಚೇರಿಯಿಂದ ಹೊರಕ್ಕೆ ವರ್ಗಾವಣೆ ಮಾಡುವಂತೆ ಕಿಯೋನಿಕ್ಸ್ ಅಧ್ಯಕ್ಷರೂ ಆಗಿರುವ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ನಿರ್ದೇಶನ ನೀಡಿದ್ದರು. ಬಳಿಕ ಮೂವರು ವ್ಯವಸ್ಥಾಪಕರನ್ನು ಸಂಸ್ಥೆಯ ಕೇಂದ್ರ ಕಚೇರಿಯಿಂದ ವರ್ಗಾವಣೆ ಮಾಡಿ ವ್ಯವಸ್ಥಾಪಕ ನಿರ್ದೇಶಕರು ಆದೇಶ ಹೊರಡಿಸಿದ್ದರು.

‘ವರ್ಗಾವಣೆ ಆದೇಶದಲ್ಲಿ ಸ್ಪಷ್ಟತೆ ಇಲ್ಲ. ನಾವು ಯಾರಿಗೆ ಅಧಿಕಾರ ವಹಿಸಿಕೊಡಬೇಕು ಎಂಬ ಅಂಶ ಆದೇಶದಲ್ಲಿಲ್ಲ. ಈ ಕಾರಣದಿಂದ ಮೂವರೂ ಅದೇ ಹುದ್ದೆಗಳಲ್ಲಿ ಮುಂದುವರಿದಿದ್ದೇವೆ’ ಎಂದು ಮಾರುತಿ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

‘ಆದೇಶ ಪಾಲನೆ ಕಡ್ಡಾಯ’

‘ಕಿಯೋನಿಕ್ಸ್‌ನಲ್ಲಿ ಇರುವ ಲೋಪಗಳನ್ನು ಸರಿಪಡಿಸುವುದಕ್ಕಾಗಿ ಕೆಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಮೂವರು ವ್ಯವಸ್ಥಾಪಕರ ವರ್ಗಾವಣೆಯೂ ಅದರಲ್ಲಿ ಸೇರಿದೆ. ವರ್ಗಾವಣೆ ಆದೇಶ ಹೊರಡಿಸಿದ ಬಳಿಕ ಅಧಿಕಾರಿಗಳು ಅದನ್ನು ಪಾಲಿಸುವುದು ಕಡ್ಡಾಯ’ ಎಂದು ಸಚಿವ ಪ್ರಿಯಾಂಕ್ ಖರ್ಗೆ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಸೋಮವಾರ, ನವೆಂಬರ್ 20, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 320 | ಪುಟ 12
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಸದಾ ಕತ್ತು ತಗ್ಗಿಸಿ, ಮೊಬೈಲ್ ಫೋನಿನ ಮೇಲೆ ಬೆರಳಾಡಿಸುವ ಗೀಳು ನಿಮಗಿದೆಯೇ? ಪರಿಶೀಲಿಸುವುದು ಹೀಗೆ...

ಇಂದಿನಿಂದ ಪಣಜಿ ವಿಶ್ವ ಸಿನಿಮೋತ್ಸವ 9
ಇಂದಿರಾ ಜನ್ಮದಿನ ಕಾರ್ಯಕ್ರಮದಲ್ಲಿ ಡಿ.ಕೆ. ಶಿವಕುಮಾರ್ ವ್ಯಂಗ್ಯ
ಆಳ-ಅಗಲ
ಯುಪಿಐ: ವಿದೇಶಿ ಕಂಪನಿಗಳದ್ದೇ ಪಾರಮ್ಯ
ಅಲ್ ಶಿಫಾ ಈಗ 'ಸಾವಿನ ವಲಯ': ಡಬ್ಲ್ಯುಎಚ್‌ಒ 9
ಕಾಂಗ್ರೆಸ್ 'ಗ್ಯಾರಂಟಿ' ಕದ್ದು ಮೋದಿ ಪ್ರಚಾರ 4

ಒಳ ಪುಟಗಳು

ಶೆನಿಸ್ ಪಾಲಾಸಿಯಸ್ 2023ರ ಭುವನ ಸುಂದರಿ 8

'ಲಿಂಗತ್ವ ಅಲ್ಪಸಂಖ್ಯಾತರಿಗೆ ಮೀಸಲು ಅಗತ್ಯ' 4

ಕ್ರಿಕೆಟ್ ವಿಶ್ವಕಪ್ ಭಾರತ 2023

ಫಲಿಸದ ಕೋಟ್ಯಂತರ ಭಾರತೀಯರ ಪ್ರಾರ್ಥನೆ

ಆಸ್ಟ್ರೇಲಿಯಾಕ್ಕೆ 6ನೇ ಬಾರಿ ಕಿರೀಟ

ಭಾರತ

240 (50 ಓವರ್)

ವಿರಾಟ್ ಕೊಹ್ಲಿ	ಕೆ.ಎಲ್.ರಾಹುಲ್
54	66

- ಮೂರನೇ ಪ್ರಶಸ್ತಿ ಗೆಲ್ಲುವ ಭಾರತದ ಕನಸು ಭಗ್ನ
- ವಿರಾಟ್ ಕೊಹ್ಲಿಗೆ ಟೂರ್ನಿಯ ಶ್ರೇಷ್ಠ ಆಟಗಾರ ಗೌರವ

ಆಸ್ಟ್ರೇಲಿಯಾ

4ಕ್ಕೆ 241 (43 ಓವರ್)

ಟ್ರಾವಿಸ್ ಹೆಡ್ (ಪಂದ್ಯಶ್ರೇಷ್ಠ)

137

- ಎಸೆತ 120
- ಬೌಂಡರಿ 15
- ಸಿಕ್ಸರ್ 4

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಕೋಟ್ಯಂತರ ಭಾರತೀಯರ ಪ್ರಾರ್ಥನೆಗಳು ಫಲಿಸಲಿಲ್ಲ. ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಕಿಕ್ಕಿರಿದು ಸೇರಿದ್ದ ಪ್ರೇಕ್ಷಕರು, ಆಸ್ಟ್ರೇಲಿಯಾ ಪ್ರಾಬಲ್ಯದ ಎದುರು ಫೈನಲ್ ಪಂದ್ಯದ ಬಹುತೇಕ ಅವಧಿಯಲ್ಲಿ ಮೌನವಾಗಿ ಇರಬೇಕಾಯಿತು. ಅಜೇಯವಾಗಿದ್ದ ಭಾರತ ಭಾನುವಾರ ನಡೆದ ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಆರು ವಿಕೆಟ್‌ಗಳಿಂದ ಸೋತು ನಿರಾಸೆ ಅನುಭವಿಸಿತು.

ಆರಂಭ ಆಟಗಾರ ಟ್ರಾವಿಸ್ ಹೆಡ್ ಟೂರ್ನಿಯ ಎರಡನೇ ಶತಕ (137, 120 ಎಸೆತ) ಬಾರಿಸಿ ಭಾರತಕ್ಕೆ 'ತಲೆನೋವು' ಆದರು. ಮಾರ್ನಸ್ ಲಾಬುಷೇನ್ (ಔಟಾಗದೇ 58) ಜೊತೆ ಮೂರನೇ ವಿಕೆಟ್‌ಗೆ 192 ರನ್ ಸೇರಿಸಿದರು. ಭಾರತ ನಿಗದಿಪಡಿಸಿದ 241 ರನ್‌ಗಳ ಗುರಿಯನ್ನು ಆಸ್ಟ್ರೇಲಿಯಾ ಅಂತಿಮವಾಗಿ, ಇನ್ನೂ 42 ಎಸೆತಗಳಿರುವಂತೆ ಮೂರು ವಿಕೆಟ್ ನಷ್ಟದಲ್ಲಿ ಸುಲಭವಾಗಿ ದಾಟಿತು.

ಆಸ್ಟ್ರೇಲಿಯಾ ಆರನೇ ಬಾರಿ ವಿಶ್ವಕಪ್ ಎತ್ತಿ ಹಿಡಿಯಿತು. ಲೀಗ್‌ನಲ್ಲಿ ಒಂಬತ್ತು ಪಂದ್ಯ ಮತ್ತು ಸೆಮಿಫೈನಲ್ ಪಂದ್ಯ ಗೆದ್ದು ಯಶಸ್ಸಿನ ಯಾತ್ರೆ ನಡೆಸಿದ್ದ ಭಾರತ ಫೈನಲ್‌ನಲ್ಲಿ ಸಪ್ಪೆ ಎನಿಸಿತು.

ಭಾರತ ತಂಡಕ್ಕೆ ನಾಯಕ ರೋಹಿತ್ ಶರ್ಮಾ (47) ಬಿರುಸಿನ ಆರಂಭ ನೀಡಿದರೂ, 81 ರನ್‌ಗಳಾಗುವಷ್ಟರಲ್ಲಿ ಮೂರು ವಿಕೆಟ್‌ಗಳು ಬಿದ್ದವು. ನಂತರ ಭಾರತದ ಬ್ಯಾಟರ್‌ಗಳು ಈ ಪಿಚ್‌ನಲ್ಲಿ ರನ್ ವೇಗ ಹೆಚ್ಚಿಸಲು ತಿಣುಕಾಡಿದರು. ಆಸ್ಟ್ರೇಲಿಯಾ 47 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡು ಅಪಾಯದಲ್ಲಿತ್ತು. ಕ್ರಮೇಣ, ಹೊನಲು ಬೆಳಕಿನಲ್ಲಿ ಪಿಚ್ ಕೂಡ ಬ್ಯಾಟರ್‌ಗಳಿಗೆ ನೆರವಾಗುತ್ತಿದ್ದಂತೆ ಸಲೀಸಾಗಿ ಆಡಿದ ಹೆಡ್ ಮತ್ತು ಅನುಭವಿ ಲಾಬುಷೇನ್ ತಂಡವನ್ನು ಗೆಲ್ಲಿಸಿದರು.

10

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕಂಬದಿಂದ ತುಂಡಾಗಿ ಪಾದಚಾರಿ ಮಾರ್ಗದಲ್ಲಿ ಬಿದ್ದಿದ್ದ ತಂತಿ

ವಿದ್ಯುತ್ ತಂತಿ ತುಳಿದು ತಾಯಿ – ಮಗು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂಬದಿಂದ ತುಂಡಾಗಿ ಪಾದಚಾರಿ ಮಾರ್ಗದಲ್ಲಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದು ತಾಯಿ–ಮಗು ಮೃತಪಟ್ಟಿದ್ದು, ನಿರ್ಲಕ್ಷ್ಯದ ಆರೋಪದಡಿ ಬೆಸ್ಕಾಂನ ಐವರು ನೌಕರರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

'ಹೋಪ್ ಫಾರ್ಮ್ ಜಂಕ್ಷನ್ ಬಳಿಯ ಎ.ಕೆ. ಗೋಪಾಲ್ ಕಾಲೊನಿ ನಿವಾಸಿ ಸೌಂದರ್ಯ (23) ಹಾಗೂ ಅವರ 9 ತಿಂಗಳ ಹೆಣ್ಣು ಮಗು ಸುವಿಕ್ಷಾ ಲಿಯ ಮೃತರು. ನಿರ್ಲಕ್ಷ್ಯದಿಂದಾಗಿ ಇವರಿಬ್ಬರ ಸಾವಿಗೆ ಕಾರಣವಾಗಿರುವ ಆರೋಪದಡಿ ಬೆಸ್ಕಾಂನ ಐವರು ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

ಸೌಂದರ್ಯ



ಸುವಿಕ್ಷಾ ಲಿಯ

ಪತಿ ಮನೆಯಿಂದ ಬಂದಿದ್ದ ಬಾಣಂತಿ: 'ಸೌಂದರ್ಯ ಅವರನ್ನು ಕೆಲ ವರ್ಷಗಳ ಹಿಂದೆಯಷ್ಟೇ ಚೆನ್ನೈನ ವ್ಯಕ್ತಿಯೊಬ್ಬರಿಗೆ ಮದುವೆ ಮಾಡಿಕೊಡಲಾಗಿತ್ತು. ಸೌಂದರ್ಯ ಹಾಗೂ ಪತಿ, ತಮಿಳುನಾಡಿನಲ್ಲಿ ನೆಲೆಸಿದ್ದರು. ತಾಯಿಯನ್ನು ನೋಡಲೆಂದು ಪತಿ ಹಾಗೂ ಮಗುವಿನ ಜೊತೆ ಸೌಂದರ್ಯ ಭಾನುವಾರ ಬೆಳಿಗ್ಗೆ ಬೆಂಗಳೂರಿಗೆ ಬಂದಿದ್ದರು' ಎಂದು ಹೇಳಿದರು.

'ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ'

ವಿದ್ಯುತ್ ತಂತಿ ತಗುಲಿ ತಾಯಿ–ಮಗು ಮೃತಪಟ್ಟಿರುವ ಘಟನೆ ನಿಜಕ್ಕೂ ಆಘಾತಕಾರಿ. ಐ.ಟಿ ಸಿಟಿಯಲ್ಲಿ ಇಂತಹ ಘಟನೆ ನಡೆಯುತ್ತಿರುವುದು ನಾಚಿಕೆಯ ಸಂಗತಿ. ಅಧಿಕಾರಿಗಳ ನಿರ್ಲಕ್ಷ್ಯವೇ ಇದಕ್ಕೆ ಕಾರಣ. ಸಂಬಂಧಿಸಿದ ಅಧಿಕಾರಿಗಳ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಒತ್ತಾಯಿಸಿದ್ದಾರೆ.

4ನೇ ಪುಟ ನೋಡಿ

ಸ್ಕೈವಾಕ್‌ಗಳಲ್ಲಿ ಲಿಫ್ಟ್ ಕಾರ್ಯಾಚರಣೆ ಕಡ್ಡಾಯ, ತ್ಯಾಜ್ಯ ಇರುವಂತಿಲ್ಲ: ಡಾ. ತ್ರಿಲೋಕ್ ಚಂದ್ರ

‘ಸೌಲಭ್ಯ, ಸ್ವಚ್ಛವಾಗಿರದಿದ್ದರೆ ಪರವಾನಗಿ ರದ್ದು’

• ಆರ್. ಮಂಜುನಾಥ್

ಬೆಂಗಳೂರು: ನಗರದಲ್ಲಿರುವ ಸ್ಕೈವಾಕ್‌ಗಳು ಸ್ವಚ್ಛವಾಗಿರಬೇಕು, ಎಲ್ಲ ಲಿಫ್ಟ್‌ಗಳು ಕಾರ್ಯನಿರ್ವಹಿಸಬೇಕು. ಇದನ್ನು ಪಾಲಿಸದಿದ್ದರೆ ಪರವಾನಗಿ ರದ್ದುಗೊಳಿಸುವುದಾಗಿ ಬಿಬಿಎಂಪಿ ನೋಟಿಸ್ ಜಾರಿ ಮಾಡಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಸ್ಕೈವಾಕ್‌ಗಳಲ್ಲಿ ಸಮಸ್ಯೆ, ಲಿಫ್ಟ್‌ಗಳು ಕಾರ್ಯನಿರ್ವಹಿಸದಿರುವುದು ಹಾಗೂ ತ್ಯಾಜ್ಯ ಸುರಿಯುವುದು ಸೇರಿದಂತೆ ಜನರ ಸಂಕಷ್ಟಗಳನ್ನು ‘ಪ್ರಜಾವಾಣಿ’ ಸರಣಿ ವರದಿಯನ್ನು ಪ್ರಕಟಿಸಿತ್ತು. ಇದಕ್ಕೆ ಸ್ಪಂದಿಸಿರುವ ಬಿಬಿಎಂಪಿ, ಸ್ಕೈವಾಕ್‌ಗಳನ್ನು ಸ್ವಚ್ಛವಾಗಿ ನಿರ್ವಹಣೆ ಮಾಡಲು ಸೂಚಿಸಿದೆ.

ನಿರ್ಮಾಣ, ಕಾರ್ಯಾಚರಣೆ, ವರ್ಗಾವಣೆ (ಬಿಒಟಿ) ಆಧಾರದಲ್ಲಿ ನಗರದಲ್ಲಿ ಬಹುತೇಕ ಸ್ಕೈವಾಕ್‌ಗಳು ನಿರ್ಮಾಣಗೊಂಡಿವೆ. ಖಾಸಗಿ ಏಜೆನ್ಸಿಗಳು ಸ್ಕೈವಾಕ್ ನಿರ್ಮಿಸಿವೆ. ಬಿಬಿಎಂಪಿಗೆ ನೆಲಬಾಡಿಗೆಯನ್ನು ವಾರ್ಷಿಕವಾಗಿ ಪಾವತಿಸುವ ಷರತ್ತಿನ ಮೇರೆಗೆ 10 ವರ್ಷದಿಂದ 30 ವರ್ಷಗಳವರೆಗೆ ಗುತ್ತಿಗೆ ನೀಡಲಾಗಿದೆ.

ನೋಟಿಸ್ ಜಾರಿ: ‘ಸ್ಕೈವಾಕ್‌ಗಳ ನಿರ್ವಹಣೆ ಗುತ್ತಿಗೆ ಹೊಂದಿರುವ ಏಜೆನ್ಸಿಗಳಿಗೆ ಈಗಾಗಲೇ ನೋಟಿಸ್ ಜಾರಿ ಮಾಡಲಾಗಿದೆ. ಗುತ್ತಿಗೆ ಷರತ್ತಿನಂತೆ ಸ್ಕೈವಾಕ್‌ಗಳನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಎಸ್ಕಲೇಟರ್ ಅಥವಾ ಲಿಫ್ಟ್‌ಗಳು ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುವುದು ಅವರದ್ದೇ ಜವಾಬ್ದಾರಿ. ಹೀಗಾಗಿ, ಸಮಸ್ಯೆ ಇರುವ ಸ್ಕೈವಾಕ್‌ಗಳನ್ನು ನಿರ್ವಹಣೆ ಮಾಡುತ್ತಿರುವ ಗುತ್ತಿಗೆದಾರರಿಗೆ ಎಚ್ಚರಿಕೆ ನೀಡಲಾಗಿದೆ. ಇನ್ನು ಮುಂದೆ ಸಮಸ್ಯೆಗಳು ಮುಂದುವರಿದರೆ ಅವರ ಗುತ್ತಿಗೆ ಅಥವಾ ಪರವಾನಗಿಯನ್ನೇ ರದ್ದು ಮಾಡಲಾಗುತ್ತದೆ’ ಎಂದು ಬಿಬಿಎಂಪಿ ಯೋಜನೆ ವಿಭಾಗ ವಿಶೇಷ ಆಯುಕ್ತ ಡಾ. ತ್ರಿಲೋಕ್ ಚಂದ್ರ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

₹2.16 ಕೋಟಿ ನೆಲಬಾಡಿಗೆ: ಬಿಬಿಎಂಪಿ ವ್ಯಾಪ್ತಿಯಲ್ಲಿ ಸ್ಕೈವಾಕ್‌ಗಳನ್ನು ಬಿಒಟಿ ಆಧಾರದಲ್ಲಿ ನಿರ್ಮಿಸಿರುವ ಏಜೆನ್ಸಿಗಳಿಗೆ ನೆಲಬಾಡಿಗೆ ನಿಗದಿ ಮಾಡಲಾಗಿದೆ. ಸ್ಕೈವಾಕ್ ಅಳತೆ ಆಧಾರದಲ್ಲಿ ಈ ಮೊತ್ತ ವಿಭಿನ್ನವಾಗಿದೆ. ಈ ಸ್ಕೈವಾಕ್‌ಗಳಿಂದ ಬಿಬಿಎಂಪಿಗೆ ವಾರ್ಷಿಕವಾಗಿ ಒಟ್ಟು ₹2.16 ಕೋಟಿ ನೆಲಬಾಡಿಗೆ ಸಂದಾಯವಾಗಬೇಕು.

ಜಾಹೀರಾತು ಶುಲ್ಕ ಬಂದಿಲ್ಲ: ‘ಸ್ಕೈವಾಕ್ ನೆಲಬಾಡಿಗೆ ಹಾಗೂ ಅದರ ಮೇಲೆ ಪ್ರದರ್ಶಿಸುವ ಜಾಹೀರಾತಿಗೆ ಶುಲ್ಕವನ್ನೂ ಏಜೆನ್ಸಿಗಳು ಬಿಬಿಎಂಪಿಗೆ ಪಾವತಿಸಬೇಕು. ಆದರೆ, ಹಲವು ವರ್ಷಗಳಿಂದ ಈ ಶುಲ್ಕವನ್ನೇ ಪಾವತಿಸಿಲ್ಲ. ಸ್ವಚ್ಛವಾಗಿಟ್ಟುಕೊಳ್ಳಬೇಕೆಂಬ ಷರತ್ತುಗಳನ್ನೂ ಪಾಲಿಸುತ್ತಿಲ್ಲ. ಈ ಬಗ್ಗೆ ನೋಟಿಸ್ ನೀಡಲಾಗಿದೆ ಎಂದು ಮಾಹಿತಿ ಹಕ್ಕು ಕಾಯ್ದೆಯಡಿ ಬಿಬಿಎಂಪಿ ಜುಲೈನಲ್ಲಿ ಮಾಹಿತಿ ನೀಡಿದೆ. ಆದರೆ, ಈವರೆಗೆ ಹಣ ಸಂಗ್ರಹ ಮಾಡುವ ಕ್ರಮವಾಗಿಲ್ಲ’ ಎಂದು ಮಾಹಿತಿ ಹಕ್ಕು ಅಧ್ಯಯನ ಕೇಂದ್ರದ ಅಮರೇಶ್ ದೂರಿದರು.

ಬಾಕಿ ವಸೂಲಿಗೆ ಕ್ರಮ: ಸ್ಕೈವಾಕ್ ನಿರ್ವಹಣೆ ಮಾಡುತ್ತಿರುವ ಏಜೆನ್ಸಿಗಳಿಂದ ನೆಲಬಾಡಿಗೆ ಹಾಗೂ ಜಾಹೀರಾತು ಶುಲ್ಕವಾಗಿ ಬಿಬಿಎಂಪಿಗೆ ₹25 ಕೋಟಿಗೂ ಹೆಚ್ಚು ಹಣ ಪಾವತಿಯಾಗಬೇಕಿದೆ. ಈ ಬಗ್ಗೆ ಪ್ರತಿಕ್ರಿಯಿಸಿದ ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್, ‘ಈ ಬಗ್ಗೆ ಪರಿಶೀಲನೆ ಆರಂಭಿಸಿದ್ದು, ಬಾಕಿ ಹಣ ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗುವುದು’ ಎಂದರು.

ಬೆಂಗಳೂರಿನ ಕೆಂಪೇಗೌಡ ರಸ್ತೆಯ ಸಂತೋಷ್ ಟಾಕೀಸ್ ಬಳಿ ನಲ್ವತ್ತು ವರ್ಷಗಳ ಹಿಂದೆ ಬಿಬಿಎಂಪಿ ನಿರ್ಮಿಸಿದ ಪಾದಚಾರಿ ಮೇಲ್ಸೇತುವೆ – ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಸ್ಕೈವಾಕ್ ಜಾಹೀರಾತು ಶುಲ್ಕ ಎಲ್ಲಿ ಎಷ್ಟು ಬಾಕಿ?

ಸ್ಕೈವಾಕ್ ಏಜೆನ್ಸಿ	ಬಾಕಿ ಮೊತ್ತ
ಪ್ರಕಾಶ್ ಆರ್ಟ್ಸ್	₹5.67 ಕೋಟಿ
ವಾಂಟೇಜ್ ಅಡ್ವರ್‌ಟೈಸಿಂಗ್	₹6.26 ಕೋಟಿ
ಸೈನ್ ಪೋಸ್ಟ್ ಇಂಡಿಯಾ	₹1.90 ಕೋಟಿ
ಪಯನೀರ್ ಪಬ್ಲಿಸಿಟಿ ಕಾರ್ಪೊರೇಷನ್	₹3.99 ಕೋಟಿ
ಸ್ಕೈಲೈನ್ ಅಡ್ವರ್‌ಟೈಸಿಂಗ್	₹92.17 ಲಕ್ಷ
ಸಹಯೋಗ– ಇಂಡಿಯಾ ಕೌನ್ಸಿಲ್	₹4.76 ಕೋಟಿ
ಆ್ಯಡ್ ಏಜ್ ಔಟ್‌ಡೋರ್ ಅಡ್ವರ್‌ಟೈಸ್‌ಮೆಂಟ್	₹34.08 ಲಕ್ಷ
ಜೈವಿನ್ ಔಟ್ ಡೋರ್ ಮೀಡಿಯಾ	₹25.69 ಲಕ್ಷ
ಡಿಸೈನ್ 55 ಅಡ್ವರ್‌ಟೈಸ್‌ಮೆಂಟ್	₹27.87 ಲಕ್ಷ
ಅಕಾರ್ಡ್ ಡಿಸ್‌ಪ್ಲೆ ಸರ್ವೀಸ್	₹18.44 ಲಕ್ಷ



ಎಲ್ಲೆಲ್ಲಿ ಎಷ್ಟೆಷ್ಟು ಸ್ಕೈವಾಕ್?

ಸುದ್ದಿ 2 ನಿಮಿಷ

ಬೆಂಗಳೂರು– ಚೆನ್ನೈ: ವಂದೇ ಭಾರತ್ ರೈಲು ರಾತ್ರಿ ಸಂಚಾರ

ಚೆನ್ನೈ: ದೀಪಾವಳಿ ರಜೆಯ ಅವಧಿಯಲ್ಲಿನ ಪ್ರಯಾಣಿಕರ ದಟ್ಟಣೆ ನಿವಾರಿಸಲು ದಕ್ಷಿಣ ರೈಲ್ವೆಯು ಇದೇ ಮೊದಲ ಬಾರಿಗೆ ಬೆಂಗಳೂರು– ಚೆನ್ನೈ ನಡುವೆ ಇದೇ 21ರಂದು ರಾತ್ರಿ ವೇಳೆ ವಂದೇ ಭಾರತ್ ರೈಲು ಸಂಚಾರ ಸೇವೆ ಕಲ್ಪಿಸಿದೆ.

ನ.20ರಂದು ಯಶವಂತಪುರ/ ಎಸ್‌ಎಂವಿಟಿ ಬೆಂಗಳೂರು ಮತ್ತು ಚೆನ್ನೈ ಸೆಂಟ್ರಲ್ ನಡುವೆ ಮತ್ತೊಂದು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ರಾತ್ರಿ ವೇಳೆ ವಿಶೇಷ ಸಂಚಾರ ನಡೆಸಲಿದೆ.

ನ.20ರಂದು, ಬೆಂಗಳೂರಿನ ಎಸ್‌ಎಂವಿಟಿಯಿಂದ ಸಂಜೆ 5.15 ಕ್ಕೆ ಹೊರಡಲಿರುವ ವಂದೇ ಭಾರತ್ ವಿಶೇಷ ರೈಲು, ಅದೇ ದಿನ ರಾತ್ರಿ 10 ಗಂಟೆಗೆ ಚೆನ್ನೈ ಸೆಂಟ್ರಲ್ ತಲುಪಲಿದೆ.

8 ಬೋಗಿಗಳ ವಂದೇ ಭಾರತ್ ಎಕ್ಸ್‌ಪ್ರೆಸ್ ಚೆನ್ನೈ ಸೆಂಟ್ರಲ್ ನಿಲ್ದಾಣದಿಂದ ಮಂಗಳವಾರ (ನ. 21) ರಾತ್ರಿ 11 ಗಂಟೆಗೆ ಹೊರಟು ಬುಧವಾರ ಬೆಳಿಗ್ಗೆ 4.30ಕ್ಕೆ ಬೆಂಗಳೂರು ಎಸ್‌ಎಂವಿಟಿ ತಲುಪಲಿದೆ ಎಂದು ದಕ್ಷಿಣ ರೈಲ್ವೆ ತಿಳಿಸಿದೆ.

ಸಿಬ್ಬಂದಿಗೆ ₹ 1 ಕೋಟಿ ವಿಮೆ: ಕೆಎಸ್‌ಆರ್‌ಟಿಸಿಗೆ ಪ್ರಶಸ್ತಿ

ಬೆಂಗಳೂರು: ದೇಶದ ಸಾರಿಗೆ ಸಂಸ್ಥೆಗಳ ಇತಿಹಾಸದಲ್ಲಿಯೇ ಪ್ರಪ್ರಥಮವಾಗಿ ತನ್ನ ಸಿಬ್ಬಂದಿಗೆ ₹ 1 ಕೋಟಿ ಸುರಕ್ಷಾ ವಿಮಾ ಯೋಜನೆ ಜಾರಿ ಮಾಡಿದ್ದಕ್ಕಾಗಿ ಕೆಎಸ್‌ಆರ್‌ಟಿಸಿಗೆ ‘ಸ್ಕಾಚ್’ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಿದೆ.

ದೆಹಲಿಯ ಸ್ಕಾಚ್ ಸಂಸ್ಥೆಯು ಸ್ವತಂತ್ರ ವಿಚಾರತಜ್ಞರ ವೇದಿಕೆಯಾಗಿದ್ದು, ದೇಶದ ವಿವಿಧ ಸಂಸ್ಥೆಗಳ ಆಡಳಿತ ನಿರ್ವಹಣೆ, ಹಣಕಾಸು, ತಾಂತ್ರಿಕತೆ ಅಳವಡಿಕೆ, ಆಂತರಿಕ ಬೆಳವಣಿಗೆಯಲ್ಲಿ ಆಗಿರುವ ಸಾಧನೆ, ಅವುಗಳಿಂದ ಉಂಟಾಗಿರುವ ಪರಿಣಾಮ ಆಧರಿಸಿ ಪ್ರಶಸ್ತಿ ನೀಡುತ್ತಾ ಬಂದಿದೆ.

ಸ್ಕಾಚ್ ಗ್ರೂಪ್ ಅಧ್ಯಕ್ಷ ಸಮೀರ್ ಕೊಚ್ಚರ್ ಪ್ರಶಸ್ತಿ ಪ್ರದಾನ ಮಾಡಿದರು. ಕೆಎಸ್‌ಆರ್‌ಟಿಸಿ ಮುಖ್ಯ ತಾಂತ್ರಿಕ ಶಿಲ್ಪಿ ಎನ್.ಕೆ. ಬಸವರಾಜು, ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ ಬಿ.ಶ್ರೀನಿವಾಸ ಅವರು ಪ್ರಶಸ್ತಿ ಸ್ವೀಕರಿಸಿದರು.

ಅಪಘಾತದಲ್ಲಿ ಮೃತಪಟ್ಟ 9 ಸಿಬ್ಬಂದಿಯ ಅವಲಂಬಿತರಿಗೆ ಕೆಎಸ್‌ಆರ್‌ಟಿಸಿ ಈ ಯೋಜನೆಯಡಿ ತಲಾ ₹ 1 ಕೋಟಿ ಅಪಘಾತ ಪರಿಹಾರ ಚೆಕ್ ವಿತರಿಸಿದೆ.

ಡ್ರಗ್ಸ್ ಮಾರಾಟ: ನೈಜೀರಿಯಾ ಪ್ರಜೆ ಡೇನಿಯಲ್ ಬಂಧನ

ಬೆಂಗಳೂರು: ವಾಟ್ಸ್‌ಆ್ಯಪ್ ಮೂಲಕ ಗ್ರಾಹಕರನ್ನು ಸಂಪರ್ಕಿಸಿ ಡ್ರಗ್ಸ್ ಮಾರುತ್ತಿದ್ದ ಆರೋಪಿ ಡೇನಿಯಲ್‌ನನ್ನು ಅಮೃತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ನೈಜೀರಿಯಾದ ಡೇನಿಯಲ್. ಹಲವು ವರ್ಷಗಳ ಹಿಂದೆ ನಗರಕ್ಕೆ ಬಂದು ಅಕ್ರಮವಾಗಿ ವಾಸವಿದ್ದ. ತನ್ನದೇ ದೇಶದ ಪೆಡ್ಲರ್‌ಗಳಿಂದ ಡ್ರಗ್ಸ್ ಖರೀದಿಸಿ ಪರಿಚಯಸ್ಥ ಗ್ರಾಹಕರಿಗೆ ಮಾರುತ್ತಿದ್ದ’ ಎಂದು ಪೊಲೀಸರು ಹೇಳಿದರು.

‘ವಾಟ್ಸ್‌ಆ್ಯಪ್ ಮೂಲಕ ಗ್ರಾಹಕರನ್ನು ಸಂಪರ್ಕಿಸುತ್ತಿದ್ದ ಆರೋಪಿ, ಆನ್‌ಲೈನ್ ಮೂಲಕ ಹಣ ಪಡೆಯುತ್ತಿದ್ದ. ನಿರ್ಜನ ಪ್ರದೇಶಗಳಲ್ಲಿ ಡ್ರಗ್ಸ್ ಬಚ್ಚಿಡುತ್ತಿದ್ದ ಆರೋಪಿ, ಅದರ ಫೋಟೊವನ್ನು ಲೋಕೇಷನ್ ಸಮೇತ ಗ್ರಾಹಕರಿಗೆ ಕಳುಹಿಸುತ್ತಿದ್ದ. ಸ್ಥಳಕ್ಕೆ ಹೋಗಿ ಗ್ರಾಹಕರು ಡ್ರಗ್ಸ್ ಪೊಟ್ಟಣ ತೆಗೆದುಕೊಂಡು ಹೋಗುತ್ತಿದ್ದರು’ ಎಂದರು.

3 ತಿಂಗಳಿನಲ್ಲಿ ₹ 25 ಲಕ್ಷ ಜಮೆ: ‘ಆರೋಪಿ ಡೇನಿಯಲ್, ಐದು ಬ್ಯಾಂಕ್‌ಗಳಲ್ಲಿ ಖಾತೆ ತೆರೆದಿದ್ದ. ಅದೇ ಖಾತೆಗಳಿಗೆ ಮೂರು ತಿಂಗಳಿನಲ್ಲಿ ₹ 25 ಲಕ್ಷ ಜಮೆ ಆಗಿತ್ತು’ ಎಂದು ಪೊಲೀಸರು ತಿಳಿಸಿದರು.

‘ಬ್ಯಾಂಕ್ ಹಾಗೂ ಎಟಿಎಂ ಕೇಂದ್ರಕ್ಕೆ ಪದೇ ಪದೇ ಹೋಗುತ್ತಿದ್ದ ಆರೋಪಿ, ಹಣ ಡ್ರಾ ಮಾಡಿಕೊಳ್ಳುತ್ತಿದ್ದ. ಇದೇ ಸುಳಿವು ಆಧರಿಸಿ ಆರೋಪಿಯನ್ನು ವಶಕ್ಕೆ ಪಡೆದಾಗ, ಡ್ರಗ್ಸ್ ಮಾರಾಟದ ಬಗ್ಗೆ ತಪ್ಪೊಪ್ಪಿಕೊಂಡಿದ್ದಾನೆ.’ ‘ಡ್ರಗ್ಸ್ ಮಾರಾಟದಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿರುವ ಅನುಮಾನವಿದೆ. ಡೇನಿಯಲ್‌ನನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಬೇಕಿದೆ’ ಎಂದು ಪೊಲೀಸರು ಹೇಳಿದರು.

ಕ್ಯಾಮೆರಾ ದೃಶ್ಯ ನೀಡಿದ ಸುಳಿವು • ₹ 5 ಲಕ್ಷ, 27 ಗ್ರಾಂ ಚಿನ್ನಾಭರಣ ಜಪ್ತಿ

ನಗದು, ಚಿನ್ನಕ್ಕಾಗಿ ಭೂವಿಜ್ಞಾನಿ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿರಿಯ ಭೂ ವಿಜ್ಞಾನಿ ಕೆ.ಎಸ್. ಪ್ರತಿಮಾ (43) ಅವರನ್ನು ನಗದು ಹಾಗೂ ಚಿನ್ನಾಭರಣ ದೋಚುವ ಉದ್ದೇಶದಿಂದ ಆರೋಪಿ ಕಿರಣ್ ಕೊಲೆ ಮಾಡಿದ್ದನೆಂಬುದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

ಕೊಲೆ ಪ್ರಕರಣದ ತನಿಖೆ ಚುರುಕುಗೊಳಿಸಿರುವ ದಕ್ಷಿಣ ವಿಭಾಗದ ಪೊಲೀಸರು, ಆರೋಪಿ ಕಿರಣ್‌ನಿಂದ ₹ 5 ಲಕ್ಷ ನಗದು ಹಾಗೂ 27 ಗ್ರಾಂ ಚಿನ್ನಾಭರಣ ಜಪ್ತಿ ಮಾಡಿದ್ದಾರೆ.

ನ.4ರಂದು ರಾತ್ರಿ ನಡೆದಿದ್ದ ಪ್ರತಿಮಾ ಕೊಲೆ ಪ್ರಕರಣದಲ್ಲಿ ಹಳೇ ಚಾಲಕ ಕಿರಣ್‌ನನ್ನು ಮಹದೇಶ್ವರ ಬೆಟ್ಟದಲ್ಲಿ ಬಂಧಿಸಿದ್ದ ಪೊಲೀಸರು, ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿದ್ದರು. ಇದೇ ಸಂದರ್ಭದಲ್ಲಿ ಕೃತ್ಯಕ್ಕೆ ಸಂಬಂಧಪಟ್ಟಂತೆ ಮತ್ತಷ್ಟು ಮಾಹಿತಿ ಕಲೆಹಾಕಿದ್ದಾರೆ.

‘ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಹಿರಿಯ ಭೂ ವಿಜ್ಞಾನಿ ಕೆ.ಎಸ್. ಪ್ರತಿಮಾ ಅವರು ವಾಸವಿದ್ದ ದೊಡ್ಡಕಲ್ಲಸಂದ್ರದ ಮನೆಗೆ ಹೋಗಿದ್ದ ಆರೋಪಿ ಕಿರಣ್, ಕೆಲಸಕ್ಕೆ ವಾಪಸು ತೆಗೆದುಕೊಳ್ಳುವಂತೆ ಕೋರಿದ್ದ. ಅದನ್ನು ಪ್ರತಿಮಾ ನಿರಾಕರಿಸಿದ್ದರು. ಇದೇ ಕಾರಣಕ್ಕೆ ಆರೋಪಿ, ಪ್ರತಿಮಾ ಅವರನ್ನು ಕೊಂದಿದ್ದ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಕ್ಯಾಮೆರಾ ದೃಶ್ಯ ನೀಡಿದ್ದ ಸುಳಿವು: ‘ಕೆಲಸದ ವಿಚಾರಕ್ಕೆ ಪ್ರತಿಮಾ ಕೊಲೆ ಮಾಡಿದ್ದಾಗಿ ಆರೋಪಿ ಹೇಳಿಕೆ ನೀಡಿದ್ದ. ಆದರೆ, ಕೊಲೆ ಬಳಿಕ ಆತ ಪರಾರಿಯಾಗುತ್ತಿದ್ದ ದೃಶ್ಯ ಸ್ಥಳೀಯ ಸಿ.ಸಿ.ಟಿ.ವಿ ಕ್ಯಾಮೆರಾವೊಂದರಲ್ಲಿ ಸೆರೆಯಾಗಿತ್ತು. ಆತನ ಬಳಿ ಬ್ಯಾಗ್ ಇರುವುದು ಕಂಡಿತ್ತು’ ಎಂದು ಅಧಿಕಾರಿ ತಿಳಿಸಿದರು.

‘ಬ್ಯಾಗ್ ಬಗ್ಗೆ ಆರೋಪಿಯನ್ನು ವಿಚಾರಣೆಗೆ ಒಳಪಡಿಸಲಾಗಿತ್ತು. ಪ್ರತಿಮಾ ಅವರನ್ನು ಕೊಂದ ನಂತರ, ಮನೆಯಲ್ಲಿದ್ದ ₹ 5 ಲಕ್ಷ ನಗದು ಹಾಗೂ 27 ಗ್ರಾಂ ತೂಕದ ಚಿನ್ನಾಭರಣ ಕದ್ದೊಯ್ದಿದ್ದಾಗಿ ಆತ ಹೇಳಿಕೆ ನೀಡಿದ್ದಾನೆ’ ಎಂದು ಹೇಳಿದರು.

‘ನಗದು ಹಾಗೂ ಚಿನ್ನಾಭರಣ ದೋಚುವ ಉದ್ದೇಶದಿಂದ ಪ್ರತಿಮಾ ಅವರನ್ನು ಆರೋಪಿ ಕೊಂದಿರುವುದು ಗೊತ್ತಾಗಿದೆ. ಇದಕ್ಕೆ ಸಂಬಂಧಪಟ್ಟ ಪುರಾವೆಗಳನ್ನು ಸಂಗ್ರಹಿಸಿ ಆರೋಪ ಪಟ್ಟಿ ಸಿದ್ಧಪಡಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

ಸ್ನೇಹಿತನ ಬಳಿ ನಗದು, ಹಣ

ಆರೋಪಿ ಕಿರಣ್

‘ಆರೋಪಿ ಕಿರಣ್, ಕೊಲೆ ಬಳಿಕ ಸ್ನೇಹಿತನ ಬಳಿ ನಗದು ಹಾಗೂ ಚಿನ್ನಾಭರಣ ನೀಡಿದ್ದ. ಕೆಲದಿನ ಬಿಟ್ಟು ವಾಪಸು ಪಡೆಯುವುದಾಗಿ ತಿಳಿಸಿದ್ದ. ಇದೀಗ, ಸ್ನೇಹಿತನಿಂದ ಎಲ್ಲವನ್ನೂ ಜಪ್ತಿ ಮಾಡಲಾಗಿದೆ’ ಎಂದು ಅಧಿಕಾರಿ ಮಾಹಿತಿ ನೀಡಿದರು.

‘ಪ್ರತಿಮಾ ಮನೆಯಿಂದ ಯಾವುದೇ ನಗದು ಹಾಗೂ ಚಿನ್ನಾಭರಣ ಕದ್ದಿಲ್ಲವೆಂದು ಆರೋಪಿ ಕಿರಣ್ ಆರಂಭದಲ್ಲಿ ಹೇಳಿದ್ದ. ಆದರೆ, ಕೆಲ ಪುರಾವೆಗಳನ್ನು ತೋರಿಸುತ್ತಿದ್ದಂತೆ ತಪ್ಪೊಪ್ಪಿಕೊಂಡ. ಸ್ನೇಹಿತನನ್ನೂ ಪ್ರಕರಣದಲ್ಲಿ ಸಾಕ್ಷಿಯನ್ನಾಗಿ ಮಾಡಲಾಗುವುದು’ ಎಂದು ಹೇಳಿದರು.

ನಿಧನ ವಾರ್ತೆ

ಭಾಗ್ಯಮ್ಮ

ಯಲಹಂಕ: ತಾಲ್ಲೂಕು ಬೋರ್ಡ್ ಮಾಜಿ ಅಧ್ಯಕ್ಷ ಪಿ.ವಿ. ಕೃಷ್ಣಪ್ಪ ಅವರ ಪತ್ನಿ ಭಾಗ್ಯಮ್ಮ(86) ಅಮೃತಹಳ್ಳಿಯಲ್ಲಿ ಶನಿವಾರ ನಿಧನರಾದರು.

ಅವರಿಗೆ ಪುತ್ರ ಇದ್ದಾರೆ. ಭಾನುವಾರ ಅಂತ್ಯಕ್ರಿಯೆ ನೆರವೇರಿತು.

‘ಪೊಲೀಸ್: ಕ್ರೀಡಾಪಟುಗಳಿಗೆ ಶೇ 2 ಮೀಸಲಾತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪೊಲೀಸ್ ಇಲಾಖೆ ನೇಮಕಾತಿಯಲ್ಲಿ ಕ್ರೀಡಾಪಟುಗಳಿಗೆ ಶೇ 2ರಷ್ಟು ಮೀಸಲಾತಿ ನೀಡಲಾಗುತ್ತಿದೆ. ಮುಂಬರುವ ದಿನಗಳಲ್ಲಿಯೂ ಅರ್ಹ ಕ್ರೀಡಾಪಟುಗಳಿಗೆ ಮೀಸಲಾತಿ ಒದಗಿಸಿ, ಕ್ರೀಡಾ ಚಟುವಟಿಕೆಗಳನ್ನು ಮುಂದುವರಿಸಲು ಪ್ರೋತ್ಸಾಹಿಸಲಾಗುವುದು’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಆಡುಗೋಡಿಯ ನಗರ ಸಶಸ್ತ್ರ ಮೀಸಲು ಪಡೆಯ ಮೈದಾನದಲ್ಲಿ ಶನಿವಾರ ಆಯೋಜಿಸಿದ್ದ ಬೆಂಗಳೂರು ನಗರ ಪೊಲೀಸ್ ವಾರ್ಷಿಕ ಕ್ರೀಡಾಕೂಟದಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿ ಅವರು ಮಾತನಾಡಿದರು.

‘ಕ್ರೀಡಾಪಟು ಮೀಸಲಾತಿಯಡಿ ಇದುವರೆಗೂ 70 ಪೊಲೀಸ್ ಕಾನ್‌ಸ್ಟೆಬಲ್‌ಗಳು ಹಾಗೂ 30 ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳು (ಪಿಎಸ್‌ಐ) ನೇಮಕವಾಗಿದ್ದಾರೆ’ ಎಂದರು.

‘ಪೊಲೀಸರು ಕ್ರೀಡೆಗಳಲ್ಲೂ ಹೆಚ್ಚು ಆಸಕ್ತಿ ವಹಿಸಬೇಕು. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಿಗೆ ಆಯ್ಕೆಯಾಗುವ ಸಿಬ್ಬಂದಿಗೆ ಸರ್ಕಾರದಿಂದ ಸೂಕ್ತ ಬಹುಮಾನ ನೀಡಿ ಪ್ರೋತ್ಸಾಹಿಸಲಾಗುವುದು’ ಎಂದು ಹೇಳಿದರು.

ಉತ್ತಮ ಪೊಲೀಸ್ ಠಾಣೆ, ಉತ್ತಮ ಠಾಣೆ ಬರಹಗಾರರು ಹಾಗೂ ಇತರೆ ವಿಭಾಗದಲ್ಲೂ ಇದೇ ಮೊದಲ ಬಾರಿಗೆ ಪೊಲೀಸರಿಗೆ ಬಹುಮಾನ ನೀಡಲಾಯಿತು.

ಕುಂದು ಕೊರತೆ

ಜನದನಿ

ನಿಮ್ಮ ಅಹವಾಲುಗಳನ್ನು ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು

‘ವಾಲಿದ ವಿದ್ಯುತ್ ಕಂಬ’

ಬನಶಂಕರಿ 6ನೇ ಹಂತದಲ್ಲಿರುವ 4ನೇ ಟಿ ಬ್ಲಾಕ್‌ನ ಬಿಡಿಎ ಬಡಾವಣೆಯಲ್ಲಿ ವಿದ್ಯುತ್ ಕಂಬ ವಾಲಿದೆ. ಪ್ರತಿನಿತ್ಯ ವಿದ್ಯಾರ್ಥಿಗಳು, ವೃದ್ಧರು ಪ್ರಯಾಣಿಕರು ಇಲ್ಲಿಂದಲೇ ಸಂಚರಿಸುತ್ತಾರೆ. ಅಪಾಯ ಸಂಭವಿಸುವ ಮುನ್ನ ಬೆಸ್ಕಾಂ ಅಧಿಕಾರಿಗಳು ಈ ವಿದ್ಯುತ್ ಕಂಬವನ್ನು ತೆರವುಗೊಳಿಸಬೇಕು

ರಾ. ಜಯಸಿಂಹ, ಸ್ಥಳೀಯ ನಿವಾಸಿ

‘ಒತ್ತುವರಿಯಾದ ಪಾದಚಾರಿ ಮಾರ್ಗ’

ರಾಮಮೂರ್ತಿನಗರದ ಟಿ.ಸಿ. ಪಾಳ್ಯದ ಮುಖ್ಯ ರಸ್ತೆಯ ರಾಘವೇಂದ್ರ ವೃತ್ತಕ್ಕೆ ಸೇರುವ ನಾಲ್ಕು ಪಾದಚಾರಿ ಮಾರ್ಗಗಳನ್ನು ಒತ್ತುವರಿ ಮಾಡಿಕೊಳ್ಳಲಾಗಿದೆ. ಇದರಿಂದ, ಪಾದಚಾರಿಗಳು ಮುಖ್ಯರಸ್ತೆಯಲ್ಲಿ ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಇಲ್ಲಿನ ಮನೆ, ಅಂಗಡಿ– ಮುಂಗಟ್ಟುಗಳ ಮುಂದಿನ ಪಾದಚಾರಿ ಮಾರ್ಗವು ಒತ್ತುವರಿ ಮಾಡಿಕೊಳ್ಳಲಾಗಿದೆ. ಕೂಡಲೇ ಬಿಬಿಎಂಪಿಯು ಒತ್ತುವರಿಯಾದ ಪಾದಚಾರಿ ಮಾರ್ಗವನ್ನು ತೆರವುಗೊಳಿಸಬೇಕು.

ಆರ್.ಎನ್. ಕುಮಾರ್, ಸ್ಥಳೀಯ ನಿವಾಸಿ

‘ಪಾದಚಾರಿ ಮಾರ್ಗದಲ್ಲಿ ಕಟ್ಟಡ ತ್ಯಾಜ್ಯ’

ಉಪ್ಪಾರಪೇಟೆಯ ಕಾಳಿದಾಸ ಮಾರ್ಗದಲ್ಲಿನ ಪಾದಚಾರಿ ಮಾರ್ಗದಲ್ಲಿ ಕಟ್ಟಡ ತ್ಯಾಜ್ಯವನ್ನು ಹಾಕಲಾಗಿದೆ. ಇತ್ತೀಚೆಗೆ ಈ ಪಾದಚಾರಿ ಮಾರ್ಗವನ್ನು ದುರಸ್ತಿಗೊಳಿಸಲಾಗಿದೆ. ಇದರಿಂದ ಉತ್ಪತ್ತಿಯಾಗಿರುವ ಕಟ್ಟಡ ತ್ಯಾಜ್ಯವನ್ನು ಇಲ್ಲಿಯೇ ಹಾಕಲಾಗಿದೆ. ಇದರಿಂದ ಪಾದಚಾರಿ ಓಡಾಟಕ್ಕೆ ಸಮಸ್ಯೆಯಾಗಿದೆ. ಕೂಡಲೇ ಬಿಬಿಎಂಪಿ ಇಲ್ಲಿ ತ್ಯಾಜ್ಯವನ್ನು ವಿಲೇವಾರಿ ಮಾಡಬೇಕು. ಪಾದಚಾರಿಗಳ ಸಂಚಾರಕ್ಕೆ ಅನುಕೂಲ ಕಲ್ಪಿಸಬೇಕು.

ಶಿವಪ್ರಸಾದ್ ಎಸ್.

ರಾಜಕಾಲುವೆ: ಶೌಚ ಗುಂಡಿಗಳನ್ನು ದುರಸ್ತಿಗೊಳಿಸಿ

ಹೆಬ್ಬಾಳ ವಿಧಾನಸಭಾ ಕ್ಷೇತ್ರ ಜಾಕಿ ಗಾರ್ಡನ್ ಗಿಡ್ಡಪ್ಪ ಬ್ಲಾಕ್‌ನಲ್ಲಿ ಸುಮಾರು ಎರಡು ಸಾವಿರ ಜನ ವಾಸವಿದ್ದು ಮಕ್ಕಳು, ವೃದ್ಧರು ಆದಿಯಾಗಿ ಎಲ್ಲರೂ ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದಾರೆ. ಇದಕ್ಕೆ ಕಾರಣ ಇಲ್ಲಿನ ರಾಜಕಾಲುವೆಯಲ್ಲಿ ಸುಮಾರು 15 ರಿಂದ 20 ಶೌಚ ಗುಂಡಿಗಳಿದ್ದು, ಅವು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಇದರಲ್ಲಿನ ಕೊಳಚೆ ನೀರು ಹೊರಗಡೆ ಹರಿಯುತ್ತಿದ್ದು, ಈ ಪ್ರದೇಶವೆಲ್ಲ ಗಬ್ಬೆದ್ದು ನಾರುತ್ತಿದೆ. ಈ ಬಗ್ಗೆ ಸ್ಥಳೀಯ ಶಾಸಕರ ಗಮನಕ್ಕೆ ತಂದರೂ ಸಹ ಈ ಶೌಚ ಗುಂಡಿಗಳನ್ನು ದುರಸ್ತಿಗೊಳಿಸುವ ಕೆಲಸವಾಗಿಲ್ಲ. ಕೂಡಲೇ ಬಿಬಿಎಂಪಿ ರಾಜಕಾಲುವೆಯಲ್ಲಿರುವ ಈ ಶೌಚ ಗುಂಡಿಗಳಿಗೆ ಕಟ್ಟೆ ಕಟ್ಟಿಸಲು ಕ್ರಮ ಕೈಗೊಳ್ಳಬೇಕು.

ಬಾಲಕೃಷ್ಣ ಎ., ಸ್ಥಳೀಯ ನಿವಾಸಿ

‘ಜೋತು ಬಿದ್ದಿರುವ ಕೇಬಲ್ ಬಾಕ್ಸ್ ತೆರವುಗೊಳಿಸಿ’

ಜಯನಗರ ವಿಜಯ ಕಾಲೇಜ್ ಸಮೀಪ ಪಾದಚಾರಿ ಮಾರ್ಗದಲ್ಲಿ ಕೇಬಲ್ ಬಾಕ್ಸ್ ಜೋತು ಬಿದ್ದಿದೆ. ಇದು ಪಾದಚಾರಿ ಮಾರ್ಗದಲ್ಲಿ ಓಡಾಡುವ ಸಾರ್ವಜನಿಕರ ತಲೆಗೆ ಬಡಿಯುತ್ತಿದೆ. ಇದರಿಂದ, ವೃದ್ಧರು, ಮಹಿಳೆಯರು ಮತ್ತು ವಿದ್ಯಾರ್ಥಿಗಳು ಮುಖ್ಯರಸ್ತೆಯಲ್ಲಿ ಓಡಾಡಬೇಕಾದ ಪರಿಸ್ಥಿತಿ ಎದುರಾಗಿದೆ. ಅಪಾಯ ಸಂಭವಿಸುವ ಮುನ್ನ ಸಂಬಂಧಪಟ್ಟ ಅಧಿಕಾರಿಗಳು ಈ ಬಾಕ್ಸ್ ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕು.

ಆರ್. ಕೆ. ನಾಯಕ್, ಸ್ಥಳೀಯ ನಿವಾಸಿ

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Part-Time Jobs

TOP MNC Com. Licensed By Central Govt. Retired/ VRS Persons 2nd Career Opporty Age Above 45 Years 35K To 40K: 7019215243/ 9886641282

Teachers/ Professors

KISHORA VIDYA BHAVANA
Chintamani, Chikkaballapur District.
Over 50 years old reputed School requires
RESIDENTIAL PRINCIPAL
Post Graduate Candidates having brilliant academic record and over 15 years teaching experience and 5 years of administrative experience are preferred. They should be proficient in English with sound knowledge of state curriculum.
Benefits and Remuneration: befitting the experience and qualification.
Apply to:
Secretary, Kishora Vidya Bhavana, Chintamani - 563125 OR kishoravidyabhavana@gmail.com
Applications end on 30th November 2023

BUSINESS

Business Offers

Finance

WANTED BUSINESS Partners Saree Business 10 Lakhs Investment Monthly Income 1 Lakhs Contact: 8892501007/ 9606701007

EDUCATION CORNER

SINCE 2004 BALC® Discount 50%
ಬಾಲ್ಕ್ Avail 50% Discount on all Computer Courses @ BALC
Learn : Tally Prime, Adv Excel, SAP, C, C++, Java, Python AI, ML, Civil / Mechanical CADD, DTP, Web Design, Animation, Digital Marketing Training, Spoken English
RAJAJINAGAR 88848 68882 | TOLLGATE 88847 08887 | SUNKADAKATTE 98860 50481/2
JAYANAGAR 8884 483 483 | ULLAL ROAD 88845 48887 | BASAVANAGUDI 8884 482 482
KONANAKUNTE CROSS 8884 72 8887 | KENGERI UPANAGAR 8884 64 8887 | www.balc.in www.balccadd.com

REAL ESTATE SELLING

Commerical

Double Road

COMMERCIAL SPACE FOR Sale, 400Sq.ft 1stFloor,MoneyPoint, KH Double Road, Opp ShantiNagar BusStand. Excellent for Offices/CallCentres. Call 9844184151/ 9739718446

PERSONAL

Change of Name

NOORESHA KHATOON, Mother/o, 3997900K, HAV/ARTSN (M), KHURSHID ALI, Vill- Jalalpur, Dayalpur, Chapra, Bihar changed name NOORESHA KHATOON to NURAISHA KHATOON, 18/11/2023, Notary K.V. Mani, Bangalore

SHEKH REYAZUL, Father/o, 3997900K, HAV/ARTSN (M), KHURSHID ALI, Vill - Jalalpur, Dayalpur, Chapra, Bihar changed name SHEKH REYAZUL to SHEKH REYAJUL, 18/11/2023, Notary K.V. Mani Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH Classifieds More value, more impact | NAME CHANGE | ಪ್ರಜಾವಾಣಿ
Tell us your New Name! Book your AD WITH US NOW!
www.dhclassifieds.com BOOK NOW
For more details contact:
9886213331 | 9901641752
9845114560 | 9900428036
9731810277 | 080- 45557163/164

ಕೃಷಿ ಮೇಳ: 3ನೇ ದಿನ 5 ಲಕ್ಷ ಜನರ ಭೇಟಿ • ₹ 1.65 ಕೋಟಿ ಮೊತ್ತದ ವಹಿವಾಟು • ಮೇಳ ವೀಕ್ಷಣೆಗೆ ಬಂದವರಿಗೆ ರಿಯಾಯಿತಿ ದರದಲ್ಲಿ ಊಟ

ಮಡಿಕೆ ತಯಾರಿಕೆ, ಸಿರಿಧಾನ್ಯ ಐಸ್‌ಕ್ರೀಂ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ನಡೆಯುತ್ತಿರುವ ಕೃಷಿ ಮೇಳಕ್ಕೆ 3ನೇ ದಿನವಾದ ಭಾನುವಾರ 5.10 ಲಕ್ಷ ಜನ ಭೇಟಿ ನೀಡಿದರು.

ಜಿಕೆವಿಕೆ ಆವರಣದಲ್ಲಿ ಬೆಳಿಗ್ಗೆಯಿಂದಲೇ ರೈತರು, ವಿದ್ಯಾರ್ಥಿಗಳ ಕಲರವ ಹೆಚ್ಚಿತ್ತು. ರೈತರು ಎಲ್ಲ ಮಳಿಗೆಯನ್ನು ವೀಕ್ಷಿಸಿ, ಮಾಹಿತಿ ಪಡೆಯುತ್ತಿದ್ದರು. ಮಧ್ಯಾಹ್ನ ಭಾರತ ಮತ್ತು ಆಸ್ಟ್ರೇಲಿಯಾ ವಿಶ್ವಕಪ್ ಫೈನಲ್ ಪಂದ್ಯ ಇದ್ದ ಕಾರಣ ಕೃಷಿ ಆಸಕ್ತರು ಬೆಳಿಗ್ಗೆಯಿಂದಲೇ ತಂಡೋಪತಂಡವಾಗಿ ಆಗಮಿಸಿ ವಿವಿಧ ಮಳಿಗೆಗಳಿಗೆ ಭೇಟಿ ನೀಡಿ ತಮಗೆ ಬೇಕಾದ ಮಾಹಿತಿ ಪಡೆದುಕೊಳ್ಳುವಲ್ಲಿ ನಿರತರಾಗಿದ್ದರು.

ಗ್ರಾಮೀಣ ಸೊಗಡಿನ ಮಡಿಕೆಗಳ ತಯಾರಿಕೆ ಮತ್ತು ಮಳಿಗೆಗಳು ಇರುವ ಕಡೆ ಹೆಚ್ಚಿನ ಜನ ಭೇಟಿ ನೀಡುತ್ತಿದ್ದರು. ರಾಗಿಯಲ್ಲಿ ಅರಳಿದ ಹಸಿರು ಕ್ರಾಂತಿಯ ಹರಿಕಾರ ಎಂ.ಎಸ್. ಸ್ವಾಮಿನಾಥನ್ ಎಲ್ಲರ ಗಮನ ಸೆಳೆಯುತ್ತಿತ್ತು.

ಮೇಳಕ್ಕೆ ಭೇಟಿ ನೀಡಿದವರಿಗೆ ರಿಯಾಯಿತಿ ದರದಲ್ಲಿ ಊಟದ ವ್ಯವಸ್ಥೆ ಮುಂದುವರಿದಿತ್ತು. ಮಧ್ಯಾಹ್ನದ 9,350 ಜನ ಊಟ ಸವಿದರು. ₹ 1.65 ಕೋಟಿ ಮೊತ್ತದ ವಹಿವಾಟು ನಡೆದಿದೆ ಎಂದು ಆಯೋಜಕರು ತಿಳಿಸಿದ್ದಾರೆ.

ಜಿಕೆವಿಕೆ ಆವರಣದಲ್ಲಿ ಬೆಳೆದಿರುವ ತಾಕುಗಳಿಗೆ ಭೇಟಿ ನೀಡಿದ ಗ್ರಾಮೀಣ ಭಾಗದ ರೈತ ಮಹಿಳೆಯರು
ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಸಿರಿಧಾನ್ಯ ಐಸ್‌ಕ್ರೀಂ: ತಂಜಾವೂರಿನ ರಾಷ್ಟ್ರೀಯ ಆಹಾರ ತಂತ್ರಜ್ಞಾನ ಉದ್ಯಮಶೀಲತೆ ಮತ್ತು ನಿರ್ವಹಣೆ ಸಂಸ್ಥೆಯು ಸಿರಿಧಾನ್ಯದ ಮೂಲಕ ಐಸ್ ಕ್ರೀಂ ತಯಾರಿಸುವ ನೂತನ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿ, ಕೃಷಿ ಮೇಳದಲ್ಲಿಯೇ ಬಿಡುಗಡೆ ಮಾಡಿದ್ದಾರೆ. ಮೇಳಕ್ಕೆ ಭೇಟಿ ನೀಡಿದ್ದ ರೈತರಿಗೆ ಉಚಿತವಾಗಿ ಐಸ್ ಕ್ರೀಂ ವಿತರಣೆ ಮಾಡಲಾಗುತ್ತಿತ್ತು.

'ಹಾಲು ಉಪಯೋಗಿಸದೇ ಈ ಐಸ್‌ಕ್ರೀಂ ತಯಾರಿಸಲಾಗುತ್ತಿದೆ. ಇದು ಕಬ್ಬಿಣಾಂಶ ಮತ್ತು ವಿಟಮಿನ್ ಬಿನಿಂದ ಸಮೃದ್ಧವಾಗಿದೆ. ನವಣೆ, ರಾಗಿ, ಜೋಳ ಮುಂತಾದ ಸಿರಿಧಾನ್ಯಗಳನ್ನು ನೀರಲ್ಲಿ ನೆನೆಸಿಟ್ಟು, ನಿಗದಿತ ಪ್ರಮಾಣದಲ್ಲಿ ಪುಡಿಮಾಡಿ ಅದರ ಹಾಲು ತೆಗೆಯಲಾಗುತ್ತದೆ. ಶೇ 7ರಷ್ಟು ಹಾಲು ರಹಿತ ಕ್ರೀಂ ಬೆರೆಸಿ ಇದನ್ನು ತಯಾರಿಸಲಾಗುತ್ತದೆ. ಯಾವುದೇ ಕೃತಕ ಫ್ಲೇವರ್, ಬಣ್ಣ ಬಳಸುವುದಿಲ್ಲ. ಸಕ್ಕರೆ ಕೂಡ ಸೇರಿಸುವುದಿಲ್ಲ. ಸಿರಿಧಾನ್ಯಗಳಲ್ಲಿರುವ ಕ್ಯಾಲ್ಸಿಯಂ, ಕಬ್ಬಿಣದ ಅಂಶ, ವಿಟಮಿನ್‌ಗಳು ಐಸ್‌ಕ್ರೀಂನಲ್ಲಿರಲಿವೆ' ಎಂದು ಸಂಸ್ಥೆಯ ವಿ. ಪಳನಿಮುತ್ತು ವಿವರಿಸಿದರು.

ರೈತರಿಗೆ ಪ್ರಶಸ್ತಿ ಪ್ರದಾನ

ಬೆಂಗಳೂರಿನ ಜಿಕೆವಿಕೆಯಲ್ಲಿ ನಡೆಯುತ್ತಿರುವ ಕೃಷಿ ಮೇಳದಲ್ಲಿ ಭಾನುವಾರ ಹಾಸನ, ಮಂಡ್ಯ ಮತ್ತು ತುಮಕೂರು ಜಿಲ್ಲಾಮಟ್ಟದ ಪ್ರಗತಿಪರ ರೈತರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ನಿವೃತ್ತ ಕುಲಪತಿ ಪಿ.ಜಿ. ಚಂಗಪ್ಪ, 'ರೈತರು ಕೃಷಿಯಲ್ಲಿ ಯಶಸ್ವಿಯಾಗಬೇಕಾದರೆ ಕೃಷಿಯಲ್ಲಿನ ಖರ್ಚುವೆಚ್ಚಗಳ ಕಡೆಗೆ ಹೆಚ್ಚು ಗಮನ ವಹಿಸಬೇಕು. ಆಗ ಮಾತ್ರ ಆರ್ಥಿಕವಾಗಿ ಸಧೃಡವಾಗಲು ಸಾಧ್ಯ. ಕೃಷಿಕರು ತಾವು ಬೆಳೆದ ಉತ್ಪನ್ನಗಳನ್ನು ತಾವೇ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಕೌಶಲವನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಕೃಷಿ ವಿಶ್ವವಿದ್ಯಾಲಯ ಕುಲಪತಿ ಎಸ್. ವಿ. ಸುರೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಣ ನಿರ್ದೇಶಕ ಕೆ.ಸಿ. ನಾರಾಯಣಸ್ವಾಮಿ, ಸ್ನಾತಕೋತ್ತರ ಡೀನ್ ಎಚ್.ಸಿ. ಪ್ರಕಾಶ, ಸಂಶೋಧನಾ ನಿರ್ದೇಶಕ ವೆಂಕಟೇಶ, ವಿಸ್ತರಣಾ ನಿರ್ದೇಶಕ ವಿ.ಎಲ್. ಮಧುಪ್ರಸಾದ್ ಇದ್ದರು.

ಕೃಷಿಮೇಳದಲ್ಲಿ ಸಿರಿಧಾನ್ಯದಿಂದ ಬಿಡಿಸಿದ ರಂಗೋಲಿ ಜನರನ್ನು ಆಕರ್ಷಿಸಿತು

ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಯುತ್ತಿರುವ ಕೃಷಿ ಮೇಳದಲ್ಲಿ ಭಾನುವಾರ ಭಾಗವಹಿಸಿದ್ದ ಜನಸಾಗರ

ನಗರದಲ್ಲಿ ಭಾನುವಾರ 'ರಾಜರಾಜೇಶ್ವರಿ ಸಹಸ್ರಾರ್ಜುನ ಮಹಾರಾಜ ಜಯಂತಿ ಸಮಿತಿ' ಆಯೋಜಿಸಿದ್ದ 'ಸಹಸ್ರಾರ್ಜುನ ಮಹರಾಜ'ರ ಜಯಂತಿ' ಕಾರ್ಯಕ್ರಮದಲ್ಲಿ (ಎಡದಿಂದ) ಅಖಿಲ ಭಾರತೀಯ ಸೋಮವಂಶಿಯ ಸಹಸ್ರಾರ್ಜುನ ಕ್ಷತ್ರಿಯ ಸಮಾಜದ ವೈಸ್ ಚೇರ್ಮನ್ ಡಮಾಮ್ ವಿ. ಸತ್ಯನಾರಾಯಣ, ಸುಲೇಗಾಯಿ ದೋಂಡೋಸಾ ಗ್ರೂಪ್‌ನ ಎಸ್.ಎನ್ ಶ್ರೀನಿವಾಸಮೂರ್ತಿ, ಶಾಸಕ ಎಂ. ಕೃಷ್ಣಪ್ಪ, ಅಖಿಲ ಭಾರತೀಯ ಸೋಮವಂಶಿಯ ಸಹಸ್ರಾರ್ಜುನ ಕ್ಷತ್ರಿಯ ಸಮಾಜದ ಅಧ್ಯಕ್ಷ ಶ್ರೀನಿವಾಸ್ ಶ್ರೀಹರಿ ಖೋಡೆ ಮತ್ತು ಖಜಾಂಜಿ ಎಂ.ಸಿ ಉಮಾಶಂಕರ್ ಧ್ವಜಾರೋಹಣ ಮಾಡಿ ಮಾತುಕತೆಯಲ್ಲಿ ತೊಡಗಿದ್ದರು (ಎಡಚಿತ್ರ) ಅಂಬಾಭವಾನಿ ಸೇವಾಕೇಂದ್ರದಿಂದ ಬಂಟ್ಸ್ ಸಂಘದವರೆಗೆ ನಡೆದ ಶ್ರೀ ಸಹಸ್ರಾರ್ಜುನ ಮಹಾರಾಜರ ಭಾವಚಿತ್ರದ ಮೆರವಣಿಗೆ ನೇತೃತ್ವವನ್ನು ಸಮಿತಿ ಸದಸ್ಯ ಮಗಜಿಬಾದ್ ಕೆ. ಸೋಮಶೇಖರ್, ಸಮಿತಿ ಸಂಚಾಲಕ ಎಂ.ಎನ್.ರಾಮ್ ಮತ್ತಿತ್ತರರು ವಹಿಸಿದ್ದರು
ಪ್ರಜಾವಾಣಿ ಚಿತ್ರ

'ಸೇವೆಯೇ ಸಮಾಜಕ್ಕೆ ಸಲ್ಲಿಸುವ ಗೌರವ'

ಅದ್ದೂರಿಯಾಗಿ ನಡೆದ ಸಹಸ್ರಾರ್ಜುನ ಮಹಾರಾಜರ ಜಯಂತಿ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಾವ ಸ್ಥಾನಮಾನ ಇಲ್ಲದೆಯೂ ಸೇವೆ ಮಾಡಲು ಸಾಧ್ಯ. ಸೇವೆಯೇ ಸಮಾಜದ ಮೇಲೆ ತೋರುವ ಪ್ರೀತಿ, ಗೌರವ ಎಂದು ಶಾಸಕ ಎಂ. ಕೃಷ್ಣಪ್ಪ ತಿಳಿಸಿದರು.

ರಾಜರಾಜೇಶ್ವರ ಸಹಸ್ರಾರ್ಜುನ ಮಹಾರಾಜರ ಜಯಂತಿ ಸಮಿತಿಯು ಎಬಿಎಸ್‌ಎಸ್‌ಕೆ ಸಮಾಜ, ಎಸ್‌ಎಸ್‌ಕೆ ಸಂಘ, ಎಸ್‌ಎಸ್‌ಕೆ ಕೋ-ಆಪರೇಟಿವ್ ಸೊಸೈಟಿ ಸಹಯೋಗದಲ್ಲಿ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 40ನೇ ವರ್ಷದ 'ಸಹಸ್ರಾರ್ಜುನ ಮಹಾರಾಜರ ಜಯಂತಿ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಭವನ ನಿರ್ಮಾಣ ಸೇರಿದಂತೆ ಸಮುದಾಯದ ವಿವಿಧ ಬೇಡಿಕೆಗಳನ್ನು ಈಡೇರಿಸಲಾಗುವುದು' ಎಂದು ಅವರು ಭರವಸೆ ನೀಡಿದರು.

'ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಸಮಾಜವು ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿದೆ. ಸಮಾಜದ ಬೆಳವಣಿಗೆಯ ಹಿತದೃಷ್ಟಿಯಿಂದ ರಾಜಕೀಯ ಪ್ರಾತಿನಿಧ್ಯ ನೀಡಬೇಕು. ನಾಮನಿರ್ದೇಶನ ಅಥವಾ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡಬೇಕು. ಸರ್ಕಾರದ ವಿವಿಧ ಯೋಜನೆಗಳು ನಮ್ಮ ಸಮಾಜಕ್ಕೂ ದೊರೆಯುವಂತೆ ಮಾಡಬೇಕು' ಎಂದು ಸಮಾಜದ ಮುಖಂಡರು ಆಗ್ರಹಿಸಿದರು.

'ಸಮಾಜವನ್ನು ಇನ್ನಷ್ಟು ಒಗ್ಗೂಡಿಸಲು ಮತ್ತು ಸಮಸ್ಯೆಗಳನ್ನು ಪರಿಹರಿಸಲು ಕೈಗೊಳ್ಳಬೇಕಾದ ಕಾರ್ಯಗಳನ್ನು ಚರ್ಚಿಸಲು ಪ್ರತಿ ಮೂರು ತಿಂಗಳಿಗೊಮ್ಮೆ ಸಮಾಲೋಚನಾಸಭೆ ನಡೆಸಬೇಕು. ಪ್ರತಿಭಾವಂತರನ್ನು, ಸಾಧಕರನ್ನು, ಸಮಾಜದ ಹಿರಿಯರನ್ನು, ನಾಯಕರನ್ನು ಗುರುತಿಸಿ ಗೌರವಿಸುವ ಕಾರ್ಯಗಳು ಇನ್ನಷ್ಟು ಹೆಚ್ಚಾಗಬೇಕು' ಎಂದು ಸಲಹೆ ನೀಡಿದರು.

ಆಕರ್ಷಕ ಮೆರವಣಿಗೆ: ಮಾಗಡಿ ರಸ್ತೆಯ ಟೋಲ್‌ಗೇಟ್ ಬಳಿ ಇರುವ ಅಂಬಾಭವಾನಿ ಸೇವಾ ಕೇಂದ್ರದಿಂದ ಸಭಾಂಗಣದವರೆಗೆ ರಾಜರಾಜೇಶ್ವರ ಸಹಸ್ರಾರ್ಜುನ ಮಹಾರಾಜರ ಭಾವಚಿತ್ರದೊಂದಿಗೆ ಮೆರವಣಿಗೆ ನಡೆಸಲಾಯಿತು. ಅಖಿಲ ಭಾರತೀಯ ಸೋಮವಂಶೀಯ ಸಹಸ್ರಾರ್ಜುನ ಕ್ಷತ್ರಿಯ ಸಮಾಜದ ಅಧ್ಯಕ್ಷ ಶ್ರೀನಿವಾಸ್ ಶ್ರೀಹರಿ ಖೋಡೆ, ಸುಲೇಗಾಯಿ ಧೋಂಡೂಸಾ ಗ್ರೂಪ್‌ನ ಎಸ್.ಎನ್. ಶ್ರೀನಿವಾಸಮೂರ್ತಿ ಮೆರವಣಿಗೆಗೆ ಚಾಲನೆ ನೀಡಿದರು.

ಫ್ಯಾನ್ಸಿ ಡ್ರೆಸ್ ಸ್ಪರ್ಧೆ, ಸ್ಥಳದಲ್ಲೇ ಚಿತ್ರ ಬರೆಯುವ ಸ್ಪರ್ಧೆ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಬಹುಮಾನ ವಿತರಣೆ ಸೇರಿ ದಿನವಿಡೀ ವೈವಿಧ್ಯಮಯ ಕಾರ್ಯಕ್ರಮಗಳು ನಡೆದವು. ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಲಾಯಿತು. 80 ವರ್ಷ ದಾಟಿದ ಸಮಾಜದ ಹಿರಿಯರನ್ನು ಗೌರವಿಸಲಾಯಿತು.

ಅಖಿಲ ಭಾರತೀಯ ಸೋಮವಂಶೀಯ ಸಹಸ್ರಾರ್ಜುನ ಕ್ಷತ್ರಿಯ ಸಮಾಜದ ಉಪಾಧ್ಯಕ್ಷ ಡಮಾಮ್ ವಿ. ಸತ್ಯನಾರಾಯಣ, ಬಿಬಿಎಂಪಿ ಮಾಜಿ ಸದಸ್ಯರಾದ ಎಚ್. ರವೀಂದ್ರ, ವಿ.ವಿ. ಸತ್ಯನಾರಾಯಣ, ಎಸ್‌ಎಸ್‌ಕೆ ಸಂಘದ ಅಧ್ಯಕ್ಷ ಎಸ್. ಅನಂತ್, ಎಸ್‌ಎಸ್‌ಕೆ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷ ಸತೀಶ್ ಇ. ವಾಗೆಲೆ, ಯೂತ್ ಫಾರ್ ಪರಿವರ್ತನ್ ಅಧ್ಯಕ್ಷ ಅಮಿತ್ ಅಮರ್‌ನಾಥ್, ಸಮಾಜ ಸೇವಕ ಡಿ.ಎಚ್. ನಾರಾಯಣಸಾ, ಜಯಂತಿ ಮಹೋತ್ಸವದ ಸಂಚಾಲಕರಾದ ಎಂ.ಎನ್.ರಾಮ್, ಕೆ.ವಸಂತ್, ಖಜಾಂಚಿ ಎಂ.ಸಿ. ಉಮಾಶಂಕರ್, ಕಾರ್ಯಕಾರಿ ಸಮಿತಿ ಸದಸ್ಯರಾದ ಜಗದೀಶ್ ಡಮಾಮ್, ಲೀಲಾ ಜಗದೀಶ್, ಮಗಜಿಬಾದ್ ಕೆ.ಸೋಮಶೇಖರ್, ಕಲಬುರಗಿ ಎ. ವೆಂಕಟೇಶ್ ಇದ್ದರು.

ಮಾರಕಾಸ್ತ್ರ ಹಿಡಿದು ರೀಲ್; ಇಬ್ಬರ ಸೆರೆ

ಕೋಲಾರ: ಕೈಯಲ್ಲಿ ಮಾರಕಾಸ್ತ್ರ ಹಿಡಿದುಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ರೀಲ್ ಮಾಡಿ ವಿಡಿಯೊ ಹರಿಬಿಟ್ಟಿದ್ದ ಇಬ್ಬರು ಯುವಕರ ಮೇಲೆ ವೇಮಗಲ್ ಠಾಣೆ ಪೊಲೀಸರು ಅಕ್ರಮ ಶಸ್ತ್ರಾಸ್ತ್ರ ಕಾಯ್ದೆಯಡಿ ಪ್ರಕರಣ ದಾಖಲಿಸಿ ಬಂಧಿಸಿದ್ದಾರೆ.

ನರಸಾಪುರದ ವೇಣು, ಪವನ್ ಎಂಬುವರನ್ನು ಬಂಧಿಸಲಾಗಿದೆ ಎಂದು ಇನ್‌ಸ್ಪೆಕ್ಟರ್ ವೆಂಕಟೇಶ್ ತಿಳಿಸಿದ್ದಾರೆ.

'ಸಾಮಾಜಿಕ ಜಾಲತಾಣಗಳ ಮೇಲೆ ಕೋಲಾರ ಜಿಲ್ಲಾ ಪೊಲೀಸರು ನಿರಂತರವಾಗಿ ನಿಗಾ ಇರಿಸಿದ್ದು ಯಾವುದೇ ರೀತಿಯ ಕಾನೂನು ಉಲ್ಲಂಘನೆ, ಸಾಮಾಜಿಕ ಶಾಂತಿ-ಸುವ್ಯವಸ್ಥೆ ಕದಡುವ ಪ್ರಯತ್ನದ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು' ಎಂದು ಎಚ್ಚರಿಕೆ ನೀಡಿದ್ದಾರೆ.

ಸಾಧಕರಿಗೆ ಸನ್ಮಾನ...

ಕರ್ನಾಟಕ ಲೇಖಕಿಯರ ಸಂಘ ಮತ್ತು ಕಮಲಾ ಹಂಪನಾ ಸಾಹಿತ್ಯ ವೇದಿಕೆ ಸಹಯೋಗದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಮಲಾ ಹಂಪನಾ ದತ್ತಿ ಉಪನ್ಯಾಸ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಲೇಖಕ ಮತ್ತು ಅನುವಾದಕ ಮಾಹೆರ್ ಮನ್ಸೂರ್ ಮತ್ತು ಸಾಮಾಜಿಕ ಹೋರಾಟಗಾರ್ತಿ ದು.ಸರಸ್ವತಿ ಅವರಿಗೆ 'ಕಮಲಾ ಹಂಪನಾ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಮಲಾ ಹಂಪನಾ ಸಾಹಿತ್ಯ ವೇದಿಕೆಯ ಕಾರ್ಯದರ್ಶಿ ರಾಜಶ್ರೀ ಎಚ್.ಎನ್., ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪದ್ಮಾ ಶೇಖರ್, ಲೇಖಕಿ ಕಮಲಾ ಹಂಪನಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಧರಣೀದೇವಿ ಮಾಲಗತ್ತಿ, ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪಾ ಇದ್ದರು

'ನಕಾರಾತ್ಮಕ ಸಂಗತಿಗಳಿಂದ ದೂರವಿರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಾರಾತ್ಮಕ ಸಂಗತಿಗಳಿಂದ ದೂರವಿದ್ದಷ್ಟು ಉತ್ತಮ ಮನುಷ್ಯರಾಗಲು ಸಾಧ್ಯ ಎಂದು ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಮಲ್ಲೇಪುರಂ ಜಿ. ವೆಂಕಟೇಶ ಹೇಳಿದರು.

ಸಮನ್ವಿತ ಪ್ರಕಾಶನ ಭಾನುವಾರ ಆಯೋಜಿಸಿದ್ದ ರಾಜಶೇಖರ ಜೋಗಿನ್ಮನೆ ಅವರ 'ಕೇಳು ಧನಂಜಯ' ಕಾದಂಬರಿ ಹಾಗೂ ಮರುಮುದ್ರಣಗೊಂಡ 'ಬಿಂಗಿ', 'ಇಗ್ಗಪ್ಪಣ್ಣನ ವಿಗ್ರಹಾನ್ವೇಷಣೆ' ಕಥಾಸಂಕಲನಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಪೂರ್ವಗ್ರಹ ಪೀಡಿತ ಅಂಶಗಳನ್ನೇ ಆವಾಹನೆ ಮಾಡಿಕೊಳ್ಳುತ್ತಾ ಹೋದರೆ ಮನಸ್ಸು ಕಲ್ಮಶವಾಗುತ್ತದೆ. ಸಾಹಿತ್ಯದ ಓದು ಇದ್ದರೆ ಪೂರ್ವಗ್ರಹದಿಂದ ಹೊರಬಂದು ನೆಮ್ಮದಿಯನ್ನು ಕಾಣಲು ಸಾಧ್ಯ' ಎಂದು ವಿಶ್ಲೇಷಿಸಿದರು.

'ಬದುಕು ನಾವು ತಿಳಿದುಕೊಂಡಷ್ಟು ಸರಳವಲ್ಲ, ಸಂಕೀರ್ಣ ಜಗತ್ತು. ಹಣ, ಅಧಿಕಾರ, ಸಂಪತ್ತು ನಮ್ಮೊಳಗೆ ಹುಟ್ಟಿಸುವ ಸ್ವಾರ್ಥಗಳ ಬಗ್ಗೆ 'ಕೇಳು ಧನಂಜಯ' ಕಾದಂಬರಿ ತಿಳಿಸಿಕೊಡುತ್ತದೆ' ಎಂದು ಹೇಳಿದರು.

ಕೃತಿಕಾರ ರಾಜಶೇಖರ ಜೋಗಿನ್ಮನೆ, 'ಪ್ರಜಾವಾಣಿ'ಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಕಥೆಗಾರ ಅಬ್ದುಲ್ ರಶೀದ್, ಪ್ರಕಾಶಕ ರಾಧಾಕೃಷ್ಣ ಕೌಂಡಿನ್ಯ ಇದ್ದರು.

ರಾಜಶೇಖರ ಜೋಗಿನ್ಮನೆ ಅವರ 'ಕೇಳು ಧನಂಜಯ', 'ಬಿಂಗಿ', 'ಇಗ್ಗಪ್ಪಣ್ಣನ ವಿಗ್ರಹಾನ್ವೇಷಣೆ' ಪುಸ್ತಕಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಲೇಖಕ ಅಬ್ದುಲ್ ರಶೀದ್, ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಮಲ್ಲೇಪುರಂ ಜಿ. ವೆಂಕಟೇಶ, ಪ್ರಕಾಶಕ ರಾಧಾಕೃಷ್ಣ ಕೌಂಡಿನ್ಯ ಇದ್ದರು

ಕ್ರೀಡಾ ಸುದ್ದಿ

ಯಶಸ್ವಿನಿಗೆ ಅಚ್ಚರಿ ಗೆಲುವು

ಬೆಂಗಳೂರು: ಭಾರತದ ಯಶಸ್ವಿನಿ ಪನ್ವಾರ್ ಅವರು ಇಲ್ಲಿ ಆರಂಭವಾದ ಐಟಿಎಫ್ ಮಹಿಳಾ ವಿಶ್ವ ಟೂರ್ ಟೆನಿಸ್ ಟೂರ್ನಿಯ ಅರ್ಹತಾ ಹಂತದ ಮೊದಲ ಸುತ್ತಿನಲ್ಲಿ ಅಚ್ಚರಿಯ ಜಯ ಸಾಧಿಸಿದರು.

ಬೌರಿಂಗ್ ಇನ್‌ಸ್ಟಿಟ್ಯೂಟ್ ಟೆನಿಸ್ ಕೋರ್ಟ್‌ನಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಯಶಸ್ವಿನಿ 7-5, 6-2 ರಿಂದ ನೆದರ್ಲೆಂಡ್ಸ್‌ನ ಡೆಮಿ ಟ್ರಾನ್ ಅವರನ್ನು ಮಣಿಸಿದರು. ಎರಡು ಗಂಟೆಗೂ ಹೆಚ್ಚು ಅವಧಿ ನಡೆದ ಇನ್ನೊಂದು ಪಂದ್ಯದಲ್ಲಿ ವಂಶಿತಾ ಪಠಾನಿಯಾ 6-3, 4-6, 10-8 ರಿಂದ ಪ್ರಿಯಾನ್ಶಿ ಭಂಡಾರಿ ಅವರನ್ನು ಪರಾಭವಗೊಳಿಸಿದರು.

ಅರ್ಹತಾ ಸುತ್ತಿನಲ್ಲಿ ಅಗ್ರಶ್ರೇಯಾಂಕ ಹೊಂದಿರುವ ಸಂದೀಪ್ತಿ ಸಿಂಗ್ ರಾವ್ 6-0, 6-1 ರಿಂದ ಸಾಯ್ ಜಾನ್ವಿ ವಿರುದ್ಧ ಗೆದ್ದರೆ, ಎರಡನೇ ಶ್ರೇಯಾಂಕದ ಆಟಗಾರ್ತಿ ಶ್ರಾವ್ಯ ಶಿವಾನಿ 6-1, 7-5 ರಿಂದ ಪ್ರಿಯಾಂಕಾ ರಾಡ್ರಿಕ್ಸ್ ಅವರನ್ನು ಮಣಿಸಿದರು. ಇತರ ಪಂದ್ಯಗಳಲ್ಲಿ ಸೋನಲ್ ಪಾಟೀಲ್ 4-6, 6-4, 10-8 ರಿಂದ ಲಾಲಿತ್ಯ ಕಲ್ಲೂರಿ ವಿರುದ್ಧ; ಸೋಹಾ ಸಾದಿಕ್ 6-2, 6-3 ರಿಂದ ಶೆಫಾಲಿ ಅರೋರಾ ವಿರುದ್ಧ; ಸೆಜಲ್ ಗೋಪಾಲ್ 3-6, 6-2, 11-9 ರಿಂದ ಮಿಹಿಕಾ ಯಾದವ್ ವಿರುದ್ಧ; ಆರತಿ ಮುನಿಯನ್ 6-0, 6-3 ರಿಂದ ವಂಶಿಕಾ ಚೌಧರಿ ವಿರುದ್ಧ; ಪೂಜಾ ಇಂಗಳೆ 6-0, 6-1 ರಿಂದ ನಿತೇಶಾ ಸೆಲ್ವರಾಜ್ ವಿರುದ್ಧ; ನಿಧಿತ್ರಾ ರಾಜಮೋಹನ್ 6-4, 6-2 ರಿಂದ ಸಂಜಿತಾ ರಮೇಶ್ ವಿರುದ್ಧ; ಎಸ್. ವಿದ್ಯಾಲಕ್ಷ್ಮಿ 6-0, 6-0 ರಿಂದ ಅಪೂರ್ವ ವೇಮುರಿ ವಿರುದ್ಧವೂ ಗೆಲುವು ಸಾಧಿಸಿದರು.

ನಗರದಲ್ಲಿ ಇಂದು

ಮಕ್ಕಳ ಹಕ್ಕುಗಳ ಸಂಸತ್-2023: ಅಧ್ಯಕ್ಷತೆ: ನಾಗಣ್ಣಗೌಡ, ಉಪಸ್ಥಿತಿ: ಪ್ರಸೂನ್ ಸೇನ್, ವಾಸುದೇವ ಶರ್ಮ ಎನ್.ವಿ., ಸ್ಥಳ: ಪಾಲನಾ ಭವನ, ಬೆಳಿಗ್ಗೆ 10 ರಿಂದ

ಆಡಿಟ್ ದಿವಸ್-2023: ಅತಿಥಿ: ಥಾವರಚಂದ್ ಗೆಹಲೋತ್, ಆಯೋಜನೆ: ಇಂಡಿಯನ್ ಆಡಿಟ್ ಆ್ಯಂಡ್ ಅಕೌಂಟ್ಸ್ ಡಿಪಾರ್ಟ್‌ಮೆಂಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 11

34ನೇ ವರ್ಷ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ: ಅತಿಥಿಗಳು: ಆರ್. ಅಶೋಕ, ಮಹೇಂದ್ರ ಮುನ್ನೊತ್, ಆರ್. ಚಂದ್ರಶೇಖರ್, ರಂಗಸ್ವಾಮಿ, ಜೋಗಿಲ ಸಿದ್ಧರಾಜು, ಆಯೋಜನೆ: ರಂಗಸಾಗರ, ಸ್ಥಳ: ನಗರ ಕೇಂದ್ರ ಗ್ರಂಥಾಲಯ, ಕುಮಾರಸ್ವಾಮಿ ಬಡಾವಣೆಯ ಶಾಖಾ ಆವರಣ, ಸಂಜೆ 5

ಗಣೇಶ ದೊಡ್ಡಮನಿ ಅವರ '@50 ಪೆಟ್ರಿಚೋರ್-ಸ್ಮೆಲ್ ಆಫ್ ನೇಚರ್' ಕಲಾಕೃತಿಗಳ ಪ್ರದರ್ಶನ: ಅತಿಥಿಗಳು: ಗುರುರಾಜ ಕರಜಗಿ, ಗೀತಾಂಜಲಿ ಮೈನಿ, ಚಂದ್ರಹಾಸ ಜಾಲಿಹಾಳ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5.30

ಆದಿತ್ಯ ಸದಾಶಿವ ಅವರ 'ದಿ ಮಷಿನ್' ಕಲಾಕೃತಿಗಳ ಪ್ರದರ್ಶನ: ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರ ಕೃಪಾ ರಸ್ತೆ, ಸಂಜೆ 5.30

ನಾಟಕೋತ್ಸವದ ಉದ್ಘಾಟನೆ: ರಂಗಗೀತೆ: ಸಾತ್ವಿಕ ರಂಗತಂಡ, ಅತಿಥಿಗಳು: ಕೆ.ವೈ.ನಾರಾಯಣಸ್ವಾಮಿ, ಸುಬ್ಬು ಹೊಲೆಯಾರ್, ಅರುಣ್ ಸಾಗರ್, ಎನ್. ನರಸಿಂಹಮೂರ್ತಿ, ರಘುನಂದನ್ ಬಿ.ಆರ್., ಎಚ್.ಎನ್. ಆರತಿ, ರಂಗ ಗೌರವ: ಶಶಿಧರ ಅಡಪ, 'ಸೋಮಾಲಿಯಾ ಕಡಲ್ಗಳ್ಳರು' ನಾಟಕ ಪ್ರದರ್ಶನ: ನಿರ್ದೇಶನ: ರಾಜ್‌ಗುರು, ಆಯೋಜನೆ: ರಂಗಪಯಣ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು,
ವಿಜಯಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ವಿಜಯಪುರ
ನೇತೃತ್ವದಲ್ಲಿ ಮತ್ತು ವಿವಿಧ ಸಹಕಾರ ಮಹಾಮಂಡಳ, ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ

70ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಮಾರೋಪ ಸಮಾರಂಭ ಹಾಗೂ ವಿಜಯಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಇದರ ಶತಮಾನೋತ್ಸವ ಭವನ ಉದ್ಘಾಟನೆ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು ಇವರಿಂದ
ಉದ್ಘಾಟನೆ ಮತ್ತು
ಸಹಕಾರ ರತ್ನ ಪ್ರಶಸ್ತಿ ಪ್ರದಾನ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಜಲಸಂಪನ್ಮೂಲ ಮತ್ತು ಬೆಂಗಳೂರು ನಗರಾಭಿವೃದ್ಧಿ ಸಚಿವರು ಇವರಿಂದ
ಸಹಕಾರಿ ಪಿತಾಮಹ ಸಿದ್ದನಗೌಡ ಸಂಣರಾಮನಗೌಡ ಪಾಟೀಲರ ಭಾವಚಿತ್ರಕ್ಕೆ ಪುಷ್ಪಾರ್ಚನೆ

ದಿನಾಂಕ: 20.11.2023, ಸೋಮವಾರ ಬೆಳಗ್ಗೆ 10 ಗಂಟೆಗೆ
ಸ್ಥಳ: ವಿಜಯಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಆವರಣ, ಕಿತ್ತೂರ ಚನ್ನಮ್ಮ ನಗರ, ಸೋಲಾಪುರ ರಸ್ತೆ, ವಿಜಯಪುರ.

ಸಹಕಾರ ವಾರಪತ್ರಿಕೆಯ ವಿಶೇಷ ಸಂಚಿಕೆ ಬಿಡುಗಡೆ
ಶ್ರೀ ಎಂ.ಬಿ. ಪಾಟೀಲ
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವರು,

ಸಹಕಾರ ಧ್ವಜಾರೋಹಣ
ಶ್ರೀ ಕೆ. ಎನ್. ರಾಜಣ್ಣ
ಮಾನ್ಯ ಸಹಕಾರ ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಸಚಿವರು

ಅಧ್ಯಕ್ಷತೆ
ಶ್ರೀ ಬಸನಗೌಡ ಆರ್. ಪಾಟೀಲ (ಯತ್ನಾಳ)
ಮಾನ್ಯ ಶಾಸಕರು, ವಿಜಯಪುರ ನಗರ ವಿಧಾನಸಭಾ ಕ್ಷೇತ್ರ

ಸಹಕಾರ ಮಹಾಮಂಡಳದ ಕಾರ್ಯಚಟುವಟಿಕೆಗಳ ಕೈಪಿಡಿ ಬಿಡುಗಡೆ
ಶ್ರೀ ಸತೀಶ್ ಜಾರಕಿಹೊಳಿ
ಮಾನ್ಯ ಲೋಕೋಪಯೋಗಿ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರು

ಉತ್ತಮ ಸಹಕಾರ ಸಂಘಗಳಿಗೆ ಪ್ರಶಸ್ತಿ ಪ್ರದಾನ
ಶ್ರೀ ಆರ್.ಬಿ. ತಿಮ್ಮಾಪೂರ
ಮಾನ್ಯ ಅಬಕಾರಿ ಹಾಗೂ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವರು,

ರೈತರಿಗೆ ಕೃಷಿ ಸಾಲ ವಿತರಣೆ
ಶ್ರೀ ಶಿವಾನಂದ ಎಸ್. ಪಾಟೀಲ
ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ ಮತ್ತು ಅಧ್ಯಕ್ಷರು, ವಿಜಯಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ವಿಜಯಪುರ.

ವಿವಿಧ ಸಹಕಾರ ಸಂಸ್ಥೆಗಳ ಮಳಿಗೆಗಳ ಉದ್ಘಾಟನೆ
ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್
ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರು

ಸ್ವಸಹಾಯ ಸಂಘಗಳಿಗೆ ಸಾಲ ವಿತರಣೆ
ಶ್ರೀ ಅಶೋಕ್ ಮಹದೇವಪ್ಪ ಪಟ್ಟಣ್
ಮಾನ್ಯ ಸರ್ಕಾರಿ ಮುಖ್ಯ ಸಚೇತಕರು, ವಿಧಾನಸಭೆ
ಶ್ರೀ ಪ್ರಕಾಶ ಬಿ. ಹುಕ್ಕೇರಿ
ಕರ್ನಾಟಕದ ಮಾನ್ಯ ವಿಶೇಷ ಪ್ರತಿನಿಧಿ ನವದೆಹಲಿ ಹಾಗೂ ಶಾಸಕರು, ವಿಧಾನ ಪರಿಷತ್

ಪ್ರಾಸ್ತಾವಿಕ ನುಡಿ
ಶ್ರೀ ಜಿ.ಟಿ. ದೇವೇಗೌಡ
ಮಾನ್ಯ ಶಾಸಕರು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು.

ಹಾಗೂ ಲೋಕಸಭೆ ಮತ್ತು ರಾಜ್ಯಸಭೆಯ ಮಾನ್ಯ ಸಂಸದರು, ವಿಧಾನಸಭೆ ಮತ್ತು ವಿಧಾನ ಪರಿಷತ್‌ನ ಮಾನ್ಯ ಶಾಸಕರು ಆಹ್ವಾನಿತ ಗಣ್ಯರಾಗಿ ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ.ದ ಮಾನ್ಯ ಉಪಾಧ್ಯಕ್ಷರು, ನಾಮನಿರ್ದೇಶಿತ ನಿರ್ದೇಶಕರು, ನಿರ್ದೇಶಕರುಗಳು, ವೃತ್ತಿಪರ ನಿರ್ದೇಶಕರು ಹಾಗೂ ವಿವಿಧ ಜಿಲ್ಲಾ ಸಹಕಾರಿ ಮಹಾಮಂಡಳ ನಿ.ಗಳ, ಸಹಕಾರಿ ಸಂಘಗಳ, ಒಕ್ಕೂಟಗಳ, ಯೂನಿಯನ್ ನಿ.ಗಳ ಮಾನ್ಯ ಅಧ್ಯಕ್ಷರುಗಳು ಮತ್ತು ಸ್ಥಳೀಯ ಚುನಾಯಿತ ಜನಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಶ್ರೀ ಕೆ.ಎನ್.ರಾಜಣ್ಣ, ಮಾನ್ಯ ಸಹಕಾರ ಸಚಿವರು, ಶಿವಮೊಗ್ಗದಲ್ಲಿ ನಡೆದ 70ನೇ ಅಖಿಲ ಭಾರತ ಸಹಕಾರ ಸಪ್ತಾಹದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ ಸಂದರ್ಭ

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"
ಸರ್ವರಿಗೂ ಆದರದ ಸ್ವಾಗತ
ಕರ್ನಾಟಕ ವಾರ್ತೆ

'ಭಾರತ ಸಂವಿಧಾನ, ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ರಾಜಕೀಯ ಪ್ರಾತಿನಿಧ್ಯ' ವಿಚಾರ ಸಂಕಿರಣ

'ಲಿಂಗತ್ವ ಅಲ್ಪಸಂಖ್ಯಾತರಿಗೆ ಮೀಸಲು ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿ ಲಿಂಗತ್ವ ಅಲ್ಪಸಂಖ್ಯಾತರಿಗೆ ರಾಜಕೀಯ ಮೀಸಲು ಕಲ್ಪಿಸಬೇಕು. ಆ ಮೂಲಕ ಅವರ ಹಕ್ಕುಗಳಿಗೆ ಬಲ ತುಂಬುವ ಕೆಲಸ ಮಾಡಬೇಕಿದೆ ಎಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಹೇಳಿದರು.

ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳಿಗಾಗಿ ಕಾರ್ಯ ನಿರ್ವಹಿಸುತ್ತಿರುವ 'ಒಂದೆಡೆ' ಸಂಘಟನೆಯ ದಶಮಾನೋತ್ಸವದ ಅಂಗವಾಗಿ ನಗರದ ಗಾಂಧಿ ಭವನದಲ್ಲಿ ಭಾನುವಾರ ನಡೆದ 'ಭಾರತದ ಸಂವಿಧಾನ ಹಾಗೂ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ರಾಜಕೀಯ ಪ್ರಾತಿನಿಧ್ಯ' ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

'ಸಂಸತ್ತಿನಲ್ಲಿ ಮಂಡನೆಯಾದ 28 ವರ್ಷಗಳ ಬಳಿಕ ಮಹಿಳಾ ಮೀಸಲಾತಿ ಮಸೂದೆಗೆ ಅನುಮೋದನೆ ದೊರಕಿದೆ. ಅದೂ, ಮುಂದೆಂದೋ ಜಾರಿಯಾಗುವ ಷರತ್ತಿನೊಂದಿಗೆ. 2011ರ ಜನಗಣತಿಯ ದತ್ತಾಂಶಗಳ ಆಧಾರದಲ್ಲೇ ಮಹಿಳಾ ಮೀಸಲಾತಿ ಜಾರಿಗೆ ಬರಲಿ. ಅದರ ಜೊತೆಯಲ್ಲೇ ಲಿಂಗತ್ವ ಅಲ್ಪಸಂಖ್ಯಾತರಿಗೂ ರಾಜಕೀಯ ಮೀಸಲಾತಿ ದೊರಕಲಿ' ಎಂದು ಆಗ್ರಹಿಸಿದರು.

ನಿಖರ ದತ್ತಾಂಶ ಅಗತ್ಯ: ನಿವೃತ್ತ ಪ್ರಾಧ್ಯಾಪಕ ಪುರುಷೋತ್ತಮ ಬಿಳಿಮಲೆ ಮಾತನಾಡಿ, 'ಲಿಂಗತ್ವ ಅಲ್ಪಸಂಖ್ಯಾತರಿಗೆ ಸಂಬಂಧಿಸಿದಂತೆ ಭಾರತದಲ್ಲಿ ನಿಖರವಾದ ದತ್ತಾಂಶಗಳ ಕೊರತೆ ಇದೆ. ಬಹುತೇಕ ಸಂದರ್ಭಗಳಲ್ಲಿ ಇಂತಹ ದತ್ತಾಂಶಗಳು ಬಂಡವಾಳಾಹಿಗಳ ಪ್ರಭಾವದಿಂದ ರೂಪುಗೊಂಡಿರುತ್ತವೆ. ಈಗ ರಾಜಕೀಯ ಮೀಸಲಾತಿ ಪಡೆಯುವುದಕ್ಕೆ ಪೂರಕವಾಗಿ ನಿಖರವಾದ ದತ್ತಾಂಶಗಳನ್ನು ಸಂಗ್ರಹಿಸುವ ಅಗತ್ಯವಿದೆ' ಎಂದರು.

ಸಂವಾದ ನಿರ್ವಹಣೆ ಮಾಡಿದ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಎಂ.ಎಸ್. ಆಶಾದೇವಿ, 'ಲಿಂಗತ್ವ ಅಲ್ಪಸಂಖ್ಯಾತರ ಕುರಿತು ಸಮರ್ಪಕವಾಗಿ ಅರಿವು ಮೂಡಿಸುವಲ್ಲಿ ನಾವು ಇನ್ನೂ ಸಫಲವಾಗಿಲ್ಲ. ಲಿಂಗತ್ವ ಅಲ್ಪಸಂಖ್ಯಾತರ ಸ್ಥಿತಿ ಶೋಚನೀಯವಾಗಿದೆ' ಎಂದರು.

ರಾಜ್ಯ ಅಂತರ್ಲಿಂಗಿ ಅಸೋಸಿಯೇಷನ್‌ನ ಅಬೇದಾ ಬೇಗಂ ಮತ್ತು ಶೈನಾಜ್ ಬೇಗಂ ಸಭೆಯನ್ನು ಉದ್ಘಾಟಿಸಿದರು. ಒಂದೆಡೆ ಸಂಘಟನೆಯ ಟ್ರಸ್ಟಿ ಮಾಳವಿಕಾ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಘಟನೆಯ ಪ್ರಮುಖರಾದ ಅಕ್ಕೈ ಪದ್ಮಶಾಲಿ ಉಪಸ್ಥಿತರಿದ್ದರು.

'ಟವೆಲ್ ಹಾಕುವವರಿಂದ ಮುಜುಗರ'

'ವಿಧಾನ ಪರಿಷತ್ ಮತ್ತು ರಾಜ್ಯಸಭೆಗಳಲ್ಲಿ ನಾಮನಿರ್ದೇಶನದ ಮೂಲಕ ಲಿಂಗತ್ವ ಅಲ್ಪಸಂಖ್ಯಾತರಿಗೆ ಪ್ರಾತಿನಿಧ್ಯ ಕಲ್ಪಿಸಬೇಕು. ಈಗ ಅಧಿಕಾರ ಹಿಡಿದವರ ಸುತ್ತ ಠಳಾಯಿಸುವ ಸಾಹಿತಿಗಳು, ಬರಹಗಾರರು ಸೇರಿದಂತೆ ನಮ್ಮ ಸ್ನೇಹಿತರೇ ಆ ಹುದ್ದೆ ಪಡೆಯಲು ಟವೆಲ್ ಹಾಕುವುದನ್ನು ನೋಡಿದರೆ ಮುಜುಗರವಾಗುತ್ತದೆ' ಎಂದು ಪುರುಷೋತ್ತಮ ಬಿಳಿಮಲೆ ಹೇಳಿದರು.

ಬೆಂಗಳೂರಿನ ಗಾಂಧಿ ಭವನದಲ್ಲಿ ಭಾನುವಾರ ನಡೆದ 'ಒಂದೆಡೆ' ಸಂಘಟನೆಯ ದಶಮಾನೋತ್ಸವ ಕಾರ್ಯಕ್ರಮದಲ್ಲಿ ತಮನ್ನಾ ನೇತೃತ್ವದ ಲಿಂಗತ್ವ ಅಲ್ಪಸಂಖ್ಯಾತರ ಕಲಾ ತಂಡದ ಸದಸ್ಯರು ಬದಾಯಿ ಗಾಯನ ಪ್ರಸ್ತುತಪಡಿಸಿದರು –ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ಕೆಆರ್‌ಎಸ್ ಹಿನ್ನೀರಿನಲ್ಲಿ ಮುಳುಗಿ ಮೂವರ ಸಾವು

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ವಿಹಾರಕ್ಕೆಂದು ಬಂದಿದ್ದ ಮೂವರು ಕೆಆರ್‌ಎಸ್ ಜಲಾಶಯದ ಹಿನ್ನೀರಿನಲ್ಲಿ ಮುಳುಗಿ ಭಾನುವಾರ ಮೃತಪಟ್ಟಿದ್ದಾರೆ.

ಮೈಸೂರಿನ 'ಕಾರುಣ್ಯ ಮನೆ ಟ್ರಸ್ಟ್' ಸಿಬ್ಬಂದಿ ಹರೀಶ್ (32), ನಂಜುಂಡ (18), ಜ್ಯೋತಿ (18) ಮೃತರು.

ಟ್ರಸ್ಟ್‌ನ 25 ಮಂದಿ ಮೈಸೂರಿನಿಂದ ಕೆಆರ್‌ಎಸ್ ಹಿನ್ನೀರಿನ ವೇಣುಗೋಪಾಲಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿದ್ದರು. ಅವರಲ್ಲಿ ಕೆಲವರು ದೇವರ ದರ್ಶನ ಪಡೆದ ನಂತರ ಸಮೀಪದ ಹಿನ್ನೀರಿನಲ್ಲಿ ಆಟವಾಡಲು ನೀರಿಗೆ ಇಳಿದಿದ್ದರು. ಜ್ಯೋತಿ ಗುಂಡಿಯಲ್ಲಿ ತುಂಬಿದ್ದ ನೀರಿನಲ್ಲಿ ಮುಳುಗಿದ್ದಾರೆ. ಅವರನ್ನು ರಕ್ಷಿಸಲು ಮುಂದಾದ ಹರೀಶ್ ಕೂಡ ಮುಳುಗಿದ್ದಾರೆ. ಆ ಇಬ್ಬರ ರಕ್ಷಣೆಗೆ ಧಾವಿಸಿದ ನಂಜುಂಡ ಕೂಡ ಮುಳುಗಿ ಮೃತಪಟ್ಟಿದ್ದಾರೆ.

ಕೆಆರ್‌ಎಸ್ ಠಾಣೆ ಪೊಲೀಸರು ಕಾರ್ಯಾಚರಣೆ ನಡೆಸಿ ಮೃತದೇಹಗಳನ್ನು ಮೇಲೆತ್ತಿದರು. ಪ್ರಕರಣ ದಾಖಲಾಗಿದೆ.

ಪ್ರಸಾದ ಸೇವಿಸಿ ಅಸ್ವಸ್ಥ 50ಕ್ಕೂ ಹೆಚ್ಚು ಮಂದಿ ಆಸ್ಪತ್ರೆಗೆ

ರಾಮನಗರ: ನಗರದ ಮುಖ್ಯ ರಸ್ತೆಯಲ್ಲಿರುವ ಹಜರತ್ ಪೀರಾನ್ ಷಾ ವಲಿ ದರ್ಗಾದ ಉರುಸ್ ಅಂಗವಾಗಿ ಭಾನುವಾರ ವಿತರಿಸಿದ ಪ್ರಸಾದ ಸೇವಿಸಿದ 50ಕ್ಕೂ ಹೆಚ್ಚು ಮಂದಿ ಅಸ್ವಸ್ಥರಾಗಿದ್ದಾರೆ. ಮಕ್ಕಳು, ಮಹಿಳೆಯರು ಹಾಗೂ ಹಿರಿಯ ನಾಗರಿಕರು ಅಸ್ವಸ್ಥರಾಗಿದ್ದು ಎಲ್ಲರನ್ನೂ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಉರುಸ್ ನಿಮಿತ್ತ ದರ್ಗಾಕ್ಕೆ ಭೇಟಿ ನೀಡಿದವರಿಗೆ ಬೆಲ್ಲ ಮಿಶ್ರಿತ ಪ್ರಸಾದವನ್ನು ಮಧ್ಯಾಹ್ನ ವಿತರಿಸಲಾಗಿತ್ತು. ಸಂಜೆ ಹೊತ್ತಿಗೆ ಪ್ರಸಾದ ಸೇವಿಸಿದವರಿಗೆ ಹೊಟ್ಟೆ ನೋವು ಬಂದು ವಾಂತಿ ಮಾಡಿಕೊಂಡಿದ್ದಾರೆ. ತಕ್ಷಣ ಸ್ಥಳೀಯರು ಅಸ್ವಸ್ಥರನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ.

ಪ್ರಸಾದ ಪ್ರಯೋಗಾಲಯಕ್ಕೆ: 'ಅಸ್ವಸ್ಥಗೊಂಡಿರುವವರಿಗೆ ಚಿಕಿತ್ಸೆ ನೀಡಲಾಗಿದ್ದು, ಎಲ್ಲರೂ ಚೇತರಿಸಿಕೊಳ್ಳುತ್ತಿದ್ದಾರೆ. ಆಸ್ಪತ್ರೆಗೆ 50 ಮಂದಿ ದಾಖಲಾಗಿದ್ದು, ಬೇರೆ ಕಡೆಯಿಂದಲೂ ವೈದ್ಯರನ್ನು ಕರೆಯಿಸಿಕೊಂಡು ತ್ವರಿತವಾಗಿ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ನಿರಂಜನ್ ತಿಳಿಸಿದರು.

'ಸಾರ್ವಜನಿಕರು ಸೇವಿಸಿರುವ ಬೆಲ್ಲ ಮಿಶ್ರಿತ ಪ್ರಸಾದ ಮಾದರಿಯನ್ನು ಈಗಾಗಲೇ ಸಂಗ್ರಹಿಸಿ ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ದರ್ಗಾ ಬಳಿ ವಿತರಣೆಗೆ ಇಟ್ಟಿದ್ದ ಪ್ರಸಾದ ಹಂಚದಂತೆ ತಡೆದು ವಶಕ್ಕೆ ಪಡೆಯಲಾಗಿದೆ. ಎರಡು ದಿನದೊಳಗೆ ವರದಿ ಬರಲಿದ್ದು, ಘಟನೆಗೆ ನಿಖರ ಕಾರಣ ತಿಳಿಯಲಿದೆ' ಎಂದರು.

ಕಾಂಗ್ರೆಸ್ ಸೇರಿದ ರಾಜ್ಯ ಎಎಪಿ ಮುಖಂಡರು

ಬೆಂಗಳೂರು: ಮುಂಬರುವ ಲೋಕಸಭೆ ಚುನಾವಣೆಗೂ ಮೊದಲು ಪಕ್ಷವನ್ನು ಬಲಪಡಿಸಲು ಮುಂದಾಗಿರುವ ಕಾಂಗ್ರೆಸ್, ಅನ್ಯ ಪಕ್ಷಗಳ ಮುಖಂಡರ 'ಆಪರೇಷನ್ ಹಸ್ತ'ವನ್ನು ಮುಂದುವರಿಸಿದೆ. ಕೆಪಿಸಿಸಿ ಕಚೇರಿಯ ಭಾರತ್ ಜೋಡೋ ಭವನದಲ್ಲಿ ರಾಜ್ಯ ವಿವಿಧೆಡೆಯ ಹಲವು ಮುಖಂಡರು ಭಾನುವಾರ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಆಮ್ ಆದ್ಮಿ ಪಕ್ಷದ (ಎಎಪಿ) ಮುಖಂಡರಾದ ಶಿವಮೊಗ್ಗ ನಗರದ ಟಿ. ನೇತ್ರಾವತಿ, ಬೆಳಗಾವಿ ದಕ್ಷಿಣದ ನೂರ್ ಅಹ್ಮದ್ ಕುತುಬುದ್ದೀನ್ ಮುಲ್ಲಾ, ಶಿವಮೊಗ್ಗ ಗ್ರಾಮಾಂತರದ ಮಂಜುನಾಥ್ ಎಸ್. ಎಸ್., ಬೈಲಹೊಂಗಲದ ಚಿಕ್ಕನಗೌಡ ಮುಂತಾದವರು ತಮ್ಮ ಬೆಂಬಲಿಗರ ಜತೆ 'ಕೈ' ಹಿಡಿದರು.

ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪಕ್ಷದ ಧ್ವಜ ನೀಡಿ ಎಲ್ಲರನ್ನೂ ಕಾಂಗ್ರೆಸ್‌ಗೆ ಬರಮಾಡಿಕೊಂಡರು. ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸಲೀಂ ಅಹ್ಮದ್, ಬಿ.ಎನ್. ಚಂದ್ರಪ್ಪ ಮತ್ತಿತರರು ಇದ್ದರು.

ಇಂದಿರಾ ಜನ್ಮದಿನ ಕಾರ್ಯಕ್ರಮದಲ್ಲಿ ಡಿ.ಕೆ. ಶಿವಕುಮಾರ್ ವ್ಯಂಗ್ಯ

ಕಾಂಗ್ರೆಸ್ 'ಗ್ಯಾರಂಟಿ' ಕದ್ದು ಮೋದಿ ಪ್ರಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಯೋಜನೆಗಳನ್ನು ಕದ್ದು ಪಂಚರಾಜ್ಯಗಳ ಚುನಾವಣೆಯನ್ನು ಪ್ರಧಾನಿ ಮೋದಿ ಎದುರಿಸುತ್ತಿದ್ದಾರೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಲೇವಡಿ ಮಾಡಿದರು.

ಕೆಪಿಸಿಸಿ ಕಚೇರಿಯ 'ಭಾರತ್ ಜೋಡೊ' ಸಭಾಂಗಣದಲ್ಲಿ ಭಾನುವಾರ ನಡೆದ ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರ ಜನ್ಮದಿನಾಚರಣೆ ಮತ್ತು ಬೆಂಗಳೂರು ನೂತನ ಜಿಲ್ಲಾ ಘಟಕಗಳ ಅಧ್ಯಕ್ಷರ ಪದಗ್ರಹಣ ಸಮಾರಂಭದಲ್ಲಿ ಅವರು ಮಾತನಾಡಿದರು.

'ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು ಜನರಿಗೆ ತಲುಪಿದೆಯೇ ಇಲ್ಲವೇ ಎಂದು ತಿಳಿಯಲು ಸಚಿವರಿಗೆ ಸೂಚನೆ ನೀಡಲಾಗಿದೆ. ಇದೇ 28ರಂದು ಕಾಂಗ್ರೆಸ್ ಸಂಸ್ಥಾಪಕರ ದಿನ. ಈ ದಿನದಂದೇ ಪಕ್ಷದ ವತಿಯಿಂದ ಗ್ಯಾರಂಟಿ ಯೋಜನೆಗಳು ಜನರಿಗೆ ತಲುಪಿದೆಯೇ ಎಂದು ಸಮೀಕ್ಷೆ ಮಾಡಲು ಸಮಿತಿ ರಚಿಸಲಾಗುವುದು' ಎಂದರು.

ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರ ಭಾವಚಿತ್ರಕ್ಕೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪುಷ್ಪನಮನ ಸಲ್ಲಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಇದ್ದರು

'ಬಿಜೆಪಿ ಮತ್ತು ಜೆಡಿಎಸ್‌ನವರು ಗ್ಯಾರಂಟಿ ಯೋಜನೆಗಳನ್ನು ವಿರೋಧಿಸಿದವರು. ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ- ಜೆಡಿಎಸ್‌ಗೆ ಮತ ಹಾಕಿದರೆ ಅವರು ಗ್ಯಾರಂಟಿ ಯೋಜನೆಗಳನ್ನು ವಾಪಸ್ ತೆಗೆದುಕೊಳ್ಳುವಂತಹ ಕಾನೂನು ತರುತ್ತಾರೆ. ಅವರ ಈ ಜನವಿರೋಧಿ ಬುದ್ಧಿಯನ್ನು ಮತದಾರರಿಗೆ ತಿಳಿಸುವ ಕೆಲಸ ಮಾಡಬೇಕು. ಯಾವುದೇ ಕಾರಣಕ್ಕೂ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುವುದಾಗಲಿ, ಕಡಿಮೆ ಮಾಡುವುದಾಗಲಿ ಯಾವುದನ್ನೂ ಕಾಂಗ್ರೆಸ್ ಸರ್ಕಾರ ಮಾಡುವುದಿಲ್ಲ. ಈ ವಿಚಾರಗಳನ್ನು ಕಾಂಗ್ರೆಸ್ ಕಾರ್ಯಕರ್ತರು ಮತ್ತು ನಾಯಕರು ಜನರಿಗೆ ಮನವರಿಕೆ ಮಾಡಿಕೊಡಬೇಕು' ಎಂದರು.

'ಇಂದಿರಾಗಾಂಧಿ ಅವರ ಬಗ್ಗೆ ಸೋನಿಯಾ ಗಾಂಧಿ ಬರೆದಿರುವ ಪುಸ್ತಕವನ್ನು ಶೀಘ್ರದಲ್ಲೇ ಕನ್ನಡದಲ್ಲಿ ಪ್ರಕಟಿಸಲಾಗುವುದು. ಈ ಪುಸ್ತಕದಲ್ಲಿ ಇಂದಿರಾಗಾಂಧಿ ಅವರು ಕಾಂಗ್ರೆಸ್ ಪಕ್ಷದ ಬಗ್ಗೆ ಹೇಳಿದ ಮಾತುಗಳನ್ನು ಉಲ್ಲೇಖಿಸಲಾಗಿದೆ' ಎಂದರು.

ಅವಕಾಶ ವಂಚಿತರಿಗೆ ಶಕ್ತಿ: 'ಬಡವರು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಹೀಗೆ ಎಲ್ಲ ಅವಕಾಶ ವಂಚಿತರಿಗೆ ಶಕ್ತಿ ತುಂಬುವುದೇ ನಿಜವಾದ ಸ್ವಾತಂತ್ರ್ಯದ ಅರ್ಥ. ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರು ಅವಕಾಶ ವಂಚಿತರಿಗಾಗಿ ಶ್ರಮಿಸಿದರು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಅವಕಾಶ ವಂಚಿತರ ಬಗ್ಗೆ ಕಾಳಜಿ, ಉಗ್ರವಾದವನ್ನು ತೀವ್ರವಾಗಿ ಹತ್ತಿಕ್ಕುವ ಕೆಲಸ ಮಾಡಿದರು. ಅದಕ್ಕಾಗಿಯೇ ಪ್ರಾಣ ಕಳೆದುಕೊಂಡರು. ದೇಶಕ್ಕಾಗಿ ಪ್ರಾಣ ತೆತ್ತ ಧೀಮಂತ ಮಹಿಳೆ ಅವರು. ಅವರ ಮಾರ್ಗದರ್ಶನದಲ್ಲಿ ನಡೆಯುವುದೇ ಅವರಿಗೆ ಸಲ್ಲಿಸುವ ಗೌರವ' ಎಂದರು.

ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸಲೀಂ ಅಹ್ಮದ್ ಹಾಗೂ ಸಚಿವ ಬೈರತಿ ಸುರೇಶ್, ಕಾಂಗ್ರೆಸ್ ಮುಖಂಡರು ಇದ್ದರು.

ಹೇಮಾ ನಾಯಕ, ಲಕ್ಷಣ ಕೌಂಟೆಗೆ 'ಬೆರಗು' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಹೇಮಾ ನಾಯಕ

ಲಕ್ಷ್ಮಣ ಕೌಂಟೆ

ವಿಜಯಪುರ: ಆಲಮೇಲ ತಾಲ್ಲೂಕಿನ ಕಡಣಿಯ 'ಬೆರಗು' ಪ್ರಕಾಶನ ಸಂಸ್ಥೆಯು ನೀಡುವ ರಾಜ್ಯಮಟ್ಟದ ಪ್ರೊ.ಎಚ್.ಟಿ.ಪೋತೆ ಹಸ್ತಪ್ರತಿ ಪ್ರಶಸ್ತಿಗೆ ಹೇಮಾ ನಾಯಕ ಅವರ 'ನೋವಿಗೂ ಇದೆ ಚಲನೆ' ಕಾವ್ಯ ಹಸ್ತಪ್ರತಿ ಹಾಗೂ ದಿ.ಯಮುನಾಬಾಯಿ ರಾಜಣ್ಣ ಭೋವಿ ಸ್ಮರಣಾರ್ಥ 2022ನೇ ಸಾಲಿನ ಪುಸ್ತಕ ಪ್ರಶಸ್ತಿಗೆ ಡಾ. ಲಕ್ಷ್ಮಣ ಕೌಂಟೆ ಅವರ 'ಧರೆಗೆ ದೊಡ್ಡವರು' ಕಾದಂಬರಿ ಆಯ್ಕೆಯಾಗಿದೆ ಎಂದು ಪ್ರಕಾಶಕಿ ವಿಜಯಲಕ್ಷ್ಮಿ ಆರ್. ಕತ್ತಿ ತಿಳಿಸಿದ್ದಾರೆ.

'ಹಸ್ತಪ್ರತಿ ಪ್ರಶಸ್ತಿಯು ₹10 ಸಾವಿರ ನಗದು, ಪ್ರಶಸ್ತಿ ಫಲಕ ಹಾಗೂ ಸ್ಮರಣಿಕೆಯೊಳಗೊಂಡಿದ್ದು, ಬೆರಗು ಪ್ರಕಾಶನವು ಹಸ್ತಪ್ರತಿಯನ್ನು ಪ್ರಕಟಿಸಿ ಗೌರವಿಸಲಿದೆ. ಪುಸ್ತಕ ಪ್ರಶಸ್ತಿಯು ₹5 ಸಾವಿರ ನಗದು, ಪ್ರಶಸ್ತಿ ಫಲಕ ಹಾಗೂ ಸ್ಮರಣಿಕೆ ಒಳಗೊಂಡಿದ್ದು, ಡಿಸೆಂಬರ್‌ನಲ್ಲಿ ಕಡಣಿಯಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದಿದ್ದಾರೆ.

ಮೂಲತಃ ಅಂಕೋಲಾದವರಾದ ಹೇಮಾ ನಾಯಕ ಅವರು ಕೇಂದ್ರ ನಾಗರಿಕ ಸೇವೆ ಕರ್ತವ್ಯ ನಿಮಿತ್ತ ಪ್ರಸ್ತುತ ಮೇಘಾಲಯದಲ್ಲಿ ನೆಲೆಸಿದ್ದಾರೆ. ಡಾ.ಲಕ್ಷ್ಮಣ ಕೌಂಟೆ ಅವರು ಕಲಬುರ್ಗಿ ನಿವಾಸಿಯಾಗಿದ್ದು, ಹಲವು ಕಾದಂಬರಿಗಳನ್ನು ಪ್ರಕಟಿಸಿದ್ದಾರೆ.

ವಾಸುದೇವ ನಾಡಿಗ ಅವರು ತೀರ್ಪುಗಾರರಾಗಿ ಕಾರ್ಯನಿರ್ವಹಿಸಿದ್ದರು.

ವಿದ್ಯುತ್ ತಂತಿ ತುಳಿದು ತಾಯಿ–ಮಗು ಸಾವು

ಒಂದನೇ ಪುಟದಿಂದ

ಬೆಂಕಿ ಹೊತ್ತಿಕೊಂಡು ಸಾವು: 'ವೈಟ್‌ಫೀಲ್ಡ್ ಸಮೀಪದ ಹೋಪ್ ಫಾರ್ಮ್ ಜಂಕ್ಷನ್ ಬಳಿಯ ಬಿಎಂಟಿಸಿ ತಂಗುದಾಣದಲ್ಲಿ ಬೆಳಿಗ್ಗೆ 6 ಗಂಟೆ ಸುಮಾರಿಗೆ ಬಸ್‌ನಿಂದ ಇಳಿದಿದ್ದ ಸೌಂದರ್ಯ, ಮಗುವನ್ನು ಎತ್ತಿಕೊಂಡು ತಾಯಿ ಮನೆಯತ್ತ ಪಾದಚಾರಿ ಮಾರ್ಗದಲ್ಲಿ ನಡೆದುಕೊಂಡು ಹೊರಟಿದ್ದರು' ಎಂದು ಪೊಲೀಸರು ತಿಳಿಸಿದರು.

'ಪಾದಚಾರಿ ಮಾರ್ಗದಲ್ಲಿ ವಿದ್ಯುತ್ ತಂತಿ ತುಂಡರಿಸಿ ಬಿದ್ದಿತ್ತು. ಸೌಂದರ್ಯ ಇದನ್ನು ಗಮನಿಸಿರಲಿಲ್ಲ. ನಡೆಯುವಾಗ ತಂತಿ ಮೇಲೆ ಕಾಲಿಟ್ಟಿದ್ದರು. ವಿದ್ಯುತ್ ತಗುಲಿ ಬೆಂಕಿ ಹೊತ್ತಿಕೊಂಡು ತಾಯಿ–ಮಗು ಸ್ಥಳದಲ್ಲೇ ಮೃತಪಟ್ಟರು. ಸ್ಥಳದಲ್ಲಿದ್ದ ಪತಿ ಅಸಹಾಯಕರಾದರು. ಅವರಿಬ್ಬರನ್ನು ನೋಡಿದ್ದ ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದರು' ಎಂದರು.

ನಸುಕಿನಲ್ಲಿ ತುಂಡರಿಸಿ ಬಿದ್ದಿದ್ದ ತಂತಿ: 'ಭಾನುವಾರ ನಸುಕಿನಲ್ಲಿ ಕಂಬದಿಂದ ವಿದ್ಯುತ್ ತಂತಿ ತುಂಡರಿಸಿ ಬಿದ್ದಿದ್ದ ಬಗ್ಗೆ ಮಾಹಿತಿ ಇದೆ. ಆದರೆ, ಬೆಸ್ಕಾಂ ಅಧಿಕಾರಿಗಳು ವಿದ್ಯುತ್ ಸಂಪರ್ಕ ಕಡಿತಗೊಳಿಸಿರಲಿಲ್ಲ. ಇವರ ನಿರ್ಲಕ್ಷ್ಯದಿಂದಲೇ ತಾಯಿ–ಮಗು ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದ್ದಾರೆ.

'ಕಾರ್ಯನಿರ್ವಾಹಕ ಎಂಜಿನಿಯರ್ ಶ್ರೀರಾಮ್, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಸುಬ್ರಹ್ಮಣ್ಯ, ಸಹಾಯಕ ಎಂಜಿನಿಯರ್ ಚೇತನ್, ಕಿರಿಯ ಎಂಜಿನಿಯರ್ ರಾಜಣ್ಣ ಹಾಗೂ ಸ್ಟೇಷನ್ ಆಪರೇಟರ್ ಮಂಜುನಾಥ್ ಅವರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದರು.

ತಜ್ಞರ ವರದಿ ಪಡೆದು ಕಾನೂನು ಕ್ರಮ: 'ಘಟನೆ ಸಂಬಂಧ ಬೆಸ್ಕಾಂನ ಐವರನ್ನು ವಶಕ್ಕೆ ಪಡೆಯಲಾಗಿದೆ. ಘಟನೆಗೆ ಕಾರಣ ಯಾರು ಎಂಬ ಬಗ್ಗೆ ತಜ್ಞರ ವರದಿ ಪಡೆಯಲಾಗುವುದು. ಅದಾದ ನಂತರವೇ ಪುರಾವೆಗಳ ಆಧಾರದಲ್ಲಿ ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ಜರುಗಿಸಲಾಗುವುದು' ಎಂದು ಪೊಲೀಸರು ಹೇಳಿದರು.

ಹೋಪ್ ಫಾರ್ಮ್ ಜಂಕ್ಷನ್ ಬಳಿ ತಾಯಿ–ಮಗು ಮೃತಪಟ್ಟ ಪಾದಚಾರಿ ಮಾರ್ಗದಲ್ಲಿದ್ದ ವಿದ್ಯುತ್ ತಂತಿಯನ್ನು ಮಹಿಳೆಯೊಬ್ಬರು ವೀಕ್ಷಿಸಿದರು

> **ಮೃತ ತಾಯಿ–ಮಗುವಿನ ಕುಟುಂಬಕ್ಕೆ ತಲಾ ₹ 5 ಲಕ್ಷ ಪರಿಹಾರ ನೀಡಲಾಗುವುದು. ಘಟನೆಗೆ ಕಾರಣವಾಗಿರುವವರ ವಿರುದ್ಧ ಕ್ರಮ ಜರುಗಿಸಲಾಗುವುದು**
> **ಕೆ.ಜೆ. ಜಾರ್ಜ್,** ಇಂಧನ ಸಚಿವ

ಕವಿಗೋಷ್ಠಿಗೆ ಬಂದಿದ್ದ ಕೆನಡಾದ ಕವಿ ನಿಧನ

ಬಸವಕಲ್ಯಾಣ (ಬೀದರ್ ಜಿಲ್ಲೆ): ಕೆನಡಾದ ಪೌರತ್ವ ಹೊಂದಿರುವ ಉತ್ತರ ಪ್ರದೇಶದ ಅಲಿಗಢ ಮೂಲದ ಉರ್ದು ಕವಿ ತಾರೀಕ್ ಫಾರೂಕ್ (78) ಭಾನುವಾರ ಇಲ್ಲಿ ಹೃದಯಾಘಾತದಿಂದ ನಿಧನರಾದರು.

ನಗರದ ತೇರು ಮೈದಾನದಲ್ಲಿನ ಸಭಾ ಭವನದಲ್ಲಿ ಶನಿವಾರ ಟೆಕ್ನೋಕ್ರೆಟ್ ಹಾಗೂ ಸಾಹಿತ್ಯಾಭಿಮಾನಿಗಳ ಸಂಘದಿಂದ ಹಮ್ಮಿಕೊಂಡಿದ್ದ ಮುಷಾಯಿರಾ ಹಾಗೂ ಕವಿ ಸಮ್ಮೇಳನದಲ್ಲಿ ಭಾಗವಹಿಸುವುದಕ್ಕಾಗಿ ಅವರು ಇಲ್ಲಿಗೆ ಬಂದಿದ್ದರು. ಆದರೆ, ಕಾರ್ಯಕ್ರಮದಲ್ಲಿ ಭಾಗವಹಿಸುವುದಕ್ಕೂ ಮೊದಲೇ ಎದೆನೋವು ಕಾಣಿಸಿಕೊಂಡಿದ್ದರಿಂದ ಖಾಸಗಿ ಆಸ್ಪತ್ರೆಗೆ ಅವರನ್ನು ದಾಖಲಿಸಲಾಗಿತ್ತು. ಚಿಕಿತ್ಸೆ ಸ್ಪಂದಿಸದೆ ಕೊನೆಯುಸಿರೆಳೆದರು.

ಅವರ ಇಬ್ಬರು ಪುತ್ರರು ಅಲಿಗಢದಲ್ಲಿ ಇರುವುದರಿಂದ ಮೃತದೇಹವನ್ನು ಅಲ್ಲಿಗೆ ಕಳುಹಿಸಿಕೊಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಗಂಗಾವತಿ ತಹಶೀಲ್ದಾರ್ ಲೋಕಾಯುಕ್ತ ಬಲೆಗೆ

ಪ್ರಜಾವಾಣಿ ವಾರ್ತೆ

ಮಂಜುನಾಥ ಬೋಗಾವತಿ

ಗಂಗಾವತಿ (ಕೊಪ್ಪಳ ಜಿಲ್ಲೆ): ಇಲ್ಲಿನ ತಹಶೀಲ್ದಾರ್ ಮಂಜುನಾಥ ಬೋಗಾವತಿ ಲಂಚ ಪ್ರಕರಣದಲ್ಲಿ ಲೋಕಾಯುಕ್ತ ಅಧಿಕಾರಿಗಳ ಬಲೆಗೆ ಬಿದ್ದಿದ್ದು, ಶನಿವಾರ ತಡರಾತ್ರಿ ಅವರನ್ನು ವಶಕ್ಕೆ ಪಡೆಯಲಾಗಿದೆ.

ದಾಸನಾಳ ಗ್ರಾಮದ ರಸೂಲ್ ಎಂಬ ವ್ಯಕ್ತಿ ಪರವಾನಗಿ ಪಡೆಯದೇ ಮಣ್ಣು ಸಾಗಾಟಕ್ಕೆ ಬಸಾಪಟ್ಟಣ ಕಂದಾಯ ನಿರೀಕ್ಷಕ ಮಹೇಶ ಅವರ ನೆರವು ಕೇಳಿದ್ದರು. ಮಹೇಶ್ ತಹಶೀಲ್ದಾರ್ ಬಳಿಗೆ ರಸೂಲ್ ಅವರನ್ನು ಕಳುಹಿಸಿದ್ದು, ತಹಶೀಲ್ದಾರ್ ಮಂಜುನಾಥ ಬೋಗಾವತಿ ಅಕ್ರಮ ಸಾಗಾಟಕ್ಕೆ ನೆರವಾಗಲು ತಿಂಗಳಿಗೆ ₹2 ಲಕ್ಷ ಬೇಡಿಕೆ ಇಟ್ಟಿದ್ದರು.

ರಸೂಲ್ ₹1 ಲಕ್ಷಕ್ಕೆ ಒಪ್ಪಂದ ಮಾಡಿಕೊಂಡಿದ್ದು, ಮುಂಗಡವಾಗಿ ತಹಶೀಲ್ದಾರ್ ಪರವಾಗಿ ಖಾಸಗಿ ವ್ಯಕ್ತಿ ರಾಜು ₹50 ಸಾವಿರ ಪಡೆಯುತ್ತಿರುವಾಗ ಲೋಕಾಯುಕ್ತ ಅಧಿಕಾರಿಗಳ ಬಲೆಗೆ ಬಿದ್ದಿದ್ದಾರೆ.

ಲೋಕಾಯುಕ್ತ ಡಿವೈಎಸ್ಪಿ ಸಲೀಂ ಪಾಷಾ ನೇತೃತ್ವದ ತಂಡ ತಹಶೀಲ್ದಾರ್‌ಗಾಗಿ ಶೋಧ ನಡೆಸಿದಾಗ ವಿವಿಧ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಿಕ್ಕಿರಲಿಲ್ಲ. ಕೊನೆಗೆ ತಡರಾತ್ರಿ 11ಕ್ಕೆ ಸಿಂಧನೂರಿನಲ್ಲಿದ್ದ ಅವರನ್ನು ಬಂಧಿಸಿ, ಭಾನುವಾರ ಬೆಳಿಗ್ಗೆ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ನ್ಯಾಯಾಧೀಶರು ತಹಶೀಲ್ದಾರ್ ಮಂಜುನಾಥ ಮತ್ತು ಖಾಸಗಿ ವ್ಯಕ್ತಿ ರಾಜು ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು.

ಪರಮಶಿವಮೂರ್ತಿಗೆ ಕಿಟ್ಟೆಲ್ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಬಿಡದಿಯ ಮೈಕೊ ಕನ್ನಡ ಬಳಗ ನೀಡುವ 'ಕಿಟ್ಟೆಲ್‌ಸ್ಮಾರಕಪ್ರಶಸ್ತಿ'ಗೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಡಿ.ವಿ.ಪರಮಶಿವಮೂರ್ತಿ ಆಯ್ಕೆಯಾಗಿದ್ದಾರೆ.

ಪ್ರಶಸ್ತಿ ₹10 ಸಾವಿರ ನಗದು ಒಳಗೊಂಡಿದೆ. ಇದೇ 30ರಂದು ಬಿಡದಿಯಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಹುಲಿ 'ಮಾಯಾ' ಸಾವು?

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದ ತಾಡೋಬಾ ಅಂಧಾರಿ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದ (ಟಿಎಟಿಆರ್) ರಾಣಿ ಎಂದೇ ಖ್ಯಾತವಾಗಿದ್ದ 'ಮಾಯಾ' ಹೆಸರಿನ ಹುಲಿಯು ಮೃತಪಟ್ಟಿದೆ ಎಂದು ಹೇಳಲಾಗಿದೆ.

2014ರಿಂದ ವನ್ಯಜೀವಿ ಛಾಯಾಗ್ರಾಹಕರಿಗೆ ಅತಿ ಹೆಚ್ಚು ಬಾರಿ ಸೆರೆಸಿಕ್ಕ ಹುಲಿ ಇದಾಗಿತ್ತು.

ತಾಡೋಬಾ ಸರೋವರದ ಪಂಚಧಾರ ಪ್ರದೇಶದ ಬಳಿ ಈ ಹುಲಿಯು ಆಗಸ್ಟ್ ತಿಂಗಳಿನಲ್ಲಿ ತಾಡೋಬಾ ಅಂಧಾರಿ ಹುಲಿ ಸಂರಕ್ಷಿತ ಅರಣ್ಯದ ಸಿಬ್ಬಂದಿಗೆ ಕೊನೆಯ ಸಲ ಕಾಣಿಸಿಕೊಂಡಿತ್ತು. ಬಳಿಕ ನಾಪತ್ತೆಯಾತ್ತು.

ನಾಪತ್ತೆಯಾಗಿದ್ದ ಹುಲಿಯ ಶೋಧಕ್ಕಾಗಿ ಶನಿವಾರ ತಾಡೋಬಾ ಅರಣ್ಯದಲ್ಲಿ ನಡೆಸಿದ ಶೋಧ ಕಾರ್ಯಾಚರಣೆ ವೇಳೆ 'ಮಾಯಾ'ಳದ್ದು ಎನ್ನಲಾದ ಅಸ್ಥಿ ಪಂಜರವು ಪತ್ತೆಯಾಗಿದ್ದು, ಅದರ ಗುರುತು ಪತ್ತೆಗಾಗಿ ಡಿಎನ್‌ಎ ಮಾದರಿಯನ್ನು ಸಂಗ್ರಹಿಸಲಾಗಿದೆ. ಹುಲಿಯ ಡಿಎನ್‌ಎ ಪರೀಕ್ಷೆಯು ಬೆಂಗಳೂರಿನಲ್ಲಿ ನಡೆಯಲಿದ್ದು, ನವೆಂಬರ್ 30ರಂದು ಅದರ ವರದಿ ಬರಲಿದೆ ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

ನೈಸರ್ಗಿಕ ಕಾರಣದಿಂದಾಗಿ ಈ ಹುಲಿ ಮೃತಪಟ್ಟಿದೆ ಎಂಬುದು ಮಹಾರಾಷ್ಟ್ರದ ಅರಣ್ಯ ಇಲಾಖೆ ನಡೆಸಿದ ಪ್ರಾಥಮಿಕ ಪರಿಶೀಲನೆಯಿಂದ ತಿಳಿದುಬಂದಿದೆ. 2010ರಲ್ಲಿ ಲೀಲಾ ಎಂಬ ಹುಲಿಗೆ ಮಾಯಾ ಜನಿಸಿದ್ದಳು.

'ಧೂಮ್' ಚಿತ್ರದ ನಿರ್ದೇಶಕ ಸಂಜಯ್ ಗಧ್ವಿ ನಿಧನ



ಮುಂಬೈ (ಪಿಟಿಐ): ಬಾಲಿವುಡ್‌ನ 'ಧೂಮ್' ಚಿತ್ರದ ನಿರ್ದೇಶಕ ಸಂಜಯ್ ಗಧ್ವಿ (56) ಅವರು ಭಾನುವಾರ ಇಲ್ಲಿನ ತಮ್ಮ ನಿವಾಸದಲ್ಲಿ ನಿಧನರಾದರು.

'ಸಂಜಯ್ ಅವರು ಹೃದಯಾಘಾತದಿಂದ ಮೃತಪಟ್ಟಿರುವ ಸಾಧ್ಯತೆ ಇದೆ' ಎಂದು ಅವರ ಪುತ್ರಿ ಸಂಜಿನಾ ತಿಳಿಸಿದ್ದಾರೆ.

ಸಂಜಯ್ ಅವರ ನಿರ್ದೇಶನದಲ್ಲಿ 2004ರಲ್ಲಿ ತೆರೆಕಂಡಿದ್ದ 'ಧೂಮ್' ಮತ್ತು 2006ರಲ್ಲಿ ಬಿಡುಗಡೆಯಾಗಿದ್ದ 'ಧೂಮ್ 2' ಚಿತ್ರಗಳು ಭಾರಿ ಜನಪ್ರಿಯತೆ ಗಳಿಸಿದ್ದವು.

2000ರಲ್ಲಿ 'ತೇರೆ ಲಿಯೆ' ಚಿತ್ರವನ್ನು ನಿರ್ದೇಶಿಸುವ ಮೂಲಕ ಅವರು ಚಿತ್ರರಂಗಕ್ಕೆ ಪದಾರ್ಪಣೆ ಮಾಡಿದ್ದರು.

ಕಡಿಮೆ ವೆಚ್ಚದಲ್ಲಿ ತಯಾರಿಸಿದ ವಿದ್ಯಾರ್ಥಿಗಳ ಕೆಲಸಕ್ಕೆ ಕೃಷಿ ಮೇಳದಲ್ಲಿ ಮೆಚ್ಚುಗೆ

ಬಹೋಪಯೋಗಿ ಸೋಲಾರ್ 'ಇ–ಕಾರ್ಟ್'

• ಖಲೀಲಅಹ್ಮದ ಶೇಖ

ಬೆಂಗಳೂರು: ಕೃಷಿ ಉತ್ಪನ್ನಗಳ ಸಾಗಣೆ, ಕಳೆ ತೆಗೆಯುವುದು ಸೇರಿದಂತೆ ವಿವಿಧ ಕೃಷಿ ಚಟುವಟಿಕೆಯ ನಿರ್ವಹಣೆಗೆ ನೆರವಾಗುವ ಸೋಲಾರ್ ಹಾಗೂ ವಿದ್ಯುತ್ ಚಾಲಿತ ಬಹುಪಯೋಗಿ 'ಇ–ಕಾರ್ಟ್' ವಾಹನವೊಂದನ್ನು ಎಂಜಿನಿಯರಿಂಗ್ ವಿದ್ಯಾರ್ಥಿಗಳು ಆವಿಷ್ಕರಿಸಿದ್ದಾರೆ.

ಬೆಂಗಳೂರು ರಾಜರಾಜೇಶ್ವರಿನಗರದಲ್ಲಿರುವ ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿ ಕಾಲೇಜಿನ ವಿದ್ಯಾರ್ಥಿಗಳು ಅಭಿವೃದ್ಧಿಪಡಿಸಿರುವ 'ಇ–ಕಾರ್ಟ್' ಅನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಕೃಷಿ ಮೇಳದಲ್ಲಿ ಪ್ರದರ್ಶನಕ್ಕಿಟ್ಟಿದ್ದಾರೆ. ಮೇಳದಲ್ಲಿ ವಾಹನ ವೀಕ್ಷಣೆಗೆ ಬರುವ ರೈತರಿಗೆ ವಾಹನದ ಉಪಯೋಗವನ್ನು ತಿಳಿಸುತ್ತಿದ್ದಾರೆ. ಮಾರುಕಟ್ಟೆಯಲ್ಲಿ ಸದ್ಯ ಲಭ್ಯವಿರುವ ಅಗ್ಗದ ವಾಹನಗಳಿಗಿಂತ ಕಡಿಮೆ ವೆಚ್ಚದಲ್ಲಿ ಲಭ್ಯವಿರುವ ತಮ್ಮ ವಾಹನದ ಬಗ್ಗೆ ಮಾಹಿತಿ ಹಂಚಿಕೊಳ್ಳುತ್ತಿದ್ದಾರೆ.

ಕಾಲೇಜಿನ ಅಧ್ಯಯನದ ಭಾಗವಾಗಿ ತಯಾರಿಸಿದ್ದ ವಾಹನ ಯೋಜನೆ, ಪ್ರಾಯೋಗಿಕವಾಗಿ ಯಶಸ್ವಿಯಾಗಿದೆ. ಇದೇ ವಾಹನವನ್ನು ರೈತರ ಅನುಕೂಲಕ್ಕಾಗಿ ಮಾರುಕಟ್ಟೆಗೆ ಬಿಡುಗಡೆ ಮಾಡಲು ಪ್ರಾಧ್ಯಾಪಕರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ತಯಾರಿ ನಡೆಸಿದ್ದಾರೆ.

'ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಕೃಷಿ ಸಂಬಂಧಿತ ಕೆಲಸಗಳ ನಿರ್ವಹಣೆ ಕಷ್ಟವಾಗುತ್ತಿದೆ. ದೊಡ್ಡ ಯಂತ್ರಗಳನ್ನು ಬಾಡಿಗೆ ತರುವುದು ದುಬಾರಿಯಾಗುತ್ತದೆ. ಟ್ರ್ಯಾಕ್ಟರ್ ಮತ್ತು ಗೂಡ್ಸ್‌ಗಳಂತಹ ವಾಹನ ಖರೀದಿಸಬೇಕೆಂದರೆ ₹ 4 ಲಕ್ಷದಿಂದ ₹ 5 ಲಕ್ಷ ವೆಚ್ಚ ಮಾಡಬೇಕು. ಇಂಥ ರೈತರಿಗಾಗಿಯೇ ಈ ಹೊಸ ವಾಹನ ಆವಿಷ್ಕರಿಸಿದ್ದೇವೆ' ಎಂದು ವಿದ್ಯಾರ್ಥಿ ಅಜಯ್ 'ಪ್ರಜಾವಾಣಿ'ಗೆ ತಿಳಿಸಿದರು.

'ಈ ವಾಹನ, ವಸ್ತುಗಳ ಸಾಗಣೆ, ಕಳೆ ತೆಗೆಯುವುದರ ಜೊತೆಗೆ ಗೊಬ್ಬರ–ಬೀಜಗಳನ್ನು ಸಾಗಿಸಲು ಅನುಕೂಲವಾಗಿದೆ. ಬೈಕ್ ರೀತಿಯಲ್ಲೇ ಕಡಿಮೆ ಖರ್ಚಿನಲ್ಲಿ ನಿರ್ವಹಣೆ ಮಾಡಬಹುದಾಗಿದೆ' ಎಂದು ಹೇಳಿದರು.

'ಈ ವಾಹನಕ್ಕೆ 48 ವ್ಯಾಟ್‌ನ ಆರು ಸೋಲಾರ್ ಪ್ಯಾನಲ್‌ಗಳನ್ನು ಅಳವಡಿಸಿದೆ. ಪೂರ್ಣ ಚಾರ್ಜ್ ಆಗಲು ನಾಲ್ಕು ಗಂಟೆ ಬೇಕಾಗುತ್ತದೆ. ವಿದ್ಯುತ್‌ನಿಂದ ಚಾರ್ಜ್ ಆಗಲು ಕೇವಲ 2 ಗಂಟೆ ಸಾಕು. ಒಮ್ಮೆ ಚಾರ್ಜ್ ಮಾಡಿದರೆ, 40ರಿಂದ 50 ಕಿ.ಮೀ ಮೈಲೇಜ್ ನೀಡುತ್ತದೆ. ಈ ವಾಹನದ ವೇಗ ಪ್ರತಿ ಗಂಟೆಗೆ 50 ಕಿ.ಮೀ. ಇದೆ' ಎಂದರು.

'ವಾಹನದ ಬೆಲೆ ₹ 1.50 ಲಕ್ಷ. ರೈತರು ಇದನ್ನು ಖರೀದಿಸಿದರೆ ಅವರಿಗೆ ಸರ್ಕಾರದಿಂದ ಸಹಾಯಧನ ಸಿಗಲಿದೆ. ವಾಹನಕ್ಕೆ ಅಳವಡಿಸಿರುವ ಬ್ಯಾಟರಿಗೆ 3 ವರ್ಷದಿಂದ 5 ವರ್ಷದವರೆಗೂ ವಾರಂಟಿ ಇರುತ್ತದೆ. ರೈತರ ಅಗತ್ಯತೆಗೆ ತಕ್ಕಂತೆ ವಾಹನವನ್ನು ಸಿದ್ಧಪಡಿಸಲು ನಾವು ಸಿದ್ಧ' ಎಂದು ತಿಳಿಸಿದರು.

ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿಯ ವಿದ್ಯಾರ್ಥಿಗಳು ಆವಿಷ್ಕರಿಸಿರುವ ವಿದ್ಯುತ್ ಮತ್ತು ಸೌರ ಚಾಲಿತ ವಾಹನ.
ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

'ಕಳ್ಳತನ ತಡೆಯುವ ಸೌಲಭ್ಯ'

'ಇ–ಕಾರ್ಟ್ ವಾಹನಕ್ಕೆ ಜಿಪಿಎಸ್ ಉಪಕರಣ ಅಳವಡಿಸಲಾಗಿದೆ. ಇದು ವಾಹನ ಕಳ್ಳತನ ತಡೆಯಲು ಹಾಗೂ ವಾಹನದ ಸ್ಥಿತಿಗತಿ ಅರಿಯಲು ಸಹಾಯಕವಾಗಿದೆ' ಎಂದು ವಿದ್ಯಾರ್ಥಿಗಳು ಹೇಳಿದರು.

'ವಾಹನದ ವೇಗ, ಜಾರ್ಜಿಂಗ್ ಪ್ರಮಾಣ ಹಾಗೂ ಇತರೆ ಮಾಹಿತಿಯೂ ಮೊಬೈಲ್‌ನಲ್ಲಿರುವ ಆ್ಯಪ್ ಮೂಲಕ ತಿಳಿದುಕೊಳ್ಳಬಹುದು' ಎಂದರು.

'ಕಡಿಮೆ ಪ್ರಮಾಣದಲ್ಲಿ ವಿದ್ಯುತ್ ಬಳಕೆಗೆಂದು ಎಕಾನಾಮಿ ಮೋಡ್ ನೀಡಲಾಗಿದೆ. ಕತ್ತಲಾದರೆ ಸ್ವಯಂಚಾಲಿತವಾಗಿ ದೀಪ ಹೊತ್ತಿಕೊಳ್ಳುವ ವ್ಯವಸ್ಥೆಯೂ ವಾಹನದಲ್ಲಿದೆ' ಎಂದು ವಿವರಿಸಿದರು.

ಕರ್ನಾಟಕ ಸರ್ಕಾರ
ಕಂದಾಯ ಇಲಾಖೆ
ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯ,
ರೆವಿನ್ಯೂ ಸರ್ವೆ ಕಚೇರಿ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560001.
ಸಂಖ್ಯೆ: ಎಜೆಎಸ್‌ಡಿ/ಟೆಂಡರ್/ಆಡಳಿತ–120/2022–23 ದಿನಾಂಕ:18.11.2023
ಇ–ಟೆಂಡರ್ ಅಧಿಸೂಚನೆ
ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಡೇಟಾ ಎಂಟ್ರಿ ಆಪರೇಟರ್ಸ್, ವಾಹನ ಚಾಲಕರು ಹಾಗೂ ಗ್ರೂಪ್–ಡಿ ನೌಕರರ ಸೇವೆಯನ್ನು ಪಡೆಯಲು ಆಸಕ್ತಿ ಇರುವ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಲಾಗಿದೆ.
ಟೆಂಡರ್ ದಾಖಲಾತಿಗಳು ಹಾಗೂ ಇದಕ್ಕೆ ಸಂಬಂಧಿಸಿದ ಇತರೆ ಮಾಹಿತಿಯನ್ನು e-procurement portal – https://www.eproc.karnataka.gov.in ನಲ್ಲಿ ದಿನಾಂಕ: 20.11.2023 ರಿಂದ 11.12.2023 ರವರೆಗೆ ಪಡೆಯಬಹುದಾಗಿದೆ.
ಸಹಿ/– ನಿರ್ದೇಶಕರು,
ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯ.
DIPR/CP/2188/Zen/2022-23

KSIIDC
ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ)
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಖನಿಜ ಭವನ, 4ನೇ ಮಹಡಿ, ಪೂರ್ವ ಭಾಗ, ನಂ.49, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–01.
ಟೆಂಡರ್‌ಗೆ ಆಹ್ವಾನ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ https://kppp.karnataka.gov.in ಮೂಲಕ)
ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ), ಕರ್ನಾಟಕ ಸರ್ಕಾರ, ಇವರು ಶಿವಮೊಗ್ಗ ವಿಮಾನ ನಿಲ್ದಾಣವನ್ನು ನಿರ್ವಹಿಸುತ್ತಿದ್ದಾರೆ. ಕೆಎಸ್‌ಐಐಡಿಸಿಯು ಶಿವಮೊಗ್ಗದಲ್ಲಿರುವ ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಆಂಬುಲೆನ್ಸ್ ಮತ್ತು ಇತರೆ ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಒದಗಿಸುವ ಸಲುವಾಗಿ ಏಜೆನ್ಸಿಗಾಗಿ ಟೆಂಡರ್ (ದ್ವಿ ಲಕೋಟೆ ಪದ್ಧತಿಯಲ್ಲಿ) ಆಹ್ವಾನಿಸಿದೆ. ಟೆಂಡರ್ ದಸ್ತಾವೇಜನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಪಡೆಯಬಹುದು.
ಇಎಂಡಿ : **ರೂ. 1.50 ಲಕ್ಷಗಳು.** ಟೆಂಡರ್ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ : **20.11.2023 ರ ನಂತರ.** ಬಿಡ್ ಪೂರ್ವ ಸಭೆ: **28.11.2023, 11.00 ಗಂಟೆಗೆ.** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **11.12.2023, 17.30 ಗಂಟೆಯ ವರೆಗೆ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು ಅಥವಾ ವೆಬ್‌ಸೈಟ್ https://kppp.karnataka.gov.in ಮೂಲಕ ಪಡೆಯಬಹುದು. ಈ ಟೆಂಡರ್‌ಗೆ ಸಂಬಂಧಪಟ್ಟಂತೆ ತಿದ್ದುಪಡಿ/ವಿಸ್ತರಣೆ ಯಾವುದಾದರೂ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುವುದು.
ಸಂಪರ್ಕ ಸಂಖ್ಯೆ : ಎಜಿಎಂ (ಪಿ&ಎ), 080–2225 8131/132/98458 33566
ಇ–ಮೇಲ್ : murthy@ksiidc.com
ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು (ಪಿ & ಎ),
ಕೆಎಸ್‌ಐಐಡಿಸಿ & ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ

ಶಿಕ್ಷಣ

ಫೋನಿನ ಗೀಳಿದೆಯೇ ಹೇಳಿ?

ಆಡುವ ಮಕ್ಕಳಿಂದ ಹಿಡಿದು ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳವರೆಗೂ ರೀಲುಗಳ ಹಿಂದೆ ಓಡುತ್ತಿದ್ದಾರೆ. ಮೊಬೈಲ್ ಫೋನ್ ಮುಟ್ಟಬೇಡ ಎಂದು ಹೇಳುತ್ತಿರುವ ಪಾಲಕರೂ ಈಗ ಒಂದರಿಂದ ಎರಡು ಫೋನ್‌ಗಳಿಗೆ ಬಡ್ತಿ ಪಡೆದಿದ್ದಾರೆ. ಬರೆದು, ಓದುವ ಪದ್ಧತಿಗೆ ಮಕ್ಕಳನ್ನು ಮರಳಿ ತರುವ ದೊಡ್ಡ ಸವಾಲು ಎದುರಿಸುವುದು ಹೇಗೆ?.

ಇ.ಎಸ್. ಸುಧೀಂದ್ರ ಪ್ರಸಾದ್

ಪಾಲಕರ ಶಿಕ್ಷಕರ ಸಭೆ ನಡೆದಿತ್ತು. ಮಕ್ಕಳಿಗೆ ಏನು ಹೇಳಿಕೊಡುತ್ತೀರಿ ಎಂಬ ಪ್ರಶ್ನೆಯನ್ನು ಪಾಲಕರೊಬ್ಬರು ಶಿಕ್ಷಕಿಯ ಮುಂದಿಟ್ಟರು. ಅದಕ್ಕೆ ಶಿಕ್ಷಕಿ ಪಠ್ಯದಲ್ಲಿರುವ ಪಾಠಗಳ ಹೆಸರು, ಕ್ರಾಫ್ಟ್, ಆರ್ಟ್, ಸಂಗೀತ, ನೃತ್ಯ, ದೈಹಿಕ ಕಸರತ್ತುಗಳ ಪಟ್ಟಿಯನ್ನು ನೀಡಿದರು. ಇದನ್ನು ಯುಟ್ಯೂಬ್ ಮೂಲಕವೂ ಕಲಿಯಬಹುದಲ್ಲಾ. ಇದನ್ನು ಹೊರತುಪಡಿಸಿ ಮಕ್ಕಳಿಗೆ ಬೇರೆ ಏನು ಹೇಳಿಕೊಡಲಾಗುತ್ತಿದೆ ಎಂಬ ಪಾಲಕರ ಪ್ರಶ್ನೆಗೆ ಶಿಕ್ಷಕಿ ಕ್ಷಣಕಾಲ ತಬ್ಬಿಬ್ಬಾದರು. ಆಗ ಪಾಲಕರು ತಮ್ಮ ಮಗುವಿಗೆ ಏನು ಕಲಿಸಬೇಕು ಎಂಬ ಸರಳ ಬೇಡಿಕೆಯ ಪಟ್ಟಿಯನ್ನು ಮುಂದಿಟ್ಟು, 'ಏನನ್ನು ಓದಬೇಕು, ಯಾವುದನ್ನು ಕಲಿಯಬೇಕು. ಏನು ಮಾಡಿದರೆ ಪುಸಕ್ತ ಓದುವ ಹವ್ಯಾಸ ಬೆಳೆಸಿಕೊಳ್ಳಬಹುದು. ಓದುವತ್ತ ಆಸಕ್ತಿ ಬೆಳೆಸಿಕೊಳ್ಳುವುದು ಹೇಗೆ?' ಎಂಬುದನ್ನು ಕಲಿಸಿ' ಎಂದರು.

ಕೋವಿಡ್ ಕಾಲದಲ್ಲಿ ಕೈಹಿಡಿದ ಮೊಬೈಲ್ ಅನ್ನು ಇನ್ನೂ ಬಹುತೇಕರು ಕೆಳಗಿಟ್ಟಿಲ್ಲ. ಆಡುವ ಮಕ್ಕಳಿಂದ ಹಿಡಿದು ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳವರೆಗೂ ರೀಲುಗಳ ಹಿಂದೆ ಓಡುತ್ತಿದ್ದಾರೆ. ಮೊಬೈಲ್ ಮುಟ್ಟಬೇಡ ಎಂದು ಹೇಳುತ್ತಿರುವ ಪಾಲಕರೂ ಈಗ ಒಂದು ಮೊಬೈಲ್‌ನಿಂದ ಎರಡು ಮೊಬೈಲ್‌ಗಳಿಗೆ ಬಡ್ತಿ ಪಡೆದಿದ್ದಾರೆ. ಇಂಥ ಸಂದರ್ಭದಲ್ಲಿ ಬರೆದು, ಓದುವ ಪದ್ಧತಿಗೆ ಮಕ್ಕಳನ್ನು ಮರಳಿ ತರುವ ದೊಡ್ಡ ಸವಾಲು ಶಿಕ್ಷಕರು ಹಾಗೂ ಪಾಲಕರ ಮೇಲಿದೆ.

ಇದು ಹೈಬ್ರಿಡ್ ಕಾಲ. ಇಲ್ಲಿ ಕಾಗದ, ಪೆನ್ನೂ ಬೇಕು. ಮೊಬೈಲ್ ಕೂಡಾ ಬೇಕು. ಆದರೆ ಯಾವುದನ್ನು ಹೆಚ್ಚು ಬಳಸಬೇಕು. ಯಾವುದರ ಬಳಕೆಗೆ ಮಿತಿ ಹೇರಬೇಕು ಎಂಬುದನ್ನು ತಾವೂ ಪಾಲಿಸಿ, ಮಕ್ಕಳಿಗೂ ಹೇಳುವ ಕೆಲಸವನ್ನು ಪಾಲಕರು ಹಾಗು ಶಿಕ್ಷಕರು ಮಾಡಬೇಕು ಎಂದು ಮನೋವೈದ್ಯ ಡಾ. ಮನೋಜ್ ಶರ್ಮಾ ಸಲಹೆ ನೀಡಿದ್ದಾರೆ.

'ಕೋವಿಡ್ ಸಂದರ್ಭದಲ್ಲಿ ಮೊಬೈಲ್‌ನ ಲಭ್ಯತೆ ಎಲ್ಲಾ ವರ್ಗದ ಮಕ್ಕಳಿಗೆ ಸಾಧ್ಯವಾಯಿತು. ಕುಟುಂಬದ ಎಲ್ಲಾ ಸದಸ್ಯರೂ ಮೊಬೈಲ್‌ನಲ್ಲಿ ಮುಳುಗಿಬಿಟ್ಟರು. ಮೊಬೈಲ್ ಬಳಕೆ ತಾಂತ್ರಿಕವಾಗಿ ಮಕ್ಕಳ ಜ್ಞಾನವನ್ನು ಹೆಚ್ಚಿಸಿರಬಹುದು. ಪಾಠ ಕೇಳಲು ತರಗತಿಗೇ ಹೋಗಬೇಕೆಂದೇನೂ ಇಲ್ಲ, ಮೊಬೈಲ್‌ನಲ್ಲೇ ಬೇಕಾದ ಪಾಠ ಸಿಗಲಿದೆ ಎಂಬ ಮನಸ್ಥಿತಿ ಮಕ್ಕಳು ಹೇಳುತ್ತಿದ್ದಾರೆ. ಇದಕ್ಕೆ ಪಾಲಕರ ಸಮ್ಮತಿಯೂ ಸಿಕ್ಕಲ್ಲಿ ಮೊಬೈಲ್‌ನಲ್ಲಿ ಇನ್ನಷ್ಟು ಸಮಯ ಕಳೆಯಲು ಅವಕಾಶ ಮಾಡಿಕೊಟ್ಟಂತಾಗಲಿದೆ' ಎಂದೆನ್ನುತ್ತಾರೆ ಅವರು.

'ಡಿಜಿಟಲ್ ಮೇಲಿನ ಅವಲಂಬನೆ ಪೂರ್ಣ ಪ್ರಮಾಣದಲ್ಲಿ ನಿರ್ಬಂಧಿಸುವುದೂ ಅಸಾಧ್ಯ. ಬಹಳಷ್ಟು ಮಕ್ಕಳು ಕಿಂಡಲ್ ಮೂಲಕ ಓದುವ ಸಂಸ್ಕೃತಿಯನ್ನು ಬೆಳೆಸಿಕೊಂಡಿದ್ದಾರೆ. ಇದು ಡಿಜಿಟಲ್ ಪರದೆಯ ಸಕಾರಾತ್ಮಕ ಅಂಶ. ಆದರೆ ಅನಗತ್ಯವಾಗಿ ಸಮಯ ಹಾಳು ಮಾಡುವ ಕೆಲವೊಂದು ಆನ್‌ಲೈನ್ ಕಂಟೆಂಟ್‌ಗಳ ವೀಕ್ಷಣೆಯ ದಾಸರಾಗುವುದು ನಿಜಕ್ಕೂ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಮಾರಕ' ಎನ್ನುವುದು ಅವರ ಆತಂಕ.

'ಕಲಿಕೆಗಾಗಿಯೇ ಮಕ್ಕಳಿಗೆ ಮೊಬೈಲ್ ಕೊಡುವ ಪಾಲಕರು, ಅಂತರ್ಜಾಲದಲ್ಲಿ ಒಳಿತು, ಕೆಡಕು ಎರಡೂ ಲಭ್ಯ ಎಂಬುದನ್ನು ಅರಿಯಬೇಕಿದೆ. ನಂತರ ಮೊಬೈಲ್ ಬಳಕೆಯನ್ನು ಎಷ್ಟರ ಮಟ್ಟಿಗೆ ಸೀಮಿತಗೊಳಿಸಬೇಕು ಎಂಬುದನ್ನು ಪಾಲಕರೇ ನಿರ್ಧರಿಸಬೇಕು. ಜತೆಗೆ ತಾವೂ ಮೊಬೈಲ್‌ಗೆ ಅಂಟಿಕೊಳ್ಳದೇ, ಪತ್ರಿಕೆ, ನಿಯತಕಾಲಿಕೆಗಳನ್ನು ಓದುವುದು ಹಾಗೂ ಅದರಲ್ಲಿರುವ ಆಸಕ್ತಿದಾಯಕ ಸುದ್ದಿಗಳನ್ನು ಮಕ್ಕಳೊಂದಿಗೆ ಹಂಚಿಕೊಳ್ಳುವುದನ್ನು ರೂಢಿಸಿಕೊಳ್ಳಬೇಕು. ಮೊಬೈಲ್ ಹೊರತುಪಡಿಸಿಯೂ ದೊಡ್ಡದಾದ ಹಾಗೂ ಸುಂದರ ಜಗತ್ತು ಇದೆ ಎಂಬುದನ್ನು ಅವರಿಗೆ ಮನವರಿಕೆ ಮಾಡಿಕೊಡಬೇಕು. ಆ ದಾರಿಯಲ್ಲಿ ಅವರು ಸಾಗುವಂತೆ ಮಾಡುವ ದೊಡ್ಡ ಜವಾಬ್ದಾರಿ ಶಿಕ್ಷಕರು ಹಾಗೂ ಪಾಲಕರದ್ದಾಗಿದೆ' ಎಂದು ಡಾ. ಶರ್ಮಾ ಸಲಹೆ ನೀಡಿದ್ದಾರೆ.

ನಿಮಗೆ ಡಿಜಿಟಲ್ ವ್ಯಸನವಿದೆಯೆ?

ಮನೋಜ್ ಶರ್ಮಾ

- ಕಡುಬಯಕೆ– ಮೊಬೈಲ್ ಫೋನ್ ನೋಡಬೇಕು ಎಂದು ನಿಯಂತ್ರಿಸಲಾಗದಷ್ಟು ಬಯಕೆ ಮೂಡುತ್ತಿದೆಯೇ?
- ನಿಯಂತ್ರಣ– ಮೊಬೈಲ್ ಫೋನ್ ನೋಡಲು ಹಾಕಿಕೊಂಡ ಮಿತಿಯನ್ನೇ ಮೀರಿ ನೋಡುವ ಬಯಕೆ ಹೆಚ್ಚುತ್ತಿದೆಯೇ?
- ನಿಭಾಯಿಸುವುದು– ಸ್ನೇಹಿತರು ಇಲ್ಲ ಎಂಬ ನೆಪವೊಡ್ಡಿ ಮೊಬೈಲ್ ಫೋನ್ ಬಳಕೆಯನ್ನೇ ಅವಲಂಬಿಸಿ ನಿಮ್ಮನ್ನು ನೀವು ನಿಭಾಯಿಸಿಕೊಳ್ಳುತ್ತಿದ್ದೀರಾ?
- ಕಡ್ಡಾಯ– ಮೊಬೈಲ್ ಫೋನ್ ಲಭ್ಯವಿದೆ ಎಂದು ಕಡ್ಡಾಯವಾಗಿ ಬಳಕೆ ಮಾಡುವ ನಿರ್ಧಾರ ಮಾಡಿದ್ದೀರಾ?
- ಪರಿಣಾಮ– ಮೊಬೈಲ್ ಫೋನ್ ಬಳಕೆಯ ವ್ಯತಿರಿಕ್ತ ಪರಿಣಾಮಗಳನ್ನು ಅರಿತೂ ಬಳಸುತ್ತಿದ್ದೀರಾ?

ಈ ಮೇಲಿನ ಐದರಲ್ಲಿ ನಾಲ್ಕು ಅಭ್ಯಾಸಗಳು ನಿಮ್ಮದಾಗಿದ್ದರೆ ಕೂಡಲೇ ಮನೋವೈದ್ಯರನ್ನು ಸಂಪರ್ಕಿಸಿ ಮೊಬೈಲ್ ಫೋನ್ ದಾಸ್ಯದಿಂದ ಮುಕ್ತಿ ಹೊಂದುವುದು ಸೂಕ್ತ ಎಂಬುದು ಡಾ. ಮನೋಜ್ ಶರ್ಮಾ ಅವರ ಸಲಹೆ

ಉಪವಾಸದಂತೆ ಮೊಬೈಲ್ ಫೋನ್ ಬಳಸದ ವ್ರತ ಅಗತ್ಯ

ದೇವರಿಗಾಗಿ ವಾರಕ್ಕೊಮ್ಮೆ ಉಪವಾಸವನ್ನು ಹಲವರು ಮಾಡುತ್ತಾರೆ. ಹಾಗೆಯೇ ಅತಿಯಾಗಿ ಪರದೆ ಮೇಲೆ ಅವಲಂಬಿತರಾಗಿರುವ ನಾವು ವಾರಕ್ಕೊಮ್ಮೆಯಾದರೂ ಮೊಬೈಲ್ ಬಳಸದ ವ್ರತ ಅನುಸರಿಸುವುದು ಸೂಕ್ತ. ಇದು ಕೇವಲ ಮಕ್ಕಳಿಗಾಗಿ ಮಾತ್ರವಲ್ಲ, ಮೊಬೈಲ್ ಹಾಗೂ ಡಿಜಿಟಲ್ ಪರದೆ ಮೇಲೆ ಹೆಚ್ಚು ಅವಲಂಬಿತರಾಗಿರುವ ಎಲ್ಲರಿಗೂ ಅತ್ಯಗತ್ಯ.

6ರಿಂದ 10ನೇ ವರ್ಷದ ಮಕ್ಕಳಿಗೆ ಮೊಬೈಲ್ ಮೂಲಕ ಕಲಿಕೆ ಸರಿಯಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆಯ ಶಿಫಾರಸು ಹೇಳಿದೆ. ಇದನ್ನು ಶಿಕ್ಷಕರು ಕಡ್ಡಾಯವಾಗಿ ಅಳವಡಿಸಿಕೊಳ್ಳಬೇಕು. ಮೊಬೈಲ್ ಆಧಾರಿತ ಹೋಮ್ ವರ್ಕ್ ಕೊಡುವುದರ ಬದಲು, ಕೌಶಲಭರಿತ ಕೆಲಸಗಳನ್ನು ನೀಡುವ ಮೂಲಕ ಅವರ ಮನೋವಿಕಾಸಕ್ಕೆ ಹೆಚ್ಚಿನ ಒತ್ತು ನೀಡಬೇಕು.

ಮೊಬೈಲ್ ಅಥವಾ ಡಿಜಿಟಲ್ ಪರದೆಗಳನ್ನು ಹೆಚ್ಚಾಗಿ ಬಳಸುತ್ತಿದ್ದರೆ, ದೇಹದ ಭಾಗಗಳಲ್ಲಿ ಗೊತ್ತಿಲ್ಲದಂತೆ ಸ್ನಾಯು ಸೆಳೆತ ಆರಂಭವಾಗುತ್ತದೆ. ಅದು ನಂತರ ದೇಹದ ಇತರ ಭಾಗಗಳಿಗೂ ವಿಸ್ತರಿಸುತ್ತದೆ. ವೃತ್ತಿಯಲ್ಲಿರುವವರು ಅನುಭವಿಸುತ್ತಿರುವ ಈ ಸಮಸ್ಯೆ ಮಕ್ಕಳಿಗೂ ವಿಸ್ತರಿಸಿದರೆ ಅವರ ಬದುಕೇ ಮಂಕಾಗಲಿದೆ.

ಐಚ್ಛಿಕ ಕನ್ನಡ ಕಲಿತರೆ ಪ್ರಯೋಜನವೇನು?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

1. ಎಂ.ಎಸ್ಸಿ (ಕೃಷಿ ವಿಸ್ತರಣೆ) ಕ್ಷೇತ್ರದಲ್ಲಿ ವೃತ್ತಿಯ ಅವಕಾಶಗಳು ಯಾವುವು? ಸ್ವಂತ ಉದ್ಯಮ ಪ್ರಾರಂಭಿಸಬೇಕು ಎನ್ನುವವರಿಗೆ ಈ ಪದವಿ ಹೇಗೆ ಸಹಕಾರಿ?

ಹೆಸರು, ಊರು ತಿಳಿಸಿಲ್ಲ.

ಕೃಷಿ ವಿಸ್ತರಣೆ ಕಾರ್ಯಕ್ರಮಗಳಿಂದ, ವೈಜ್ಞಾನಿಕ ಮತ್ತು ನೂತನ ಆವಿಷ್ಕಾರಗಳನ್ನು ಅಳವಡಿಸಿಕೊಳ್ಳಲು ರೈತರಿಗೆ ಮತ್ತು ಗ್ರಾಮೀಣ ಸಮುದಾಯಗಳಿಗೆ, ಅಗತ್ಯ ಮಾಹಿತಿ, ಜ್ಞಾನ ಮತ್ತು ತಂತ್ರಜ್ಞಾನ ಪರಿಚಯಿಸಿ, ಕೃಷಿ ಉತ್ಪಾದನೆ ಹೆಚ್ಚಿಸಬಹುದು. ರೈತರ ದೃಷ್ಟಿಕೋನವನ್ನು ಆಧುನೀಕರಿಸಿ, ಉದ್ಯಮಶೀಲರನ್ನಾಗಿ ಮಾಡಬಹುದು. ಕೃಷಿ ಅವಲಂಬಿತ ದೇಶದಲ್ಲಿ, ಕೃಷಿ ಪದವೀಧರರಿಗೆ ಮತ್ತು ತಂತ್ರಜ್ಞರಿಗೆ ಭವಿಷ್ಯದಲ್ಲಿ ಹೆಚ್ಚಿನ ಬೇಡಿಕೆ ಇದೆ.

ಎಂ.ಎಸ್ಸಿ ಕೋರ್ಸ್ ನಂತರ ಸರ್ಕಾರದ ಕೃಷಿ, ತೋಟಗಾರಿಕೆ, ಮೀನುಗಾರಿಕೆ, ಹೈನುಗಾರಿಕೆ, ರೇಷ್ಮೆ, ನೀರಾವರಿ, ಪಶುಸಂಗೋಪನೆ ಇಲಾಖೆಗಳಲ್ಲಿ ವೃತ್ತಿಯನ್ನು ಅರಸಬಹುದು. ಕೃಷಿ ಸಂಬಂಧಿತ ಆಹಾರ ಸಂಸ್ಕರಣಾ ಕ್ಷೇತ್ರ, ಅಭಿವೃದ್ಧಿಯ ಪಥದಲ್ಲಿದೆ. ಕಚ್ಚಾ ಧಾನ್ಯಗಳು ಮತ್ತು ಇನ್ನಿತರ ಆಹಾರ ಪದಾರ್ಥಗಳ ಸಂಗ್ರಹಣೆ, ಶುದ್ಧೀಕರಣ, ಸಂಸ್ಕರಣೆ, ಸುರಕ್ಷತೆ ಮತ್ತು ಸೂಕ್ತ ಪ್ಯಾಕಿಂಗ್ ನಂತರ ಬಳಕೆಗೆ ಯೋಗ್ಯ ರೀತಿಯಲ್ಲಿ ಸಿದ್ಧಪಡಿಸುವ ಕ್ಷೇತ್ರಗಳಿಗೆ, ಬೇಡಿಕೆ ಹೆಚ್ಚಾಗುವ ನಿರೀಕ್ಷೆಯಿದೆ. ಸ್ವಂತ ಉದ್ದಿಮೆಗೆ ವಿಪುಲವಾದ ಅವಕಾಶಗಳಿವೆ. ಖಾಸಗಿ ಕ್ಷೇತ್ರದ ಕೃಷಿ ಮತ್ತು ಆಹಾರ ಸಂಬಂಧಿತ ಸಂಸ್ಥೆಗಳಲ್ಲೂ, ವೃತ್ತಿಯ ಅವಕಾಶಗಳಿವೆ. ಯುಪಿಎಸ್‌ಸಿ/ಕೆಪಿಎಸ್‌ಸಿ ಪರೀಕ್ಷೆ ಬರೆದು ಸರ್ಕಾರದ ಉನ್ನತ ಹುದ್ದೆಗೆ ಭಾಜನರಾಗಬಹುದು, ಎಂ.ಎಸ್ಸಿ (ಕೃಷಿ ವಿಸ್ತರಣೆ) ಕೋರ್ಸ್ ನಂತರ ಭವಿಷ್ಯವನ್ನು ರೂಪಿಸಿಕೊಳ್ಳಲು ಹಲವಾರು ಅವಕಾಶಗಳಿವೆ. ವೃತ್ತಿಯೋಜನೆಯ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://youtu.be/MHnPg_sp6E0

2. ಐಚ್ಛಿಕ ಕನ್ನಡ ಕೋರ್ಸ್ ಮಾಡುವುದರಿಂದ ಏನು ಪ್ರಯೋಜನವಿದೆ? ಮತ್ತು ಇಂಗ್ಲಿಷ್ ಕಲಿಯುವುದು ಹೇಗೆ?

ಹೆಸರು, ಊರು ತಿಳಿಸಿಲ್ಲ.

ಶಿಕ್ಷಣದ ನಂತರ, ಪ್ರಿಂಟ್, ಎಲೆಕ್ಟ್ರಾನಿಕ್ ಮತ್ತು ಡಿಜಿಟಲ್ ಸೇರಿದಂತೆ ಮಾಧ್ಯಮಗಳು, ವಿಷಯಾಭಿವೃದ್ಧಿ, ಪ್ರಕಾಶನ ಸಂಸ್ಥೆಗಳು, ಚಿತ್ರೋದ್ಯಮ, ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳು, ಖಾಸಗಿ ಸಂಸ್ಥೆಗಳು, ಇ-ಕಾಮರ್ಸ್, ಕೋಚಿಂಗ್ ತರಗತಿಗಳು, ಶಿಕ್ಷಣ ಸೇರಿದಂತೆ ಅನೇಕ ವಲಯಗಳಲ್ಲಿ ವೃತ್ತಿಯ ಅವಕಾಶಗಳಿವೆ. ಭಾಷೆಯ ತಜ್ಞತೆಯಿದ್ದರೆ ಮನೆಯಿಂದಲೇ ಮಾಡಬಹುದಾದ ವಿಷಯಾಭಿವೃದ್ಧಿ, ಅನುವಾದ, ಸಬ್‌ಟೈಟಲ್ಸ್, ಟ್ರಾನ್ಸ್ಕ್ರಿಪ್ಷನ್ ಇತ್ಯಾದಿ ಅವಕಾಶಗಳವೂ ಇವೆ. ಇಂಗ್ಲಿಷ್ ಕಲಿಯುವಿಕೆಗೆ ಸಹಾಯವಾಗಬಹುದಾದ ಈ ವಿಡಿಯೊ ವೀಕ್ಷಿಸಿ: https://youtu.be/NoFcIQAFDCA

3. ನನ್ನ ಮಗಳು ಬಿ.ಎಸ್ಸಿ (ಮೈಕ್ರೊಬಯಾಲಜಿ) ಮುಗಿಸಿ, ಎಂ.ಎಸ್ಸಿ (ಮೈಕ್ರೊಬಯಾಲಜಿ) ಸೇರಿದ್ದಾಳೆ. ಮುಂದಿನ ಉದ್ಯೋಗಾವಕಾಶಗಳ ಬಗ್ಗೆ ತಿಳಿಸಿ. ಓದಿರುವ ಯಾವ ವಿಷಯಗಳಲ್ಲಿ ಸ್ವಂತ ಉದ್ಯೋಗ ಮಾಡಬಹುದು. ಯಾವ ವಿಷಯದ ಬಗ್ಗೆ ಕಂಪ್ಯೂಟರ್ ಕೋರ್ಸ್ ಮಾಡಿದರೆ ಅನುಕೂಲವಾಗುತ್ತದೆ?

ನಿಂಗರಾಜು, ಮೈಸೂರು.

ಎಂ.ಎಸ್ಸಿ ನಂತರ ಬಯೋಮೆಡಿಕಲ್ ಸೈಂಟಿಸ್ಟ್, ಫಾರ್ಮಾಕಾಲಜಿಸ್ಟ್, ರಿಸರ್ಚ್ ಅಸೋಸಿಯೇಟ್, ಮೈಕ್ರೊಬಯಾಲಜಿಸ್ಟ್, ಲ್ಯಾಬೊರೇಟರಿ ಮ್ಯಾನೇಜರ್, ಇಕಾಲಜಿಸ್ಟ್, ಆಹಾರ ತಂತ್ರಜ್ಞ, ಆಹಾರ ಗುಣಮಟ್ಟ ನಿಯಂತ್ರಕ, ಉಪನ್ಯಾಸಕ ಮುಂತಾದ ಹುದ್ದೆಗಳನ್ನು ಸರ್ಕಾರಿ ಮತ್ತು ಖಾಸಗಿ ಕ್ಷೇತ್ರದ ಫಾರ್ಮಾ ಉದ್ದಿಮೆಗಳು, ಸಂಶೋಧನಾ ಸಂಸ್ಥೆಗಳು, ಆಹಾರ ಪದಾರ್ಥ ಮತ್ತು ಪಾನೀಯ ತಯಾರಿಕಾ ಉದ್ದಿಮೆಗಳು, ಆಹಾರ ಸಂಬಂಧಿತ ಉದ್ದಿಮೆಗಳು, ಸಾವಯವ ಉದ್ದಿಮೆಗಳು, ಆಸ್ಪತ್ರೆಗಳು, ಶಿಕ್ಷಣ ಸಂಸ್ಥೆಗಳು, ಆಹಾರ ಪರೀಕ್ಷಾ ಪ್ರಯೋಗಾಲಯಗಳು ಸೇರಿದಂತೆ ಹಲವಾರು ಕ್ಷೇತ್ರಗಳಲ್ಲಿ ವಿಪುಲವಾದ ಉದ್ಯೋಗಾವಕಾಶಗಳಿವೆ. ಈ ವೃತ್ತಿಗಳಲ್ಲಿ ಯಶಸ್ಸನ್ನು ಗಳಿಸಲು ಪರಿಣಾಮಕಾರಿಯಾಗಿ ಎಂಎಸ್ (ಆಫೀಸ್) ಬಳಸುವ ಸಾಮರ್ಥ್ಯವಿದ್ದರೆ ಸಾಕಾಗುತ್ತದೆ. ಸಂಶೋಧನೆ ಮಾಡಬೇಕಾದ ಸಂದರ್ಭಗಳಲ್ಲಿ, ಎಸ್‌ಪಿಎಸ್‌ಎಸ್ ಸಾಫ್ಟ್‌ವೇರ್ ಉಪಯುಕ್ತ. ಈ ವೈವಿಧ್ಯಮಯ ಕ್ಷೇತ್ರದಲ್ಲಿ ಅಭಿರುಚಿ, ಆಸಕ್ತಿ, ಕೌಶಲಗಳು ಮತ್ತು ಅನುಭವದ ಆಧಾರದ ಮೇಲೆ ಸ್ವಯಂ-ಉದ್ಯೋಗ ಅಥವಾ ಸ್ವಂತ ಉದ್ದಿಮೆಯನ್ನು ಆರಂಭಿಸಬಹುದು. ಹಾಗೂ, ಈ ನಿರ್ಧಾರ ತೆಗೆದುಕೊಳ್ಳುವ ಮುಂಚೆ, ಗ್ರಾಹಕರ ಆದ್ಯತೆಗಳು ಮತ್ತು ಮಾರುಕಟ್ಟೆಯ ಬೇಡಿಕೆ ಮತ್ತು ಪೂರೈಕೆ ಮುಂತಾದ ವಿಷಯಗಳ ಕುರಿತು ಸಂಶೋಧನೆ ಮಾಡುವುದು ಸೂಕ್ತ.

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು

JNANA VIJNANA VIDYAPEETHA Since 2001
Padmanabhanagar
ADMISSIONS OPEN
Pre-KG to VIII Std
Excellent CBSE Results
Contact: 080 2639 1509
11th Main, 6th Cross, R.K. Layout, Padmanabhanagar, Bangalore – 560070
www.jvvidyapeetha.org

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಅಧ್ಯಾಯ–1 ಸಮಾಂತರ ಶ್ರೇಢಿ

ಅಭ್ಯಾಸ – 1.3

3) ಸಮಾಂತರ ಶ್ರೇಢಿಯಲ್ಲಿ ___(ಹಿಂದಿನ ಸಂಚಿಕೆಯಿಂದ)

v) $d = 5$, $S_9 = 75$ ಆದರೆ a ಮತ್ತು a_9 ಕಂಡುಹಿಡಿಯಿರಿ

ಪರಿಹಾರ: $S_9 = 75$ $d = 5$

ನಮಗೆ ಗೊತ್ತಿರುವಂತೆ

$$S_n = \frac{n}{2}[2a+(n-1)d]$$
$$S_9 = \frac{9}{2}[2a+(9-1)d]$$
$$S_9 = \frac{9}{2}[2a+8d]$$
$$S_9 = 9(a+4d)$$
$$S_9 = 9(a+4x5)$$
$$S_9 = 9(a+20)$$
$$75 = 9a+180$$
$$9a = 75-180$$
$$9a = -105$$
$$a = -105/9$$
$$a = 35/3$$

ನಮಗೆ ಗೊತ್ತಿರುವಂತೆ

$$a_n = a+(n-1)d$$
$$a_9 = a+(9-1)(d)$$
$$a_9 = a+8(d)$$
$$a_9 = -\frac{35}{3}+40$$
$$a_9 = \frac{-35+120}{3}$$
$$a_9 = \frac{85}{3}$$

vi) $a = 2$, $d = 8$, $S_n = 90$ ಆದಾಗ n ಮತ್ತು an P ಕಂಡುಹಿಡಿಯಿರಿ

ಪರಿಹಾರ: ಇಲ್ಲಿ $a = 2$, $d = 8$, $S_n = 90$,

ನಮಗೆ ಗೊತ್ತಿರುವಂತೆ

$$S_n = \frac{n}{2}[2a+(n-1)d]$$
$$90 = \frac{n}{2}[2(2)+(n-1)8]$$
$$90 = n(2+(n-1)4)$$
$$90 = n[2+4n-4]$$
$$90 = n(4n-2)$$
$$90 = 2n(2n-1)$$
$$45 = n(2n-1)$$
$$45 = 2n^2-n$$
$$2n^2-n-45=0$$
$$2n^2-10n+9n-45=0$$
$$2n(n-5)+9(n-5)=0$$
$$(n-5)(2n+9)=0$$
$$n-5=0$$
$$n=5$$
$$a_n = a+(n-1)d$$
$$a_n = 2+(5-1)(8)$$
$$a_n = 2+4(8)$$
$$a_n = 2+32 = 34$$

vii) $a = 8$, $a_n = 62$, $S_n = 210$ ಆದಾಗ n ಮತ್ತು d ಕಂಡುಹಿಡಿಯಿರಿ

ಪರಿಹಾರ: $a = 8$, $an = 62$, $Sn = 210$

ನಮಗೆ ಗೊತ್ತಿರುವಂತೆ $a_n = a+(n-1)d$

$$62 = 8+(n-1)d$$
$$62-8 = (n-1)d$$
$$54 = (n-1)d$$
$$(n-1)d = 54 \ldots\ldots\ldots(1)$$

ನಮಗೆ ಗೊತ್ತಿರುವಂತೆ

$$S_n = \frac{n}{2}[2a+(n-1)d]$$
$$210 = \frac{n}{2}[2(8)+(n-1)d]$$
$$210 = \frac{n}{2}[16+54]$$

using (1)

$$210 = \frac{n}{2}[70]$$
$$210 = 35n$$
$$n = \frac{210}{35}$$
$$n = 6$$

1ನೇ ಸಮೀಕರಣದಲ್ಲಿ n = 6 ಹಾಕಿದಾಗ

$$(6-1)d = 54$$
$$5d = 54$$
$$d = 54/5$$

viii) $a_n = 4$, $d = 2$, $S_n = -14$ ಆದರೆ n ಮತ್ತು a ಕಂಡುಹಿಡಿಯಿರಿ

ಪರಿಹಾರ: $a_n = 4$, $d = 2$, $S_n = -14$

ನಮಗೆ ಗೊತ್ತಿರುವಂತೆ

$$a_n = a+(n-1)d$$
$$4 = a+(n-1)2$$
$$4 = a+2n-2$$
$$4+2 = a+2n$$
$$6 = a+2n$$
$$a+2n = 6 \ldots\ldots\ldots(1)$$

ನಮಗೆ ಗೊತ್ತಿರುವಂತೆ

$$S_n = \frac{n}{2}[2a+(n-1)d]$$
$$-14 = \frac{n}{2}[2(a)+(n-1)2]$$
$$-14 = n[a+(n-1)]$$
$$-14 = n[a-n-1]$$
$$-14 = n[6-n-1]$$

ಸಮೀಕರಣ 1 ರಿಂದ

$$a+2n = 6$$
$$a+n = 6-n$$
$$-14 = -n^2+5n$$
$$n^2-5n-14 = 0$$
$$n^2-7n+2n-14$$
$$n(n-7)+2(n-7) = 0$$
$$(n-7)(n+2) = 0$$

$n-7 = 0$ ಅಥವಾ $n+2 = 0$

$n = 7$ ಅಥವಾ $n = -2$

$$n = -2$$

–2 ನಕಾರಾತ್ಮಕ ಸಂಖ್ಯೆಯಾದ ಕಾರಣ ಅದನ್ನು ತೆಗೆದುಕೊಳ್ಳಲಾಗುವುದಿಲ್ಲ

ಹೀಗಾಗಿ n = 7

(ಮುಂದಿನ ಸಂಚಿಕೆ ನೋಡಿ)

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

II PUC MATHEMATICS

DETERMINANTS

1. The cost of 4 kg. onion, 3 kg. wheat and 2 kg. rice is Rs. 60. The cost of 2 kg. onion, 4 kg. wheat and 6 kg. rice is Rs. 90. The cost of 6 kg. onion, 2 kg. wheat and 3 kg. rice is Rs.70. Find cost of each item per kg. by matrix method.

A shopkeeper wants to purchase carry bags. Which carry bag you will not suggest to buy and why?

Soln:

$$A^{-1} = \frac{1}{|A|}\text{adj. }A$$
$$= \frac{1}{50}\begin{bmatrix} 0 & -5 & 10 \\ 30 & 0 & -20 \\ -20 & 10 & 10 \end{bmatrix}$$

Now, $AX = B \Rightarrow X = A^{1}B$

$$\Rightarrow \begin{bmatrix} x \\ y \\ z \end{bmatrix} = \frac{1}{50}\begin{bmatrix} 0 & -5 & 10 \\ 30 & 0 & -20 \\ -20 & -10 & 10 \end{bmatrix}\begin{bmatrix} 60 \\ 90 \\ 70 \end{bmatrix}$$
$$= \frac{1}{50}\begin{bmatrix} 0-450+700 \\ 1800+0-1400 \\ -1200+900+700 \end{bmatrix} = \frac{1}{50}\begin{bmatrix} 250 \\ 400 \\ 400 \end{bmatrix}$$
$$\Rightarrow \begin{bmatrix} x \\ y \\ z \end{bmatrix} = \begin{bmatrix} 5 \\ 8 \\ 8 \end{bmatrix};$$

$\therefore x = 5, y = 8$ and $z = 8$.

Contd /–

Cost of onion per kg. = Rs. 5
Cost of wheat per kg. = Rs. 8
Cost of rice per kg. = Rs. 8

b) Shopkeeper should not purchase polythene carry bags as it pollutes our environment. Also polythene carry bags contains toxic chemicals which are harmful to our health.

2. In a survey of 20 richest person of three residential society A, B, C it is found that in society A, 5 believes in honesty, 10 in hard work, 5 in unfair means while in B, 5 in honesty, 8 in hard in work , 7 in unfair means and in C, 6 in honesty, 8 in hard work, 6 in unfair means. If the per day income of 20 richest persons of society A, B, C are Rs. 32,500; 30,500; 31,000 respectively, then find the per day income of each type of people by matrix method.

(i) Which type of people has more per day income.

(ii) According to you, which type of person is better for country?

Soln:- Let x, y, z be the per day income of person believing in **honesty, hard work and unfair means**, respectively. The given situation can be written in matrix from as AX = B, where

$$A = \begin{bmatrix} 5 & 10 & 5 \\ 5 & 8 & 7 \\ 6 & 8 & 6 \end{bmatrix}.\ X = \begin{bmatrix} x \\ y \\ z \end{bmatrix},\ B = \begin{bmatrix} 32500 \\ 30500 \\ 31000 \end{bmatrix}$$

$\therefore AX = B \Rightarrow X = A^{-1}B$ ....(i)

Now for A^{-1}

$$|A| = \begin{vmatrix} 5 & 10 & 5 \\ 5 & 8 & 7 \\ 6 & 8 & 6 \end{vmatrix}$$
$$= 5(48-56)-10(30-42)+5(40-48)$$
$$= 40 \neq 0$$

$\therefore A^{1}$ exists *i.e.* A is non-singular

Also, $C_{11} = (-1)^{1+1}\begin{vmatrix} 8 & 7 \\ 8 & 6 \end{vmatrix} = (48-56) = -8$

$$C_{12} = (-1)^{1+2}\begin{vmatrix} 5 & 7 \\ 6 & 6 \end{vmatrix} = -(30-42) = 12$$
$$C_{13} = (-1)^{1+3}\begin{vmatrix} 5 & 8 \\ 6 & 8 \end{vmatrix} = (40-48) = -8$$
$$C_{21} = (-1)^{2+1}\begin{vmatrix} 10 & 5 \\ 8 & 6 \end{vmatrix} = -(60-40) = -20$$
$$C_{22} = (-1)^{2+2}\begin{vmatrix} 5 & 5 \\ 6 & 6 \end{vmatrix} = (30-30) = -0$$
$$C_{23} = (-1)^{2+3}\begin{vmatrix} 5 & 10 \\ 6 & 8 \end{vmatrix} = -(40-60) = 20$$
$$C_{31} = (-1)^{3+1}\begin{vmatrix} 10 & 5 \\ 8 & 7 \end{vmatrix} = (70-40) = 30$$
$$C_{32} = (-1)^{3+2}\begin{vmatrix} 5 & 5 \\ 5 & 7 \end{vmatrix} = -(35-25) = -10$$
$$C_{33} = (-1)^{3+3}\begin{vmatrix} 5 & 10 \\ 5 & 8 \end{vmatrix} = -(40-50) = 10$$
$$\text{Adj.}(A) = \begin{bmatrix} -8 & -20 & 30 \\ 12 & 0 & -10 \\ -8 & 20 & -10 \end{bmatrix}$$
$$A^{-1} = \frac{\text{adj.}(A)}{|A|}$$
$$= \begin{bmatrix} \frac{-8}{40} & \frac{-20}{40} & \frac{30}{40} \\ \frac{12}{40} & 0 & \frac{-1}{4} \\ \frac{-8}{40} & \frac{20}{40} & \frac{-10}{40} \end{bmatrix} = \begin{bmatrix} \frac{-1}{5} & \frac{-1}{2} & \frac{3}{4} \\ \frac{3}{10} & 0 & \frac{-10}{40} \\ \frac{-1}{5} & \frac{1}{2} & \frac{-1}{4} \end{bmatrix}$$

Putting the value of X, A^{-1}, B in (1), we get

$$\begin{bmatrix} x \\ y \\ z \end{bmatrix} = \begin{bmatrix} \frac{-1}{5} & \frac{-1}{2} & \frac{3}{4} \\ \frac{3}{10} & 0 & \frac{-1}{4} \\ \frac{-1}{5} & \frac{1}{2} & \frac{-1}{4} \end{bmatrix} \cdot \begin{bmatrix} 32500 \\ 30500 \\ 31000 \end{bmatrix}$$

Contd / -

ವಿದ್ಯಾರ್ಥಿ ವೇತನ ಕೈಪಿಡಿ

ಲೋರಿಯಾಲ್ ಬೂಸ್ಟ್ 2023

ವಿವರ: ಲೋರಿಯಾಲ್ ಇಂಡಿಯಾವು ಡಿಪ್ಲೊಮಾ, ಪದವಿಪೂರ್ವ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸುತ್ತಿದೆ.

ಅರ್ಹತೆ: ಭಾರತದೊಳಗಿನ ಯಾವುದೇ ಮಾನ್ಯತೆ ಪಡೆದ ಕಾಲೇಜು ಅಥವಾ ವಿಶ್ವವಿದ್ಯಾಲಯದಲ್ಲಿ ಐಟಿಐ ಡಿಪ್ಲೊಮಾ, ವೃತ್ತಿಪರ ಕೋರ್ಸ್, ಪದವಿ ಮತ್ತು ಸ್ನಾತಕೋತ್ತರ ಕಾರ್ಯಕ್ರಮದ ಅಂತಿಮ ಅಥವಾ ಅಂತಿಮ-ಪೂರ್ವ ವರ್ಷಗಳಲ್ಲಿ ಅಧ್ಯಯನ ಮಾಡುತ್ತಿರಬೇಕು. 18-30 ವರ್ಷ ವಯಸ್ಸಿನೊಳಗಿರಬೇಕು ಅರ್ಜಿದಾರರ ಕುಟುಂಬದ ಆದಾಯವು ₹ 8 ಲಕ್ಷಕ್ಕಿಂತ ಕಡಿಮೆಯಿರಬೇಕು (ಎಲ್ಲಾ ಮೂಲಗಳಿಂದ). ಕೋರ್ಸಿನ ಅವಧಿಯನ್ನು ಅವಲಂಬಿಸಿ ಕೋರ್ಸ್‌ನ ಅಂತಿಮ ಅಥವಾ ಅಂತಿಮ-ಎರಡನೇ ವರ್ಷ. ಹೆಚ್ಚಿನ ವಿವರಗಳಿಗಾಗಿ ಶಾರ್ಟ್ ಸೋರ್ಸ್ ಯುಆರ್‌ಎಲ್ ಅನ್ನು ಕ್ಲಿಕ್ ಮಾಡಿ.

ಅರ್ಜಿದಾರರು ತಮ್ಮ ಪದವಿ ಅಥವಾ ಸ್ನಾತಕೋತ್ತರ ಪದವಿಯ ಮೊದಲು ಅಥವಾ ಆ ಸಮಯದಲ್ಲಿ ಕೆಲಸ ಮಾಡಿದ್ದರೆ, ಅವರ ಕೆಲಸದ ಅನುಭವವು 5 ವರ್ಷಗಳನ್ನು ಮೀರಬಾರದು.

ನೆರವು: ಉದ್ಯಮದ ತಜ್ಞರು ನಡೆಸಲಿರುವ ಆನ್‌ಲೈನ್ ಅಪ್ ಸ್ಕಿಲ್ಲಿಂಗ್ ವೆಬಿನಾರ್‌ಗಳಲ್ಲಿ ಭಾಗವಹಿಸುವ ಅವಕಾಶ. ಪ್ರಪಂಚದಾದ್ಯಂತದ ವಿಶ್ವವಿದ್ಯಾಲಯಗಳು ಮತ್ತು ಕಂಪನಿಗಳಿಂದ 5,800 ಕ್ಕೂ ಹೆಚ್ಚು ಕೋರ್ಸ್‌ಗಳು, ವೃತ್ತಿಪರ ಪ್ರಮಾಣಪತ್ರಗಳು ಮತ್ತು ಪದವಿಗಳನ್ನು ಹೊಂದಿರುವ ಕಲಿಕಾ ವೇದಿಕೆಯಾದ ಕೋರ್ಸೆರಾದಲ್ಲಿ 34 ಕೋರ್ಸ್‌ಗಳಿಗೆ ಮೂರು ತಿಂಗಳ ವೆಚ್ಚ-ರಹಿತ ಪ್ರವೇಶಕ್ಕೆ ಅವಕಾಶ ಲೋರಿಯಾಲ್ ಇಂಡಿಯಾದ ಪ್ರಮುಖ ವೃತ್ತಿಪರರಿಂದ ವಿಶೇಷವಾದ ಒನ್-ಟು-ಒನ್ ಮೆಂಟರ್‌ಶಿಪ್ ಸೆಷನ್‌ಗಳು

ಅರ್ಜಿ ಸಲ್ಲಿಸಲು ಕೊನೆ ದಿನ: 15-12-2023

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್

ಹೆಚ್ಚಿನ ಮಾಹಿತಿಗೆ: Short Url: www.b4s.in/praja/LEAD2

ಸುಭಾಷಿತ
ಹೊಗಳಿಕೆ ಇಲ್ಲದೆಯೇ ಕೆಲಸ ಮಾಡಲು ನೀವು ಸದಾ ಸಿದ್ಧರಾಗಿರಬೇಕು.
–ಅರ್ನೆಸ್ಟ್ ಹೆಮಿಂಗ್‌ವೇ

ಜನಪರ ಆಡಳಿತ: ವಿರೋಧ ಪಕ್ಷದ ನಾಯಕನ ಹೊಣೆಯೂ ಗುರುತರ

ಕಾಂಗ್ರೆಸ್ ನೇತೃತ್ವದ ಈಗಿನ ಸರ್ಕಾರ ರಚನೆಯಾಗಿ ಆರು ತಿಂಗಳು ಕಳೆಯುವ ಹೊತ್ತಿಗಾದರೂ ವಿಧಾನಸಭೆಯ ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ಆರ್. ಅಶೋಕ ಅವರನ್ನು ಆಯ್ಕೆ ಮಾಡಲು ಬಿಜೆಪಿಗೆ ಸಾಧ್ಯವಾಗಿದೆ. ವಿಧಾನಸಭೆ ಚುನಾವಣೆಯಲ್ಲಿ ಸೋಲು ಕಂಡ ಬಳಿಕ ವಿರೋಧ ಪಕ್ಷದ ನಾಯಕನ ಆಯ್ಕೆಯ ಜೊತೆಯಲ್ಲೇ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರನ್ನೂ ಬದಲಿಸುವ ಮಾತು ಮುನ್ನೆಲೆಗೆ ಬಂದಿತ್ತು. ಅಳೆದೂ ತೂಗಿ ಕೊನೆಗೂ ಈಗ ಎರಡೂ ಸ್ಥಾನಗಳಿಗೆ ಆಯ್ಕೆ ಮತ್ತು ನೇಮಕ ಆಗಿದೆ. 'ವಿರೋಧ ಪಕ್ಷದ ನಾಯಕನನ್ನು ಆಯ್ಕೆ ಮಾಡಲೂ ಆಗಿಲ್ಲ' ಎಂಬ ಕಾಂಗ್ರೆಸ್ ನಾಯಕರ ನಿರಂತರ ಲೇವಡಿಯಿಂದ ಬಿಜೆಪಿಯ ಸ್ಥಳೀಯ ನಾಯಕರ ನೈತಿಕ ಸ್ಥೈರ್ಯ ಕುಸಿದಂತಾಗಿತ್ತು. ತಡವಾಗಿಯಾದರೂ ಆದ ಈ ಆಯ್ಕೆ ಮತ್ತು ನೇಮಕದಿಂದಾಗಿ ಪಕ್ಷದ ನಾಯಕರು ನಿಟ್ಟುಸಿರು ಬಿಡುವಂತಾಗಿದೆ. 16ನೇ ವಿಧಾನಸಭೆಯ ಮೊದಲ ಅಧಿವೇಶನವು ವಿರೋಧ ಪಕ್ಷದ ನಾಯಕನಿಲ್ಲದೇ ಮುಗಿದಿತ್ತು. ಡಿಸೆಂಬರ್ 4ರಿಂದ ಬೆಳಗಾವಿಯಲ್ಲಿ ವಿಧಾನಮಂಡಲದ ಅಧಿವೇಶನ ಜರುಗಲಿದೆ. ಈ ಅಧಿವೇಶನಕ್ಕೆ ಮುನ್ನವೇ ವಿರೋಧ ಪಕ್ಷದ ನಾಯಕನ ಆಯ್ಕೆ ಆಗಿರುವುದರಿಂದ ಬಿಜೆಪಿಯು ಮತ್ತೊಮ್ಮೆ ಮುಜುಗರಕ್ಕೆ ಸಿಲುಕುವುದರಿಂದ ಪಾರಾಗಿದೆ. ವಿರೋಧ ಪಕ್ಷದ ನಾಯಕನ ಆಯ್ಕೆಯ ದಿನ ನಡೆದ ಬೆಳವಣಿಗೆಗಳನ್ನು ಗಮನಿಸಿದರೆ, ಅಶೋಕ ಅವರ ಆಯ್ಕೆಯು ಬಹುಮತದ ನಿರ್ಧಾರವೇ ವಿನಾ ಸರ್ವಾನುಮತದಿಂದ ಆಗಿರುವುದಲ್ಲ ಎಂಬುದು ಸ್ಪಷ್ಟ. ಬಿಜೆಪಿಯ 66 ಶಾಸಕರ ಪೈಕಿ, ಇಬ್ಬರು ಬಂಡಾಯವೆದ್ದು ಸಭೆಯಿಂದ ಹೊರನಡೆದರೆ, ಮೂವರು ಗೈರುಹಾಜರಾಗಿದ್ದರು. ಹಟಕ್ಕೆ ಬಿದ್ದು ತಮ್ಮ ಮಗ ಬಿ.ವೈ. ವಿಜಯೇಂದ್ರ ಅವರನ್ನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಏರಿಸುವಲ್ಲಿ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರು ಯಶಸ್ವಿಯಾಗಿದ್ದಾರೆ. ವಿರೋಧ ಪಕ್ಷದ ನಾಯಕನ ಆಯ್ಕೆಯಲ್ಲಿಯೂ ಅವರ ಮಾತೇ ಮೇಲುಗೈ ಸಾಧಿಸಿದೆ ಎಂಬ ಚರ್ಚೆ ಪಕ್ಷದ ವಲಯದಲ್ಲೇ ನಡೆದಿದೆ. ಸರ್ಕಾರದ ನೀತಿ–ನಿಲುವುಗಳಲ್ಲಿನ ಅರೆಕೊರೆಗಳನ್ನು ಎತ್ತಿಹಿಡಿಯುವುದರ ಜೊತೆಗೆ ಜನರ ಬವಣೆಗಳನ್ನು ಸದನದ ಕಲಾಪದಲ್ಲಿ ಸಮರ್ಥವಾಗಿ ಮಂಡಿಸಿ, ಆಡಳಿತ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸುವ ನಾಯಕ ಪರ್ಯಾಯ ಶಕ್ತಿಕೇಂದ್ರವಾಗಿ ರೂಪುಗೊಂಡರೆ, ತಮ್ಮ ಮಗನ ಭವಿಷ್ಯಕ್ಕೆ ಸವಾಲು ಎದುರಾಗಬಹುದೆಂಬ ಯಡಿಯೂರಪ್ಪ ಅವರ ಆತಂಕವೂ ಈ ಆಯ್ಕೆಯ ಹಿಂದೆ ಕೆಲಸ ಮಾಡಿದೆ ಎಂಬ ಮಾತನ್ನು ಅಲ್ಲಗಳೆಯಲಾಗದು.

ಆಡಳಿತ ಪಕ್ಷ ದಾರಿ ತಪ್ಪಿ ನಡೆದಾಗ ಎಚ್ಚರಿಸುವ, ಜನಕಲ್ಯಾಣದ ವಿಷಯದಲ್ಲಿ ಜಾಣನಿದ್ರೆಗೆ ಜಾರದಂತೆ ಎಚ್ಚರದಲ್ಲಿರುವ ಮಹತ್ವದ ಜವಾಬ್ದಾರಿ ವಿರೋಧ ಪಕ್ಷದ ನಾಯಕನದು

ಕರ್ನಾಟಕದ ಸಂಸದೀಯ ಇತಿಹಾಸದಲ್ಲಿ ವಿಧಾನಸಭೆ ಹಾಗೂ ಪರಿಷತ್ತಿನ ವಿರೋಧ ಪಕ್ಷದ ನಾಯಕರಾಗಿದ್ದವರು ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಅದಕ್ಕೊಂದು ಘನತೆ, ಸಾರ್ವಜನಿಕ ಸಭ್ಯತೆಯ ಮೆರುಗು ಮೂಡಿಸಿದ್ದಾರೆ, ಜನಪರ ಕಾಳಜಿಯ ಚೌಕಟ್ಟನ್ನು ರೂಪಿಸಿಕೊಟ್ಟಿದ್ದಾರೆ. ತಮ್ಮ ಸಾಮರ್ಥ್ಯವನ್ನು ಹುರಿಗೊಳಿಸಿಕೊಂಡು ಈ ಉದಾತ್ತ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವ ಸವಾಲು ಅಶೋಕ ಅವರ ಮುಂದಿದೆ. ಏಳು ಬಾರಿ ಶಾಸಕರಾಗಿ, ಹಲವು ಸಚಿವ ಖಾತೆಗಳನ್ನು ನಿಭಾಯಿಸಿದ ಅನುಭವ ಇರುವ ಅಶೋಕ ಅವರು, ತಾವು ಪ್ರತಿನಿಧಿಸುವ ಪದ್ಮನಾಭನಗರ ಕ್ಷೇತ್ರದ ಆಚೆಗೆ ತಮ್ಮ ವ್ಯಕ್ತಿತ್ವವನ್ನು ಹಿಗ್ಗಿಸಿಕೊಳ್ಳಬೇಕಾಗಿದೆ. ರಾಜ್ಯ ಮಟ್ಟದ ನಾಯಕರಾಗಿ ಹೊರಹೊಮ್ಮುವ ಅವಕಾಶವನ್ನು ಪಕ್ಷ ಈಗ ಅವರಿಗೆ ಕಲ್ಪಿಸಿದೆ. ಸಂಸದೀಯ ಪ್ರಜಾಸತ್ತೆಯಲ್ಲಿ ಮುಖ್ಯಮಂತ್ರಿಯಷ್ಟೇ ಜವಾಬ್ದಾರಿ ವಿರೋಧ ಪಕ್ಷದ ನಾಯಕನಿಗೂ ಇದೆ. ಹೀಗಾಗಿ, ಈ ಸ್ಥಾನವನ್ನು ಛಾಯಾಮುಖ್ಯಮಂತ್ರಿ ಎಂದೇ ಕರೆಯಲಾಗುತ್ತದೆ. ಆಡಳಿತ ಪಕ್ಷದ ಲೋಪ–ದೋಷಗಳನ್ನು ತಿದ್ದುವ ಮೂಲಕ ಜನರ ನೋವಿಗೆ ದನಿಯಾಗಬೇಕಾದ ಗುರುತರ ಹೊಣೆ ಈ ಸ್ಥಾನದ್ದಾಗಿದೆ. ಆಡಳಿತ ಪಕ್ಷ ದಾರಿ ತಪ್ಪಿ ನಡೆದಾಗ ಎಚ್ಚರಿಸುವ, ಜನಕಲ್ಯಾಣದ ವಿಷಯದಲ್ಲಿ ಜಾಣನಿದ್ರೆಗೆ ಜಾರದಂತೆ ಎಚ್ಚರದಲ್ಲಿರುವ ಮಹತ್ವದ ಜವಾಬ್ದಾರಿ ಇರುವ ಹುದ್ದೆ ಇದು. ಹೀಗೆ, ಕಾರ್ಯನಿರ್ವಹಿಸಬೇಕಾದರೆ ಕರ್ನಾಟಕದ ಭೌಗೋಳಿಕ ಚಹರೆಗಳ ಅರಿವಿರಬೇಕು. ನೆಲದ ದನಿಗೆ ಕಿವಿಗೊಟ್ಟು, ಅದನ್ನು ಆಳವಾದ ಅಧ್ಯಯನ ಕೌಶಲದ ಮೂಲಕ ಮಥಿಸಿ, ಸರ್ಕಾರವನ್ನು ಬಡಿದೆಬ್ಬಿಸುವ ಚಾತುರ್ಯವೂ ಬೇಕು. ಅಲಕ್ಷಿತ ಸಮುದಾಯಗಳ ಸಂಕಷ್ಟ, ಮುಖ್ಯವಾಗಿ ದಲಿತರು, ರೈತರು, ಕಾರ್ಮಿಕರು, ಮಹಿಳೆಯರು, ಮಕ್ಕಳು ಅನುಭವಿಸುತ್ತಿರುವ ಶೋಷಣೆಗಳ ಬಗ್ಗೆ ಅಧ್ಯಯನದಿಂದ ದಕ್ಕಿಸಿಕೊಂಡ ವಿವರಗಳ [illegible] ಸರ್ಕಾರ [illegible] ನಡೆದಾಗ ಚಾಟಿ ಬೀಸಲು ಸಾಧ್ಯ. ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯದ ಸಂಬಂಧ, ನೀತಿಗಳ ಪರಿಣಾಮ, ಮುಖ್ಯವಾಗಿ ಹಣಕಾಸಿನ ವಿಷಯದ ಬಗ್ಗೆ ತಿಳಿವಳಿಕೆ ಇಲ್ಲದಿದ್ದರೆ, ಸರ್ಕಾರ ಹೇಳಿದ್ದನ್ನೇ ನಂಬಿ ಕೊರಗಬೇಕಾದ ಪರಿಸ್ಥಿತಿ ಬಂದೊದಗುತ್ತದೆ. ಅಲ್ಲದೆ, ಸಭಾಧ್ಯಕ್ಷರ ಪೀಠದ ಎದುರು ಧರಣಿ, ಸಭಾತ್ಯಾಗವು ಅತ್ಯುತ್ತಮ ನಾಯಕ ಆರಿಸಿಕೊಳ್ಳಬೇಕಾದ ದಾರಿಯಲ್ಲ. ಸಾರ್ವಜನಿಕ ಸಭ್ಯತೆ, ಸಭಾ ಘನತೆಯನ್ನು ಕಾಪಾಡಿಕೊಂಡು ಸರ್ಕಾರವನ್ನು ಮಣಿಸುವ ವಾಕ್ ಸಾಮರ್ಥ್ಯ ಮತ್ತು ಶಾಸಕರನ್ನು ಒಟ್ಟಿಗೆ ಕರೆದೊಯ್ಯುವ ಚಾತುರ್ಯವೂ ಬೇಕು. 135 ಶಾಸಕರೊಂದಿಗೆ ಭಾರಿ ಬಹುಮತ ಇರುವ ಆಡಳಿತ ಪಕ್ಷ ಇರುವಾಗ ವಿರೋಧ ಪಕ್ಷದ ನಾಯಕ ದುರ್ಬಲನಾದರೆ, ಸರ್ಕಾರ ಆಡಿದ್ದೇ ಆಟ ಎಂಬಂತಾಗುತ್ತದೆ. ಸಿಕ್ಕಿದ ಅವಕಾಶವನ್ನು ಸಮರ್ಪಕವಾಗಿ ಬಳಸಲು ಅಗತ್ಯ ತಯಾರಿ ಮಾಡಿಕೊಂಡರೆ ಅಶೋಕ ಅವರಿಗೆ ಇದು ಕಷ್ಟದ ಹಾದಿಯಲ್ಲ. ಬಳಸಿಕೊಳ್ಳದಿದ್ದರೆ ಜನರಿಗೆ, ರಾಜ್ಯಕ್ಕೆ ಹಾಗೂ ಅವರು ಪ್ರತಿನಿಧಿಸುವ ಪಕ್ಷಕ್ಕೆ ನಷ್ಟ.

ದಿನದ ಟ್ವೀಟ್

ಸಣ್ಣತನದ ನಡೆ

ಫೈನಲ್ ಪಂದ್ಯಕ್ಕೆ ಕಪಿಲ್ ದೇವ್ ಅವರನ್ನು ಆಹ್ವಾನಿಸದಿದ್ದುದು ಅವಮಾನಕರ. ಭಾರತಕ್ಕೆ ಮೊದಲ ವಿಶ್ವಕಪ್ ಜಯಿಸಿಕೊಟ್ಟ ತಂಡದ ನಾಯಕನನ್ನು ಭಾರತದಲ್ಲಿ ನಡೆದ ವಿಶ್ವಕಪ್ ಫೈನಲ್ ಪಂದ್ಯಕ್ಕೆ ಆಹ್ವಾನಿಸದಿರುವುದು ಸಣ್ಣತನದ ನಡೆ.

ಸುಮಂತ್ ರಾಮನ್, ರಾಜಕೀಯ ವಿಶ್ಲೇಷಕ

ಕಿಡಿನುಡಿ

ಸರ್ಕಾರ, ರಾಜಕೀಯ ಪಕ್ಷಗಳು, ಬೆಸ್ಕಾಂ ಅಧಿಕಾರಿಗಳು ಸೇರಿದಂತೆ ಯಾರೊಬ್ಬರೂ ತಲೆಕೆಡಿಸಿಕೊಳ್ಳುವುದಿಲ್ಲ. ಪ್ರತಿಯೊಬ್ಬರೂ ಹಣ ಮಾಡಿಕೊಳ್ಳುತ್ತಾ ಖುಷಿಯಾಗಿದ್ದಾರೆ. ಬಿಬಿಎಂಪಿ ವ್ಯಾಪ್ತಿಯಲ್ಲಿನ ರಸ್ತೆಗುಂಡಿ ಮತ್ತು ಜಲಾವೃತಗೊಳ್ಳುವ ರಸ್ತೆಗಳೇ ಆಗಿರಲಿ, ಬೆಸ್ಕಾಂ ವ್ಯಾಪ್ತಿಗೆ ಬರುವ ವಿದ್ಯುತ್ ಸಂಪರ್ಕಸಹಿತ ತೂಗಾಡುವ ವೈರ್‌ಗಳೇ ಇರಲಿ, ಭ್ರಷ್ಟಾಚಾರವೊಂದೇ ಅವರ ಏಕೈಕ ಕೆಲಸವಾಗಿದೆ.

(ಬೆಂಗಳೂರಿನ ಹೋಪ್‌ಫಾರ್ಮ್ ಜಂಕ್ಷನ್‌ನಲ್ಲಿ ರಸ್ತೆ ಮೇಲೆ ಬಿದ್ದಿದ್ದ ವಿದ್ಯುತ್ ತಂತಿ ತಗುಲಿ ಮಹಿಳೆಯೊಬ್ಬರು ತಮ್ಮ ಮಗುವಿನೊಂದಿಗೆ ಮೃತಪಟ್ಟಿರುವ ಪ್ರಕರಣಕ್ಕೆ ಪ್ರತಿಕ್ರಿಯೆ)

ಡಾ. ದೀಪಕ್ ಕೃಷ್ಣಮೂರ್ತಿ, ಹೃದ್ರೋಗ ತಜ್ಞ

25 ವರ್ಷಗಳ ಹಿಂದೆ

ಶುಕ್ರವಾರ, 20-11-1998

• ಉತ್ತರಪ್ರದೇಶ: 'ವಂದೇ ಮಾತರಂ', 'ಸರಸ್ವತಿ ವಂದನೆ' ತಂದ ವಿವಾದ

ಲಖನೌ, ನ. 19– ಉತ್ತರಪ್ರದೇಶದ ಎಲ್ಲ 1.5 ಲಕ್ಷ ಪ್ರಾಥಮಿಕ ಶಾಲೆಗಳಲ್ಲಿ 'ವಂದೇ ಮಾತರಂ' ಮತ್ತು 'ಸರಸ್ವತಿ ವಂದನೆ' ಕಡ್ಡಾಯವಾಗಿ ಹಾಡುವಂತೆ ಮಾಡುವ ರಾಜ್ಯ ಸರ್ಕಾರದ ನಿರ್ಧಾರ ಬಲು ದೊಡ್ಡ ವಿವಾದವನ್ನು ಹುಟ್ಟುಹಾಕಿದೆ.

ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಎಲ್ಲ ಮೂರು ಕೋಟಿ ವಿದ್ಯಾರ್ಥಿಗಳು ಪ್ರತಿದಿನ ಕಡ್ಡಾಯವಾಗಿ 'ವಂದೇ ಮಾತರಂ' ಮತ್ತು 'ಸರಸ್ವತಿ ವಂದನೆ' ಹಾಡಬೇಕು ಎಂದು ಕಲ್ಯಾಣ್ ಸಿಂಗ್ ನೇತೃತ್ವದ ಬಿಜೆಪಿ ಸರ್ಕಾರ ಎಲ್ಲ ಶಿಕ್ಷಣ ಸಂಸ್ಥೆಗಳಿಗೆ ಸೂಚಿಸಿದೆ.

• ರಾಜಕೀಯ ತಾಣವಾಗಿರುವ ಜಿಂದಾಲ್

ಬೆಂಗಳೂರು, ನ. 19– ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರು ವಿಶ್ರಾಂತಿ ಪಡೆಯುವ ಉದ್ದೇಶದಿಂದ ದಾಖಲಾಗಿರುವ ನಗರದ ಹೊರವಲಯದ ಜಿಂದಾಲ್ ಪ್ರಕೃತಿ ಚಿಕಿತ್ಸಾ ಕೇಂದ್ರ ಈಗ ರಾಜಕೀಯ ಚಟುವಟಿಕೆಗಳ ತಾಣವಾಗಿ ಮಾರ್ಪಟ್ಟಿದೆ.

ಮುಖ್ಯಮಂತ್ರಿಯವರ ಆರೋಗ್ಯ ವಿಚಾರಿಸಲು ಕಳೆದ ಎರಡು–ಮೂರು ದಿನಗಳಿಂದ ಸಚಿವರು–ಶಾಸಕರು ಒಬ್ಬರ ನಂತರ ಒಬ್ಬರು 'ಜಿಂದಾಲ್'ಗೆ ಎಡತಾಕುತ್ತಿದ್ದಾರೆ. ಪಟೇಲ್ ಅವರ ಆರೋಗ್ಯ ವಿಚಾರಿಸುವುದರ ಜೊತೆಗೆ ರಾಜಕೀಯ ಬೆಳವಣಿಗೆಗಳ ಬಗ್ಗೆಯೂ ಅಲ್ಲಿ ಚರ್ಚೆ ನಡೆಯುತ್ತಿರುವುದೇ ವಿಶೇಷವಾಗಿದೆ.

50 ವರ್ಷಗಳ ಹಿಂದೆ

ಮಂಗಳವಾರ, 20-11-1973

• ಬೀಡಾ ಅಂಗಡಿ ಆದ ಟ್ಯಾಕ್ಸಿ

ಕೊಟ್ಟಾಯಂ, ನ. 19– ಪೆಟ್ರೋಲ್ ಬೆಲೆ ಏರಿಕೆ ಪರಿಣಾಮ ನಿಜವಾಗಿ ತರಹೇವಾರಿ. ಕೊಟ್ಟಾಯಂನ ಟ್ಯಾಕ್ಸಿ ಚಾಲಕನೊಬ್ಬ ಈಗ ತನ್ನ ವಾಹನವನ್ನು 'ಸಂಚಾರಿ ಬೀಡಾ ಅಂಗಡಿ'ಯನ್ನಾಗಿ ಪರಿವರ್ತಿಸಿದ್ದಾನೆ.

ಟ್ಯಾಕ್ಸಿ ಓಡಿಸುವುದರಿಂದ ಬರುವ ಆದಾಯ ಕುಸಿದಿದ್ದರಿಂದ ಆತ ಈ ದಾರಿ ಹಿಡಿದ. ಪೆಟ್ರೋಲ್ ಹಾಕಿಸಿ ತನ್ನ 'ಅಂಗಡಿ'ಯನ್ನು ಆತ ಓಡಿಸುವುದಿಲ್ಲ. ಹಗ್ಗ ಕಟ್ಟಿ ರಥದಂತೆ ಅದನ್ನು ಬೀದಿಗಳಲ್ಲಿ ಎಳೆದುಕೊಂಡು ಹೋಗುತ್ತಾನೆ. ಅವನ ಸಂಚಾರಿ ಅಂಗಡಿಯಲ್ಲಿ ಬರೆದಿರುವ ತಲೆಬರಹ ಹೀಗಿದೆ–'ಸಂಚಾರಿ ಬೀಡಾ ಅಂಗಡಿ: ಇಂದಿರಾ ಸಮಾಜವಾದದ ಮಾದರಿ!'

ಮಕ್ಕಳ ಕಲಿಕಾ ಸಾಮರ್ಥ್ಯವನ್ನೇ ಕುಂಠಿತಗೊಳಿಸುವಂತಿದೆ ನಮ್ಮ ಶಿಕ್ಷಣ ವ್ಯವಸ್ಥೆ

ಪ್ರಶ್ನೋತ್ತರ ಅಭ್ಯಾಸ ಮತ್ತು ಫಲಿತಾಂಶ

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಯಾವುದೇ ಕಲಿಕೆ ಪರಿಪೂರ್ಣ ಅನ್ನಿಸಿಕೊಳ್ಳಬೇಕಾದರೆ ಶೇಕಡ 100ರಷ್ಟು ಕಲಿಕಾ ಸಾಧನೆಯನ್ನೇ ಹೊಂದಿರಬೇಕು ಎಂಬುದು ತಾತ್ವಿಕವಾಗಿ ಸರಿ. ಅಂತಹ ಗುರಿ ಸಾಧನೆಯಲ್ಲಿ ಕಲಿಕೆಯ ಸಮಗ್ರ ಮೌಲ್ಯಮಾಪನ ನಡೆಯಬೇಕಾಗುತ್ತದೆ. ಆದರೆ, ಪ್ರಸ್ತುತ ಪರೀಕ್ಷಾ ಪದ್ಧತಿಯು 'ಸಮಗ್ರ ಮೌಲ್ಯಮಾಪನ'ವನ್ನು ಮಾಡುವುದಿಲ್ಲ. ಸದ್ಯಕ್ಕೆ ಎಲ್ಲ ವಿದ್ಯಾರ್ಥಿಗಳೂ ಉತ್ತೀರ್ಣರಾಗುವುದು ಮುಖ್ಯವಾಗಿದೆ. ಇಂತಹ ಸ್ಥಿತಿಯಲ್ಲಿ, ಶಿಕ್ಷಣೋದ್ಯಮವು ತನ್ನ ಸಾಧನೆಯನ್ನು ಸಾಬೀತುಪಡಿಸಲು, ಸಮಸ್ತ ವಿದ್ಯಾರ್ಥಿಗಳೂ ನೂರಕ್ಕೆ ನೂರರಷ್ಟು ಅಂಕಗಳನ್ನು ಪಡೆಯುವುದೇ ಅತ್ಯುತ್ತಮ ಗುಣಮಟ್ಟ ಎನ್ನುವ ಸ್ಥಿತಿಗೆ ಶಿಕ್ಷಣ ವ್ಯವಸ್ಥೆಯನ್ನು ತಲುಪಿಸಿದರೆ ಯಾವ ಆಶ್ಚರ್ಯವೂ ಇಲ್ಲ.

ಸದ್ಯಕ್ಕೆ ಸಾರ್ವತ್ರಿಕ ಆದರ್ಶದ ಮಾನದಂಡವಾಗಿರುವ ನೂರಕ್ಕೆ ನೂರರಷ್ಟು ಉತ್ತೀರ್ಣತೆಯ ಪರಿಕಲ್ಪನೆಯು 'ಕಲಿಕೆ'ಯನ್ನು ಅರ್ಥಹೀನಗೊಳಿಸುತ್ತಿರುವ ಕೆಲವು ಉದಾಹರಣೆಗಳನ್ನು ನೋಡೋಣ.

ಎಂಬತ್ತು ಕಿ.ಮೀ. ವೇಗದಲ್ಲಿ ಸಾಗುವ ವಾಹನವನ್ನು ಸ್ವಲ್ಪ ಬೇಗ ತಲುಪಲಿಕ್ಕಾಗಿ ನೂರು ಕಿ.ಮೀ. ವೇಗದಲ್ಲಿ ಓಡಿಸಬಹುದು. ಆದರೆ 160 ಕಿ.ಮೀ. ವೇಗದಲ್ಲಿ ಓಡಿಸಲು ಸಾಧ್ಯವೇ? ನಮ್ಮ 'ನೂರು ಶೇಕಡ' ಗುಣಮಟ್ಟದ (?) ಹಲವು ಶಾಲೆಗಳಲ್ಲಿ ಇದು ಸಾಧ್ಯವಾಗುತ್ತದೆ. ಮೊದಮೊದಲು, ಮಾರ್ಚ್ ತಿಂಗಳಿಗೆ ಪೂರ್ಣಗೊಳಿಸಬೇಕಾದ ಪಾಠಗಳನ್ನು ಫೆಬ್ರುವರಿಗೇ ಪೂರ್ಣಗೊಳಿಸಿ ನಂತರ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಸಿದ್ಧಪಡಿಸುವ ಪದ್ಧತಿ ಅಘೋಷಿತವಾಗಿ ಜಾರಿಗೆ ಬಂತು. ಅದೀಗ ಮುಂದುವರಿದು, ಕೆಲವೆಡೆ ಅಕ್ಟೋಬರ್- ನವೆಂಬರ್‌ನಲ್ಲಿ ಪಾಠಗಳನ್ನು ಪೂರ್ಣಗೊಳಿಸಬೇಕು ಎಂಬ ಪರಿಕಲ್ಪನೆಯಾಗಿ, ಇನ್ನೂ ಅತಿಯಾದ ಹೆಸರಾಂತ ಶಾಲೆಗಳಲ್ಲಿ ಆಗಸ್ಟ್‌ಗೇ ಪಾಠಗಳನ್ನು ಪೂರ್ಣಗೊಳಿಸಿ ನಂತರ ಪರೀಕ್ಷೆಗೆ ಸಿದ್ಧಪಡಿಸುವ ಪದ್ಧತಿಯಾಗಿ ಚಲಾವಣೆಯಲ್ಲಿದೆ. ಹತ್ತು ತಿಂಗಳಿನಲ್ಲಿ ಪೂರ್ಣಗೊಳಿಸಬೇಕಾದ ಪಠ್ಯವಸ್ತುವನ್ನು ಮೂರೇ ತಿಂಗಳಲ್ಲಿ ಪೂರ್ಣಗೊಳಿಸುವುದು!

ಪಿ.ಯು.ಸಿ. ವಿಜ್ಞಾನ ಕಾಲೇಜುಗಳಲ್ಲಿ ಭಾಷಾ ಪಠ್ಯಗಳನ್ನು ಆಗಸ್ಟ್‌ಗೇ ಮುಗಿಸಿ ಉಳಿದ ತಿಂಗಳುಗಳಲ್ಲಿ ಭಾಷಾ ಬೋಧನೆಯ ಅವಧಿಯನ್ನು ಐಚ್ಛಿಕ ವಿಷಯಗಳ ಕಲಿಕೆ, ನೀಟ್ ತರಬೇತಿಯಂತಹವುಗಳಿಗಾಗಿ ಬಳಸುವ ಪದ್ಧತಿಯಿದೆ. ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ದೈಹಿಕ ಶಿಕ್ಷಣ, ಚಿತ್ರಕಲೆಯಂಥ ತರಗತಿಗಳು ಗಣಿತ ತರಗತಿಗಳಾಗಿ ಪರಿವರ್ತನೆಯಾಗುವ ಸ್ಥಿತಿಯಾದರೆ, ಪದವಿಪೂರ್ವ ಶಿಕ್ಷಣದಲ್ಲಿ ಭಾಷಾ ತರಗತಿಗಳು ದೈಹಿಕ ಶಿಕ್ಷಣ ತರಗತಿಗೆ ಸಮಾನವಾಗಿ ಪರಿಗಣಿಸಲ್ಪಟ್ಟು, ಗಣಿತ, ಭೌತಶಾಸ್ತ್ರದಂತಹ ತರಗತಿಗಳಾಗಿ ಪರಿವರ್ತನೆ ಆಗುತ್ತವೆ.

ಆಗಸ್ಟ್‌ನಲ್ಲಿ ಪಾಠವನ್ನು ಮುಗಿಸಿದ ನಂತರದ ಹಂತ ಇನ್ನೂ ವಿಚಿತ್ರವಾಗಿ ಇರುತ್ತದೆ. ನೋಟ್ಸ್ ಕೊಡುವ ಅಥವಾ ಬರೆಸುವ ಪದ್ಧತಿಗಳಿಲ್ಲ, ಇದ್ದರೂ 'ದಾಖಲೆ'ಗಾಗಿ ಸಾಂಕೇತಿಕ ರೀತಿಯದ್ದಾಗಿರುತ್ತವೆ. ಬದಲಿಗೆ, ಪರೀಕ್ಷೆಯಲ್ಲಿ ಬರಬಹುದಾದ ಪ್ರಶ್ನೆ ಮತ್ತು ಉತ್ತರಗಳ ಮುದ್ರಿತ ಪ್ರತಿಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಲಾಗುತ್ತದೆ. ಇಡೀ ವರ್ಷ ಇದನ್ನೇ ಅಭ್ಯಾಸ ಮಾಡಿಸುವುದು. ಅಭ್ಯಾಸದಲ್ಲೂ ತರಹೇವಾರಿ ಪದ್ಧತಿಗಳಿರುತ್ತವೆ. ಓದಿಸುವುದು, ಬಾಯಿಪಾಠ ಮಾಡಿಸುವುದು ಮತ್ತು ಬರೆಸುವುದು. ಬರೆದಾಗ ಒಂದೇ ಒಂದು ಸ್ಪೆಲಿಂಗ್ ದೋಷ ಉಂಟಾಗದ ಹಾಗೆ ಮಾಡಲು ಆಗುತ್ತದೆ. ಸಮಸ್ಯೆ ಏನೆಂದರೆ, ವಿದ್ಯಾರ್ಥಿಗಳು ಪ್ರಶ್ನೆಗೆ ಉತ್ತರವಾಗಿ ಸ್ಪೆಲಿಂಗ್ ಬರೆಯುತ್ತಾರೆ. ಆದರೆ ಒಂದು ವಾಕ್ಯವೊ, ಪದವೊ ಮರೆತುಹೋದರೆ, ವಿಚಾರ ಗೊತ್ತಿದ್ದರೂ ಅದನ್ನು ವಾಕ್ಯ ಮಾಡಿ ಬರೆಯುವುದು ಹೇಗೆ ಎಂದು ಗೊತ್ತಿಲ್ಲದೆ ಬಳಲುತ್ತಾರೆ.

ಪರೀಕ್ಷೆಗಾಗಿ ಅಭ್ಯಾಸ ಮಾಡಿಸುವ ಪ್ರಕ್ರಿಯೆಯಲ್ಲಿ ಆಗಿಂದಾಗ್ಗೆ ನಡೆಸುವ ಅಭ್ಯಾಸ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಸ್ವತಂತ್ರವಾಗಿ ಯೋಚಿಸಿ ಬರೆದರೆ ಅಂಕಗಳನ್ನು ಕಳೆಯುವ ಪದ್ಧತಿಯೂ ಇದೆ. ಒದಗಿಸಲಾಗಿರುವ ಮುದ್ರಿತ ಸಾಮಗ್ರಿಯಲ್ಲಿ ಇದ್ದ ಹಾಗೆಯೇ ಬರೆಯಬೇಕು ಎಂದು ಒತ್ತಾಯಿಸಲಾಗುತ್ತದೆ. ಅಂದರೆ ವಿದ್ಯಾರ್ಥಿಗಳು ಸ್ವತಂತ್ರವಾಗಿ ಯೋಚಿಸುವ ಹಾಗೂ ಇಲ್ಲ, ತಾವೇ ವಾಕ್ಯ ರಚನೆ ಮಾಡುವ ಹಾಗೂ ಇಲ್ಲ. ಇದನ್ನು ಕಲಿಕಾ ವ್ಯವಸ್ಥೆ ಎಂಬ ಹೆಸರಿನಿಂದ ಕರೆಯಲಾಗುತ್ತದೆ ಮಾತ್ರವಲ್ಲ ಅತ್ಯಂತ ಗುಣಮಟ್ಟದ ಶಿಕ್ಷಣ ಎಂದೂ ಘೋಷಿಸಲಾಗುತ್ತದೆ. ಏಕೆಂದರೆ ಅಲ್ಲಿ ನೂರು ಶೇಕಡ ಫಲಿತಾಂಶ ಬಂದಿರುತ್ತದೆ!

ಹೀಗಿರುತ್ತಾ, ಇಂತಹ ಫಲಿತಾಂಶಕ್ಕಾಗಿ ವಿದ್ಯಾರ್ಥಿಗಳಿಗೂ ಅಧ್ಯಾಪಕರಿಗೂ ತರಬೇತಿ ಕಾರ್ಯಾಗಾರಗಳನ್ನೂ ಆಯೋಜಿಸುವ ವ್ಯವಸ್ಥೆ ಇರುತ್ತದೆ. ನಿಜವಾಗಿ ಅಧ್ಯಾಪಕರಿಗೆ ತರಬೇತಿ ಬೇಕಾಗುವುದು ಉತ್ತಮ ಗುಣಮಟ್ಟದ ಬೋಧನೆಯನ್ನು ಹೇಗೆ ನಡೆಸಬೇಕು ಎಂಬುದರ ಬಗ್ಗೆ. ವಿದ್ಯಾರ್ಥಿಗಳಿಗೆ ತರಬೇತಿ ಬೇಕಾಗುವುದು ಸಮರ್ಥವಾಗಿ ಅಧ್ಯಯನ ನಡೆಸುವುದು ಹೇಗೆ, ತಮ್ಮ ಮಾನಸಿಕ ಸ್ಥಿರತೆಯನ್ನು, ಭಾವನಾತ್ಮಕ ನಿಯಂತ್ರಣವನ್ನು ಹೇಗೆ ಸಾಧಿಸಿಕೊಳ್ಳಬೇಕು ಎಂಬುದರ ಬಗ್ಗೆ. ಅಧ್ಯಯನ ನಡೆಸುವಾಗ ಸ್ವತಂತ್ರ ಚಿಂತನೆ, ತಾರ್ಕಿಕ ಸಾಮರ್ಥ್ಯ, ವಿಮರ್ಶಾ ಸಾಮರ್ಥ್ಯ, ಜ್ಞಾನದ ಅನ್ವಯಗಳೆಲ್ಲ ಸೇರಿಕೊಳ್ಳುತ್ತವೆ. ಆದರೆ 'ನೂರು ಶೇಕಡ' ಶಿಕ್ಷಣದಲ್ಲಿ ಅಧ್ಯಾಪಕರಿಗೆ ಬೋಧನಾ ಕೌಶಲವೂ ಬೇಡ, ವಿದ್ಯಾರ್ಥಿಗಳಿಗೆ ಅಧ್ಯಯನ ಕೌಶಲವೂ ಬೇಡ. ಒಂದು ರಾಶಿ ಪ್ರಶ್ನೋತ್ತರಗಳನ್ನು ಇರಿಸಿಕೊಳ್ಳುವುದು, ಅವುಗಳನ್ನು ಮಾತ್ರ ಓದುವುದು, ಬರೆಯುವುದು, ಬರೆದದ್ದು ಮುದ್ರಿತ ಸಾಮಗ್ರಿಯಲ್ಲಿ ಇದ್ದ ಹಾಗೇ ಇದೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸಿ ತಿದ್ದುವುದು- ಇಷ್ಟೇ ಪ್ರಕ್ರಿಯೆ ನಡೆಯುವುದು.

ಇದನ್ನಷ್ಟೇ ಮಾಡಲು ಯಾವ ತರಬೇತಿಯ ಅಗತ್ಯವೂ ಅಧ್ಯಾಪಕರಿಗಾಗಲೀ ವಿದ್ಯಾರ್ಥಿಗಳಿಗಾಗಲೀ ಬೇಕಾಗುವುದಿಲ್ಲ. ನಿಜವಾಗಿ ಡಿ.ಇಡಿ., ಬಿ.ಇಡಿ. ಮಾಡಿದ ಅಧ್ಯಾಪಕರ ಅವಶ್ಯಕತೆಯೂ ಇರುವುದಿಲ್ಲ. ವಿದ್ಯಾರ್ಥಿಗಳು ಓದಿ ಬರೆದು ಅಭ್ಯಾಸ ಮಾಡುತ್ತಾರೆಯೋ ಇಲ್ಲವೋ ಎಂದು ನೋಡಿಕೊಳ್ಳಲು ಒಬ್ಬ ಮನುಷ್ಯ ಇದ್ದರೆ ಸಾಕಾಗುತ್ತದೆ.

ಸಮರ್ಪಕವಾದ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಶ್ನೋತ್ತರಗಳನ್ನು ರಾಶಿ ಹಾಕಿಕೊಂಡು ಅಭ್ಯಾಸ ಮಾಡಿಸುವ ಪದ್ಧತಿಯ ಅವಶ್ಯಕತೆ ಇರುವುದು ಕಲಿಕೆಯಲ್ಲಿ ತೀರಾ ಹಿಂದುಳಿದ ವಿದ್ಯಾರ್ಥಿಗಳಿಗೆ ಮಾತ್ರ. ಶಿಕ್ಷಣ ಎಂದರೆ ಅಲ್ಲಿ ಶೋಧಕ ಪ್ರವೃತ್ತಿ, ಸ್ವತಂತ್ರ ಚಿಂತನೆ, ನೈತಿಕ ಪ್ರಜ್ಞೆ, ಭಾಷೆಯ ವಿಕಾಸ, ವರ್ತನೆಯಲ್ಲಿ ಸುಧಾರಣೆ, ಜ್ಞಾನವನ್ನು ಅನ್ವಯಿಸಿಕೊಳ್ಳುವ ಸಾಮರ್ಥ್ಯ, ಭಾವನಾತ್ಮಕ ಸಮಸ್ಥಿತಿಯ ಸಾಧನೆ, ಸ್ವತಂತ್ರವಾಗಿ ಭಾಷೆಯ ಪ್ರಯೋಗದಂತಹ ಅನೇಕ ಅಂಶಗಳು ಬರುತ್ತವೆ. ಪಠ್ಯವಸ್ತು ಇದನ್ನೆಲ್ಲ ಸಾಧಿಸಲು ಇರುವ ಮಾಧ್ಯಮ ಅಷ್ಟೆ; ಶಾಸ್ತ್ರೀಯ ಸಂಗೀತಗಾರನಿಗೆ ಪದಗಳು ಇದ್ದ ಹಾಗೆ. ಸಂಗೀತಗಾರನಿಗೆ ಪದಗಳು ರಾಗವನ್ನು ಧ್ವನಿಯಲ್ಲಿ ಹೊರಡಿಸಲು ಇರುವ ಸಾಧನವಷ್ಟೇ ವಿನಾ ಪದಗಳ ಅರ್ಥಗಳು ಅವನಿಗೆ ಮುಖ್ಯವಲ್ಲ. ಅದೇರೀತಿ ವಿದ್ಯಾರ್ಥಿಗಳಿಗೆ ಪಠ್ಯವಸ್ತುವು ಸಾಮರ್ಥ್ಯಗಳನ್ನು ಸಾಧಿಸಲು ಇರುವ ಮಾಧ್ಯಮವಷ್ಟೆ; ಪಠ್ಯವಸ್ತುವೇ ಪ್ರಧಾನವಲ್ಲ. ಆದರೆ ಎಲ್ಲ ವಿದ್ಯಾರ್ಥಿಗಳ ಆಸಕ್ತಿಗಳ ಕ್ಷೇತ್ರವನ್ನೇ ಮಾಧ್ಯಮವಾಗಿ ಇರಿಸಿಕೊಂಡು (ಉದಾ: ಮೀನು ಹಿಡಿಯುವುದು, ಮರ ಹತ್ತುವುದು...) ಬೋಧನೆಯನ್ನು ನಡೆಸುವ ಔಪಚಾರಿಕ ಶಿಕ್ಷಣ ನಮ್ಮ ಬಳಿ ಇಲ್ಲ. ಅದನ್ನು ಮಾಡುವುದೂ ಸುಲಭವಿಲ್ಲ. ಆಗ, ಇರುವ ಶಿಕ್ಷಣ ವ್ಯವಸ್ಥೆಯ ಪಠ್ಯವನ್ನು ಗ್ರಹಿಸಲಾಗದ ವಿದ್ಯಾರ್ಥಿಗಳು ಸರಿಸುಮಾರು ಶೇ 10ರಿಂದ 20ರಷ್ಟು ಇರುತ್ತಾರೆ. ಇವರಿಗೆ ಕಲಿಕಾ ಸಾಧನೆ ಆಗದಿದ್ದರೂ ಉತ್ತೀರ್ಣರಾದರೂ ಆಗಲಿ ಎಂಬ ಉದ್ದೇಶದಿಂದ ಪ್ರಶ್ನೋತ್ತರಗಳ ಅಭ್ಯಾಸವನ್ನು ಮಾಡಿಸಬೇಕು. ಹಿಂದೆಲ್ಲ, ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳನ್ನು ಟ್ಯೂಷನ್‌ಗೆ ಕಳಿಸುತ್ತಿದ್ದರು. ಅದು ಇದೇ ವ್ಯವಸ್ಥೆ.

ಆದರೆ, ನಮ್ಮ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ, ಚೆನ್ನಾಗಿ ಕಲಿಕಾ ಸಾಧನೆಯನ್ನು ಮಾಡಬಲ್ಲ ವಿದ್ಯಾರ್ಥಿಗಳನ್ನೂ ಆಗಸ್ಟ್‌ಗೇ ಪಾಠ ಮುಗಿಸಿ ಪ್ರಶ್ನೋತ್ತರಗಳ ಅಭ್ಯಾಸ ಮಾಡುವ ಪದ್ಧತಿಗೆ ಒಳಪಡಿಸಲಾಗುತ್ತಿದೆ. ಆ ಮೂಲಕ ಅವರ ಕಲಿಕಾ ಸಾಮರ್ಥ್ಯವನ್ನು ಕುಂಠಿತಗೊಳಿಸಿ ಅವರ ಪ್ರತಿಭೆಯನ್ನು ನಾಶ ಮಾಡಲಾಗುತ್ತಿದೆ. ಇದರರ್ಥ ನೂರು ಶೇಕಡ ಫಲಿತಾಂಶ ಬೇಡವೆಂದಲ್ಲ. ಆದರೆ ಅದು ಕಲಿಕೆ ನಡೆದದ್ದರ ಪರಿಣಾಮವಾಗಿ ವಿದ್ಯಾರ್ಥಿಯ ಕಲಿಕಾ ದಕ್ಷತೆಯಿಂದ ಬರುವ ಫಲಿತಾಂಶವಾಗಬೇಕೇ ವಿನಾ ಶಾಲೆಯನ್ನು ಜೈಲಿನಂತೆ ಪರಿವರ್ತಿಸಿ ಪ್ರಶ್ನೋತ್ತರಗಳ ಅಭ್ಯಾಸದ ಹಿಂಸೆಯಿಂದ ಬರುವ ಫಲಿತಾಂಶವಾಗಬಾರದು. ಆದ್ದರಿಂದ, ಆಗಸ್ಟ್‌ಗೆ ಪಾಠ ಮುಗಿಸಿ ಅಭ್ಯಾಸ ಮಾಡಿಸುವುದಲ್ಲ, ಕನಿಷ್ಠ ಫೆಬ್ರುವರಿವರೆಗಾದರೂ ಪಾಠ ಮಾಡಿ, ಪಾಠಗಳು ತಾನಾಗಿ ಪೂರ್ಣಗೊಳ್ಳುವಂತೆ ಆಗಬೇಕು ಎಂಬ ಚಿಂತನೆ ಸಮಾಜದಲ್ಲಿ ಬೆಳೆಯಬೇಕಾಗಿದೆ.

ಚುರುಮುರಿ

ಅಡಿಕೆಗೆ ಹೋದ ಮಾನ

• ಸುಮಂಗಲಾ

'ವಿರೋಧ ಪಕ್ಷದ ನಾಯಕನ್ನ ಆರಿಸೋದಕ್ಕೂ ಕಮಲಕ್ಕನ ಮನಿಯವ್ರಿಗೆ ತಾಕತ್ತು ಇಲ್ಲ, ಗಜಪ್ರಸವ ಅಂತಿದ್ದೆಯಲ್ಲ, ಈಗರೆ ಸಮಾಧಾನ ಆತಿಲ್ಲೋ...' ಬೆಕ್ಕಣ್ಣ ನನ್ನ ಮೂತಿಗೆ ತಿವಿದು ಸುದ್ದಿ ತೋರಿಸಿತು. 'ಆತೇಳು... ದಿಲ್ಲಿಯಿಂದ ಭರ್ಜರಿ ದೀಪಾವಳಿ ಧಮಾಕಾ ಕಳಿಸ್ಯಾರೆ. ಕಡಿಗೂ ಯತ್ನಾಳ ಪಟಾಕಿ, ಜಾರಕಿಹೊಳಿ ಪಟಾಕಿ ಎಲ್ಲಾ ಠುಸ್ಸೆಂದವು' ಎಂದೆ.

'ನಮ್ ಕಮಲಕ್ಕನ ಮನಿಯವ್ರು ಭಯಂಕರ ವಿಚಾರ ಮಾಡಿ ಅವರಿನ್ನ ಆಯ್ಕೆ ಮಾಡ್ಯಾರೇಳು. ನೋಡ್ತಿರು... ನಮ್ ವಿಜಿಯಣ್ಣ, ಅಶೋಕ ಮಾಮ ಹೆಂಗ ಜೋಡೆತ್ತಿನಂಗೆ ದುಡಿದು, ಅಷ್ಟೂ ಎಂಪಿ ಸೀಟು ಗೆದ್ದು, ಎಂಪಿಗಳನ್ನ ಗಾಡಿವಳಗೇ ದಿಲ್ಲೀಗೆ ಕಳಿಸ್ತಾರೆ' ಬೆಕ್ಕಣ್ಣ ಮೀಸೆ ತಿರುವಿತು.

'ಜೋಡೆತ್ತುಗಳಿಗೆ ನಡುವೆ ಟಾಂಗ್ ಕೊಡಾಕೆ ಗ್ಯಾರಂಟಿ ಕಳ್ಳೆತ್ತುಗಳು ಅದಾವು ಅಂತ ನಿಮ್ಮ ರಾಮುಲು ಮಾಮ ಹೇಳ್ಯಾನೆ, ಹಿಂಗಾಗಿ ಹುಷಾರಾಗಿರಕೆ ಹೇಳು' ಎಂದೆ.

'ಆ ಕಳ್ಳೆತ್ತುಗಳಿಗೆ ಪಾಠ ಕಲಿಸೋದಕ್ಕೆ ನಮ್ ಕುಮಾರಣ್ಣ ಟೊಂಕ ಕಟ್ಟಿ ನಿಂತಾನೇಳು... ಪವರ್ ಸಿಎಂ ಯಾರು ಅಂತ ವಿಡಿಯೊ ಮೇಲೆ ವಿಡಿಯೊ ಬಿಡುಗಡೆ ಮಾಡಾಕೆ ಹತ್ಯಾನೆ. ಪುತ್ರವ್ಯಾಮೋಹ ಬಲು ಕೆಟ್ಟದು!' ಎನ್ನುತ್ತ ಗುರುಗುಟ್ಟಿತು.

'ಅದ್ರೂ ಪಾಪ ಕಣಲೇ ನಿಮ್ಮ ಕುಮಾರಣ್ಣ, ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು ಅಂತಾರಲ್ಲ, ಹಂಗೆ ಸುಖಾಸುಮ್ಮನೆ ಕರೆಂಟು ಕಳ್ಳ ಅನ್ನಿಸಿಕೊಳ್ಳೋ ಹಂಗಾತು' ನಾನು ಕಿಚಾಯಿಸುತ್ತಿದ್ದಂತೆ ಬೆಕ್ಕಣ್ಣ ಮಾತು ಬದಲಿಸಿತು.

'ಹೋಗ್ಲಿಬಿಡು, ನಮಗ್ಯಾಕೆ ದೊಡ್ಡೋರ ವಿಚಾರ. ನನಗೆ ಈಗ ತೆಲಂಗಾಣಕ್ಕಾದರೂ ಕಳಿಸು' ಎಂದಿತು. 'ಎಲ್ಲಾರೂ ವಿಶ್ವಕಪ್ ಕ್ರಿಕೆಟ್ ನೋಡಾಕೆ ಅಹ್ಮದಾಬಾದಿಗೆ ಹೊರಟರೆ ನೀ ತೆಲಂಗಾಣಕ್ಕೆ ಎದಕ್ಕೆ ಹೊರಟೀಯಲೇ?'

'ಅಲ್ಲಿ ಈಸಲ ಬಿಜೆಪಿನೇ ಅಧಿಕಾರಕ್ಕೆ ಬರತೈತಿ. ನಾವು ಎಲ್ಲಾರಿಗೂ ಅಯೋಧ್ಯಾಗೆ ಫ್ರೀಯಾಗಿ ಕಳಿಸ್ತೀವಿ ಅಂತ ಶಾ ಅಂಕಲ್ಲು ಗ್ಯಾರಂಟಿ ಕೊಟ್ಟಾರೆ. ಇದೇ ನೆವದಾಗೆ ಅಯೋಧ್ಯೆಗೆ ಹೋಗಿ, ಅಲ್ಲಿ ಹೆಗ್ಗಣ ಹಿಡಿಯೋ ಕಾಂಟ್ರಾಕ್ಟ್ ಏನರೆ ಸಿಗತೈತಾ ನೋಡತೀನಿ' ಎಂದಿತು!

ಚರ್ಚೆ

ಮನೆಯಲ್ಲಿ ಇರಲಿ ಪುಸ್ತಕದ ಗೂಡು

ಇಂದಿನ 'ವ್ಯಕ್ತಿಕೇಂದ್ರಿತ' ಪರಿಸ್ಥಿತಿಯಲ್ಲಿ, ಪ್ರತಿಯೊಂದು ಮನೆಯಲ್ಲೂ ತಮ್ಮದೇ ಆದ ಒಂದು ಪುಟ್ಟ ಗ್ರಂಥಾಲಯವನ್ನು ಇಟ್ಟುಕೊಳ್ಳುವುದು ಬಹಳ ಅಗತ್ಯ

• ಪು.ಸೂ.ಲಕ್ಷ್ಮೀನಾರಾಯಣ ರಾವ್

'ಗ್ರಂಥಾಲಯ ಸಪ್ತಾಹವು ನಿತ್ಯದ ಹಬ್ಬವಾಗಲಿ' ಎಂಬ ಆಶಯವುಳ್ಳ ರಾಜಕುಮಾರ ಕುಲಕರ್ಣಿ ಅವರ ಲೇಖನ (ಸಂಗತ, ನ. 17) ತುಂಬ ಮೌಲಿಕವಾದುದಾಗಿದೆ. ಅಂತೆಯೇ 'ಮನೆಯೇ ಮಂತ್ರಾಲಯ...' ಎನ್ನುವ ಹಾಗೆ ಪ್ರತಿ ಮನೆಯೂ ಒಂದು ಪುಟ್ಟ ಗ್ರಂಥಾಲಯ ಆಗಬೇಕಾಗಿದೆ. ಇತ್ತೀಚೆಗೆ ಹಲವು ಲಕ್ಷ, ಕೋಟಿಗಳಷ್ಟು ಖರ್ಚು ಮಾಡಿ ವಿನೂತನ ವಿನ್ಯಾಸದೊಂದಿಗೆ ಮನೆಯನ್ನು ಕಟ್ಟುವುದು, ನಂತರ ವೈಭವದ ಗೃಹಪ್ರವೇಶ ಕಾರ್ಯಕ್ರಮವನ್ನು ಹಮ್ಮಿಕೊಂಡು ಬಂಧು-ಬಳಗವನ್ನು ಆಹ್ವಾನಿಸಿ, ಸಂಭ್ರಮಿಸುವುದು ಸಾಮಾನ್ಯ ಸಂಗತಿಯಾಗಿದೆ. ಐಷಾರಾಮಿ ಪೀಠೋಪಕರಣ ಕೂಡ ಇರುತ್ತದೆ. ಆದರೆ ಪುಸ್ತಕಗಳ ಗೂಡಿಗೆ ಅವಕಾಶವೇ ಇರುವುದಿಲ್ಲ. ಕನಿಷ್ಠ ತಾವು ಖುಷಿಯಿಂದ ಅಭ್ಯಾಸ ಮಾಡಿದ ಕೆಲವು ಪಠ್ಯಪುಸ್ತಕಗಳಾದರೂ ಇರುವುದಿಲ್ಲ.

ಬಿ.ಆರ್.ಅಂಬೇಡ್ಕರ್ ಅವರು, 'ಪುಸ್ತಕಗಳಿಲ್ಲದ ಮನೆ ಆತ್ಮವಿಲ್ಲದ ದೇಹದಂತೆ' ಎಂದಿದ್ದಾರೆ. ಈ ಮಾತಿನ ಅರ್ಥ ಅನೇಕರಿಗೆ ಆಗಿರುವುದೇ ಇಲ್ಲ. ಮನೆ ಎಂದರೆ ಭೋಗದ ಕೇಂದ್ರವಷ್ಟೇ ಅಲ್ಲ ಜ್ಞಾನದ ಕೇಂದ್ರವೂ ಆಗಬೇಕಾಗಿದೆ. 'ನಹಿ ಜ್ಞಾನೇನ ಸದೃಶಂ, ಪವಿತ್ರಂ' ಎಂದು ಭಗವದ್ಗೀತೆಯಲ್ಲಿ ಹೇಳಲಾಗಿದೆ. ಕುವೆಂಪು ಅವರು, 'ಮನೆಯೇ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರುವು...' ಎಂದಿದ್ದಾರೆ. ಜ್ಞಾನದಾಹದ ಬಿತ್ತನೆ ಮನೆಯಲ್ಲಿಯೇ ಆರಂಭವಾಗಬೇಕು. ಮನೆಯಲ್ಲಿನ ಹಿರಿಯರಲ್ಲಿ ಅಧ್ಯಯನದ ಅಭಿರುಚಿ ಇದ್ದರೆ ಮಕ್ಕಳಲ್ಲೂ ಓದುವ ಆಸಕ್ತಿ ತನಗೆ ತಾನೇ ಚಿಗುರುತ್ತದೆ.

ಪ್ರತಿ ಮನೆಗೂ ಕನ್ನಡದ ದೈನಿಕ ನಿತ್ಯ ಒಂದಾದರೂ ಬರಬೇಕು. ಅದರಿಂದ, ನಾವು ಕೂಪ-ಮಂಡೂಕಗಳಾಗದೆ ಸಮಕಾಲೀನ ಸಂದರ್ಭದ ಜ್ಞಾನವನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ. ಆ ಜ್ಞಾನವು ಪ್ರಜ್ಞೆಯಾಗಿ ಪರಿಣಮಿಸಬೇಕಾದರೆ ಸಾಪ್ತಾಹಿಕ, ಪಾಕ್ಷಿಕ, ಮಾಸಿಕಗಳನ್ನು ಕೊಂಡು ಓದುವ ಅಭ್ಯಾಸವನ್ನು ರೂಢಿಸಿಕೊಳ್ಳಬೇಕು. ಇವುಗಳ ಜೊತೆಗೆ ಮಹಾನ್ ವ್ಯಕ್ತಿಗಳ ಜೀವನಚರಿತ್ರೆ, ವಿಚಾರಗಳನ್ನು ತಿಳಿಸುವ ಪುಸ್ತಕಗಳು, ರಾಮಾಯಣ, ಮಹಾಭಾರತದಂತಹ ಸೃಜನಶೀಲ ಗ್ರಂಥಗಳು, ಅವರವರ ಆಸಕ್ತಿಗೆ ಅನುಗುಣವಾದ ಕೃತಿಗಳನ್ನು ಮನೆಯಲ್ಲಿ ತಂದು ಇಟ್ಟುಕೊಂಡು ಆಗಾಗ ಓದುತ್ತಿರುವುದರಿಂದ ಜ್ಞಾನದ ಆಳ-ಅಗಲದ ಪರಿಚಯವಾಗುತ್ತದೆ. ತನ್ಮೂಲಕ ಜೀವನಮೌಲ್ಯಗಳನ್ನು, ತನ್ನದೇ ಆದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಹೀಗಾಗಿ, ಪ್ರತಿಯೊಂದು ಮನೆಯಲ್ಲೂ ಅವರದೇ ಆದ ಒಂದು ಪುಟ್ಟ ಗ್ರಂಥಾಲಯವನ್ನು ಇಟ್ಟುಕೊಳ್ಳುವುದು ಇಂದಿನ 'ವ್ಯಕ್ತಿಕೇಂದ್ರಿತ' ಪರಿಸ್ಥಿತಿಯಲ್ಲಿ ಬಹಳ ಅಗತ್ಯ.

ಇಂದು ಮೊಬೈಲ್ ಫೋನ್, ಲ್ಯಾಪ್‌ಟಾಪ್‌ಗಳಲ್ಲಿ ಅನೇಕ ಮಾಹಿತಿಗಳು ಲಭ್ಯವಾಗುತ್ತವಾದರೂ ನಮಗೆ ಅಗತ್ಯವಿರುವ ನಿರ್ದಿಷ್ಟ ಮಾಹಿತಿ ಮತ್ತು ಸಮಗ್ರವಾದ ವಿವರಣೆ ಸಿಗುತ್ತದೆ ಎಂದುಕೊಳ್ಳಲಾಗದು. ಕೆಲವು ವೇಳೆ ಅಂತರ್ಜಾಲದಲ್ಲಿ ದೊರೆಯುವ ಮಾಹಿತಿಯು ಖಚಿತ ಹಾಗೂ ನಂಬಲರ್ಹ ಎಂದೂ ಹೇಳಲಾಗದು. ಎಲ್ಲರೂ ಗ್ರಂಥಾಲಯಗಳಿಗೆ ಹೋಗುವುದಾಗಲೀ ಅಲ್ಲಿ ನಮಗೆ ಬೇಕಾದ ಪುಸ್ತಕವನ್ನು ಹುಡುಕುವುದಾಗಲೀ ತುಂಬ ಕಷ್ಟದ ಕೆಲಸವಾಗುತ್ತದೆ. ಆದ್ದರಿಂದ ಅವರವರ ಆಸಕ್ತಿಯ, ಅಗತ್ಯದ ಪುಸ್ತಕಗಳನ್ನು ಸಂಗ್ರಹಿಸಿ ಮನೆಯಲ್ಲಿ ಇಟ್ಟುಕೊಂಡು ಓದುವುದು ಸುಲಭವಾದೀತು. ಆಗ ಓದು ನಿರಂತರವಾಗಿ ಸಾಗುತ್ತದೆ, ತಮ್ಮ ಬಿಡುವಿನ ಸಮಯವನ್ನು ಅರ್ಥಪೂರ್ಣವಾಗಿ ಬಳಸಿಕೊಳ್ಳಲೂ ಸಾಧ್ಯವಾಗುತ್ತದೆ.

ಕುಟುಂಬದ ಒಟ್ಟು ವರಮಾನದ ಶೇ 1– 2ರಷ್ಟನ್ನು ಮಾತ್ರ ಪುಸ್ತಕಗಳನ್ನು ಕೊಂಡುಕೊಳ್ಳಲು ಮೀಸಲಿಟ್ಟರೂ ಒಳ್ಳೆಯ ಗ್ರಂಥಾಲಯವನ್ನು ರೂಪಿಸಿಕೊಳ್ಳಬಹುದು (ಪುಸ್ತಕ ಪ್ರದರ್ಶನಗಳಲ್ಲಿ ವಿಶೇಷ ರಿಯಾಯಿತಿ ಇರುತ್ತದೆ. ರಸ್ತೆಬದಿ ಕೆಲವರು ಅರ್ಧಬೆಲೆಗೆ ಮಾರುತ್ತಿರುತ್ತಾರೆ). ಎಷ್ಟೋ ಮಂದಿ ಮಕ್ಕಳ ಚಪ್ಪಲಿ, ಬೂಟುಗಳಿಗೆಂದು, ಹೋಟೆಲ್ಲು-ಸಿನಿಮಾಗಳಿಗೆಂದು ಇದಕ್ಕಿಂತ ಹೆಚ್ಚು ಮೊತ್ತವನ್ನು ಖರ್ಚು ಮಾಡುತ್ತಾರೆ. ಆದರೆ ಪುಸ್ತಕಗಳಿಂದ ಸಿಗುವ ಜ್ಞಾನ, ಆನಂದ ಬೇರೆ ಯಾವುದರಿಂದಲೂ ಸಿಗಲಾರದೆಂಬ ಸತ್ಯ ಅನೇಕರಿಗೆ ತಿಳಿಯದು.



ನಮ್ಮಲ್ಲಿ ಅನೇಕರು ಪದವಿ, ಸ್ನಾತಕೋತ್ತರ ಪದವಿ ಪಡೆದವರಾಗಿದ್ದರೂ ಸಾಮಾಜಿಕ, ರಾಜಕೀಯ ಪರಿಜ್ಞಾನದ ಕೊರತೆಯಿಂದ ಕೂಡಿದವರಾಗಿರುತ್ತಾರೆ. ಅಷ್ಟೇ ಅಲ್ಲದೆ ನಾನಾ ಮೂಢನಂಬಿಕೆಗಳಿಂದ ಬದುಕನ್ನು ದುರ್ಭರಗೊಳಿಸಿಕೊಂಡಿರುತ್ತಾರೆ. ನೆಮ್ಮದಿಗಾಗಿ ಕಂಡಕಂಡ ಜ್ಯೋತಿಷಿಗಳ ಮೊರೆ ಹೋಗಿ ದಾರಿ ತಪ್ಪಿ ಅಲೆಯುತ್ತಿರುತ್ತಾರೆ. ಸರಳ ಬದುಕಿನ ಮೌಲ್ಯ ಹಾಗೂ ವೈಚಾರಿಕ ಚಿಂತನೆಗಳ ಬಗ್ಗೆ ಆತ್ಮವಿಶ್ವಾಸ ಇಲ್ಲದಿರುವುದೇ ಇದಕ್ಕೆಲ್ಲ ಕಾರಣ. ಸ್ವಾಧ್ಯಾಯದಿಂದ ಇಂತಹ ಗೊಂದಲಗಳಿಂದ ಪಾರಾಗಬಹುದು. 'ಸ್ವಾಧ್ಯಾಯಾನ್ನ ಪ್ರಮದಿತವ್ಯಂ, ಧರ್ಮಾನ್ನ ಪ್ರಮದಿತವ್ಯಂ' (ಸ್ವ ಅಧ್ಯಯನವನ್ನು ಬಿಡಬೇಡ, ಧರ್ಮವನ್ನು ಬಿಡಬೇಡ) ಎಂಬ ಋಷಿವಾಕ್ಯಗಳು ಇದನ್ನು ಸಮರ್ಥಿಸುತ್ತವೆ.

'ನಿನಗೆ ನೀನೇ ಬೆಳಕು' ಎಂಬುದು ಬುದ್ಧನ ಕೊನೆಯ ಮಾತು. 'ಅರಿವೇ ಗುರು' ಎಂಬುದು ಅಲ್ಲಮನ ನುಡಿ. ಹೀಗಾಗಿ, ನಮ್ಮ ಸಮಾಜವನ್ನು ಭಯಂಕರವಾಗಿ ಆವರಿಸಿರುವ ಅಜ್ಞಾನ ಹೋಗಬೇಕಾದರೆ, ಎಲ್ಲರೂ ತಮಗೆ ತಾವೇ ನಿಜವಾದ ಜ್ಞಾನದ ಕಡೆ ಹೆಜ್ಜೆ ಹಾಕಬೇಕಾಗಿದೆ. ಬಿಡುವಿಲ್ಲದೆ ದುಡಿದುಡಿದು ದಣಿಯುತ್ತಿರುವ ಯುವಕರು ಮತ್ತು ಇತರರಿಗೆ, ಜ್ಞಾನದ ಕಣಜಗಳಾಗಿರುವ ಒಳ್ಳೆಯ ಪುಸ್ತಕಗಳು ದಾರಿ ಸೂಚಿಸುವ ಕೈಮರಗಳಾಗುತ್ತವೆ. ಆದ್ದರಿಂದ ಒಂದೊಂದು ಮನೆಯೂ ಒಂದು ಪುಟ್ಟ ಗ್ರಂಥಾಲಯ ಆಗಬೇಕು.

ವಾಚಕರ ವಾಣಿ

ಭಿನ್ನ ಬಣ್ಣದ ಪಡಿತರ ಚೀಟಿ ವಿತರಣೆಯಾಗಲಿ

ಪ್ರಸ್ತುತ ಇರುವ ಪಡಿತರ ಚೀಟಿಗಳ ಸಂಖ್ಯೆಯನ್ನು ಹೆಚ್ಚಿಸುವಂತಿಲ್ಲ ಎಂಬ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಆದೇಶ (ಪ್ರ.ವಾ., ನ. 17) ಅಧಿಕಾರಿಗಳನ್ನು ಇಕ್ಕಟ್ಟಿಗೆ ಸಿಲುಕಿಸುವುದಷ್ಟೇ ಅಲ್ಲ ಜನರಿಗೂ ತೊಂದರೆ ಉಂಟುಮಾಡುತ್ತದೆ. ಏಕೆಂದರೆ, ಕೂಡುಕುಟುಂಬ ವಿಂಗಡಣೆಯಾಗಿರುವುದನ್ನು ಸಾಬೀತುಪಡಿಸಲು ಪಡಿತರ ಚೀಟಿಯೂ ಅವಶ್ಯಕ ದಾಖಲೆಯಾಗಿದೆ. ಅದೇ ಪತ್ರಿಕಾ ವರದಿಯಲ್ಲಿ 'ಗೃಹಲಕ್ಷ್ಮಿಯಂತಹ ಸೌಲಭ್ಯಗಳ ಫಲಾನುಭವಿಗಳ ಆಯ್ಕೆಗೆ ಪಡಿತರ ಚೀಟಿಯನ್ನೂ ಆಧಾರವನ್ನಾಗಿಸುವುದರಿಂದ ಹೆಚ್ಚು ಪಡಿತರ ಚೀಟಿಗಳಿಂದ ಸರ್ಕಾರಕ್ಕೂ ಹೊರೆ ಬೀಳುತ್ತದೆ' ಎಂದೂ ಹೇಳಲಾಗಿದೆ. ಇದು ಹೌದು ಕೂಡ.

ಈ ಸಮಸ್ಯೆ ಬಗೆಹರಿಸಲು, ಕೂಡುಕುಟುಂಬ ವಿಂಗಡಣೆಯ ದಾಖಲೆಗಾಗಿ ಪಡಿತರ ಚೀಟಿಗೆ ಅರ್ಜಿ ಹಾಕುವವರಿಗೆ 'ಸರ್ಕಾರದ ಯಾವುದೇ ಆರ್ಥಿಕ ಸಬ್ಸಿಡಿಗೆ ಉಪಯೋಗಿಸುವುದಿಲ್ಲ' ಎಂದು ಬರೆಸಿಕೊಂಡು ಬೇರೆಯೇ ಬಣ್ಣದ ಎಪಿಎಲ್ ಪಡಿತರ ಚೀಟಿಗಳನ್ನು ಕೊಡುವುದು ಸೂಕ್ತ ಎನಿಸುತ್ತದೆ. ಇದರಿಂದ ಸರ್ಕಾರಕ್ಕೂ ಯಾವುದೇ ಹೊರೆ ಬೀಳುವುದಿಲ್ಲ.

ಸುಬ್ರಮಣ್ಯ ಮಾಚಿಕೊಪ್ಪ, ಕಲ್ಕೆರೆ, ಕೊಪ್ಪ

ಮುಜುಗರ ತರುವ ಹೇಳಿಕೆ

'ಮುಸ್ಲಿಂ ಸಮುದಾಯದ ಸ್ಪೀಕರ್ ಎದುರು ಬಿಜೆಪಿಯ ದೊಡ್ಡ ದೊಡ್ಡ ನಾಯಕರು ನಮಸ್ಕರಿಸುವಂತೆ ಕಾಂಗ್ರೆಸ್ ಮಾಡಿದೆ' ಎಂದು ಸಚಿವ ಜಮೀರ್ ಅಹಮದ್ ಖಾನ್ ನೀಡಿದ್ದಾರೆ ಎನ್ನಲಾದ ಹೇಳಿಕೆಯು ತುಂಬಾ ಅನಾಗರಿಕವಾದದ್ದು. ಒಂದು ರಾಜ್ಯದ ಸಚಿವರಾಗಿ ಇಂತಹ ಬಾಲಿಶವಾದ ಹೇಳಿಕೆ ನೀಡುವುದು ಅವರನ್ನು ಆಯ್ಕೆ ಮಾಡಿರುವ ಜನರಿಗೆ ಮಾಡಿದ ಅವಮಾನ. ಪದೇಪದೇ ಇಂತಹ ಹೇಳಿಕೆಗಳನ್ನು ನೀಡುವುದರ ಮೂಲಕ ಜಮೀರ್ ಅವರು ತಮ್ಮ ಘನತೆ, ಗೌರವಕ್ಕೆ ಕುಂದು ತಂದುಕೊಳ್ಳುತ್ತಿರುವುದರ ಜೊತೆಗೆ ಸರ್ಕಾರಕ್ಕೆ, ಕಾಂಗ್ರೆಸ್ ಪಕ್ಷಕ್ಕೆ ಬಹಳಷ್ಟು ಮುಜುಗರ ಉಂಟುಮಾಡುತ್ತಿದ್ದಾರೆ. ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ಅಧ್ಯಕ್ಷರು ಕಡಿವಾಣ ಹಾಕಬೇಕಾಗಿದೆ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

ಅಂದಿನ ಶಾಸಕ... ಇಂದಿನ ಶಾಸಕ...

ವೈ.ಕೆ.ರಾಮಯ್ಯ ಅವರು ಶಾಸಕರಾಗಿದ್ದಾಗ ನಾನು ಕುಣಿಗಲ್ ತಾಲ್ಲೂಕು ಕಚೇರಿಯಲ್ಲಿ ಆಹಾರ ಪರಿವೀಕ್ಷಕನಾಗಿದ್ದೆ (2003ರಿಂದ 2005). ಶಾಸಕರು ಆಗಾಗ ತಾಲ್ಲೂಕು ಕಚೇರಿಗೆ ಸದ್ದಿಲ್ಲದೇ ಬರುತ್ತಿದ್ದರು. ಜನಸಾಮಾನ್ಯರ ಜೊತೆಯಲ್ಲಿ ನಿಂತು, 'ಯಾಕೆ ಬಂದಿದ್ದೀರಿ? ಏನು ಕೆಲಸ ಆಗಬೇಕು? ಯಾರ ಹತ್ತಿರ ನಿಮ್ಮ ಕೆಲಸ ಬಾಕಿ ಇದೆ?' ಎಂದೆಲ್ಲ ಪ್ರಶ್ನೆಗಳನ್ನು ಕೇಳಿ, ತಾವೇ ವಿಷಯ ನಿರ್ವಾಹಕರ ಬಳಿಗೆ ಹೋಗಿ ವಿಚಾರಿಸುತ್ತಿದ್ದರು. ತಾಲ್ಲೂಕಿನ ನೌಕರ ಸಿಬ್ಬಂದಿಯಲ್ಲಿ ಶಾಸಕರು ಎಲ್ಲಿ ಯಾವಾಗ ಬರುತ್ತಾರೋ ಎಂಬ ಭಯ ಇರುತ್ತಿತ್ತು. ಯಾವ ಅರ್ಜಿಯೂ ಬಾಕಿ ಇರದಂತೆ ನಿಗಾ ವಹಿಸುತ್ತಿದ್ದರು. ತಿಂಗಳಿಗೊಮ್ಮೆ ಪ್ರಗತಿ ಸಭೆ ನಡೆಯುತ್ತಿತ್ತು. ತಾಲ್ಲೂಕಿನ ನೌಕರರೆಲ್ಲಾ ಒಂದೇ ಕಡೆ ಸೇರುತ್ತಿದ್ದರು. 'ವ್ಯಾಧನೊಂದು ಮೊಲವ ತಂದಡೆ/ ಸಲುವ ಹಾಗಕ್ಕೆ ಬಿಲಿವರಯ್ಯಾ/ ನೆಲನಾಳ್ವನ ಹೆಣನೆಂದಡೆ ಒಂದಡಕೆಗೆ ಕೊಂಬವರಿಲ್ಲ' ಎಂಬ ಬಸವಣ್ಣನವರ ವಚನವನ್ನು ಸಿಬ್ಬಂದಿಯ ಮುಂದೆ ಹೇಳುತ್ತಿದ್ದರು. ಸತ್ತ ಮೊಲಕ್ಕೆ ಇರುವ ಬೆಲೆಯು ದೊರೆಯ ಹೆಣಕ್ಕೂ ಇಲ್ಲ ಎಂಬುದನ್ನು ತಿಳಿಸಿ, ಅಧಿಕಾರ ಇದ್ದಾಗ ಅರ್ಜಿ ಹಿಡಿದು ಬರುವ ಜನರಿಗೆ ಕಾನೂನು ವ್ಯಾಪ್ತಿಯಲ್ಲಿ ಸಹಾಯ ಮಾಡಿ, ಆಗದಿದ್ದರೆ ಸ್ಪಷ್ಟವಾಗಿ ಹೇಳಿ ಕಳುಹಿಸಿ, ಜನರನ್ನು ಅಲೆಸಬೇಡಿ ಎಂದು ಎಚ್ಚರಿಸುತ್ತಿದ್ದರು.

ಪ್ರಸ್ತುತ ತಾಲ್ಲೂಕು ಕಚೇರಿಗಳ ಒಳಗೆ, ಹೊರಗೆ ಸದಾ ಗಿಜಿಗುಡುವ ಜನರನ್ನು ನೋಡಿದಾಗ ಮನಸ್ಸಿಗೆ ನೋವಾಗುತ್ತದೆ. ಕಚೇರಿಗಳಲ್ಲಿ ಹಣ ಕೊಟ್ಟರೂ ಸಮಯ ಕೊಟ್ಟರೂ ಕೆಲಸ ಆಗದ ಪರಿಸ್ಥಿತಿ ನಿರ್ಮಾಣವಾಗಿದೆ. ನೌಕರರ ಕಾರ್ಯಕ್ಷಮತೆ, ಮತದಾರರು ಆಯ್ಕೆ ಮಾಡಿಕೊಂಡಿರುವ ಶಾಸಕರ ಬದ್ಧತೆ ಹಾಗೂ ದಕ್ಷತೆ, ತಮ್ಮ ವ್ಯಾಪ್ತಿಯ ಸರ್ಕಾರಿ ಕಚೇರಿಗಳಿಗೆ ಭೇಟಿ ಕೊಡದಿರುವ ಎಷ್ಟೋ ಶಾಸಕರ ಮನಃಸ್ಥಿತಿಯನ್ನು ಕಂಡು ವಿಷಾದವಾಗುತ್ತದೆ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಭಾನುವಾರದ ಭಾಗ್ಯ!

ನಿನ್ನೆ ಕೆಲಸಕ್ಕೆ ರಜಾ ದಿನ
ಭಾನುವಾರದ ಭಾಗ್ಯ!
ವಿಶ್ವಕಪ್ ಫೈನಲ್ ಬೇರೆ
ನೇರ ಪ್ರಸಾರ ಪೂರ್ತಿ ವೀಕ್ಷಿಸುವ
ನನ್ನಾಸೆ ನನ್ನವಳ ಮುಂದಿಟ್ಟೆ...
ಅವಳದೇ ಟಾಸ್ ವಿನ್!
ಬೌಲಿಂಗ್ ಇಲ್ಲವೇ ಬ್ಯಾಟಿಂಗ್
ಯಾವುದಾದರೂ ಒಂದು
ನೋಡಲು ತೀರ್ಮಾನವಾಯಿತು!
ಕುತೂಹಲದಿಂದ ಗೆಳೆಯನಿಗೆ
ಕರೆ ಮಾಡಿದಾಗ, ಸ್ಕೋರ್ ತಿಳಿಸುತ್ತಿದ್ದ...
ಜೊತೆ ಜೊತೆಗೆ ನಗುತ್ತಾ ಹೇಳಿದ
19ರಂದು ಅಂತರರಾಷ್ಟ್ರೀಯ
ಪುರುಷರ ದಿನವಂತೆ!

ಮ.ಗು.ಬಸವಣ್ಣ
ನಂಜನಗೂಡು

ಅಸಡ್ಡೆ ತೋರುವ ಅಧಿಕಾರಿಗಳಿಗೆ ಕಠಿಣ ಶಿಕ್ಷೆಯಾಗಲಿ

ಬೆಂಗಳೂರಿನ ಫುಟ್‌ಪಾತೊಂದರಲ್ಲಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದು ತಾಯಿ ಮತ್ತು ಮಗು ಮೃತಪಟ್ಟಿರುವುದು ದುರದೃಷ್ಟಕರ. ಬೆಸ್ಕಾಂ ಅಧಿಕಾರಿಗಳ ಬೇಜವಾಬ್ದಾರಿಯೇ ಇದಕ್ಕೆ ಕಾರಣ. ಹೋದ ವರ್ಷ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಸ್ಫೋಟಗೊಂಡು ತಂದೆ ಮತ್ತು ಮದುವೆ ನಿಶ್ಚಯವಾಗಿದ್ದ ಮಗಳು ಜೀವ ಕಳೆದುಕೊಂಡಿದ್ದರು. ಟ್ರಾನ್ಸ್‌ಫಾರ್ಮರ್ ಸುಸ್ಥಿತಿಯಲ್ಲಿ ಇರದಿದ್ದ ಬಗ್ಗೆ ಈ ಮೊದಲೇ ಸಾರ್ವಜನಿಕರು ಬೆಸ್ಕಾಂಗೆ ದೂರು ನೀಡಿದ್ದರು. ಇಂತಹ ಹಲವು ಪ್ರಕರಣಗಳು ರಾಜ್ಯದಲ್ಲಿ ನಡೆದಿವೆ. ಇವುಗಳಲ್ಲಿ ಆಕಸ್ಮಿಕವಾಗಿ ನಡೆದುದಕ್ಕಿಂತ ಅಧಿಕಾರಿಗಳು, ಸಿಬ್ಬಂದಿಯ ನಿರ್ಲಕ್ಷದಿಂದ ಆಗಿರುವುದೇ ಹೆಚ್ಚು. ಇಂತಹವರನ್ನು ಬರೀ ಬಂಧಿಸಿ, ಜಾಮೀನಿನ ಮೇಲೆ ಬಿಡುಗಡೆ ಮಾಡಿದರೆ ಪ್ರಯೋಜನವಾಗದು. ಉತ್ತಮ ಸಂಬಳ, ಸೌಲಭ್ಯ ಪಡೆದು ಕರ್ತವ್ಯದಲ್ಲಿ ಅಸಡ್ಡೆ ತೋರುವುದು ಅಕ್ಷಮ್ಯ. ಅಂತಹವರ ವಿರುದ್ಧ ತ್ವರಿತಗತಿಯಲ್ಲಿ ವಿಚಾರಣೆ ನಡೆಸಿ ಜೈಲು ಶಿಕ್ಷೆ ವಿಧಿಸಬೇಕು. ಇಂತಹ ಕ್ರಮಗಳನ್ನು ಕೈಗೊಂಡರೆ ಮಾತ್ರ ಬಡಪಾಯಿ ನಾಗರಿಕರು ಹೀಗೆ ಬಲಿಯಾಗುವುದು ತಪ್ಪೀತು.

ಲಕ್ಷ್ಮಿಕಾಂತ್ ಕೊಟ್ಟಾರಚೌಕಿ, ಮಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

UPI ವಿದೇಶಿ ಕಂಪನಿಗಳದ್ದೇ ಪಾರಮ್ಯ

ಭಾರತದಲ್ಲಿ ಡಿಜಿಟಲ್ ಪಾವತಿ ಸೇವೆಯು ವೇಗವಾಗಿ ಬೆಳವಣಿಗೆ ಕಾಣುತ್ತಿದೆ. ಅದರಲ್ಲಿಯೂ ಮುಖ್ಯವಾಗಿ ಏಕೀಕೃತ ಪಾವತಿ ವ್ಯವಸ್ಥೆ (ಯುಪಿಐ) ಜಾರಿಗೆ ಬಂದಾಗಿನಿಂದ ಡಿಜಿಟಲ್ ಪಾವತಿ ಇನ್ನಷ್ಟು ಸುಲಭ ಮತ್ತು ಕ್ಷಿಪ್ರಗೊಂಡಿದೆ. ರಾಷ್ಟ್ರೀಯ ಪಾವತಿ ನಿಗಮದಲ್ಲಿ (ಎನ್‌ಪಿಸಿಐ) ಇರುವ ಮಾಹಿತಿಯ ಪ್ರಕಾರ ಭಾರತದಲ್ಲಿ 60ಕ್ಕೂ ಅಧಿಕ ಯುಪಿಐ ಆ್ಯಪ್‌ಗಳಿವೆ. ಆದರೆ ಮಾರುಕಟ್ಟೆಯ ಮೇಲೆ ಹಿಡಿತ ಸಾಧಿಸಿರುವುದು ಮಾತ್ರ ವಿದೇಶಿ ಒಡೆತನದ ಫೋನ್‌ಪೇ ಮತ್ತು ಗೂಗಲ್ ಪೇ

• ವಿಶ್ವನಾಥ ಎಸ್.

ದಿನಬೆಳಗಾದರೆ ಹಾಲು, ಹಣ್ಣು, ತರಕಾರಿ ಖರೀದಿಸಲು, ಅಷ್ಟೇ ಏಕೆ ಒಂದು ಕಪ್ ಕಾಫಿ ಕುಡಿದರೂ ಅದರ ಹಣವನ್ನು ಮೊಬೈಲ್ ಮೂಲಕವೇ ಪಾವತಿಸುವುದು ಈಗ ಸರ್ವೇ ಸಾಮಾನ್ಯ. ಕಿರಾಣಿ ಅಂಗಡಿಯಿಂದ ಹಿಡಿದು ಮಾಲ್‌ಗಳವರೆಗೆ ಎಲ್ಲೆಡೆಯೂ ಕ್ಯುಆರ್ ಕೋಡ್ ಸೌಲಭ್ಯ ಇರುವುದರಿಂದ ಯುಪಿಐ ಆ್ಯಪ್ ಮೂಲಕ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ ಹಣ ಪಾವತಿಸುವುದು ರೂಢಿಯಾಗಿಬಿಟ್ಟಿದೆ. ನಗದಾಗಿ ಕೊಡಲು ಹೋದರೆ ವಿಚಿತ್ರವಾಗಿ ನೋಡುವ, 'ಫೋನ್ ಪೇ ಇಲ್ವಾ? ಸ್ಕ್ಯಾನ್ ಮಾಡಿ' ಎಂದು ಹೇಳುವಷ್ಟರಮಟ್ಟಿಗೆ ವ್ಯಾಪಾರಿಗಳೂ ಬದಲಾಗಿದ್ದಾರೆ.

ದೇಶದಲ್ಲಿ ಡಿಜಿಟಲ್ ಪಾವತಿ ಹೆಚ್ಚು ವೇಗ ಪಡೆದುಕೊಂಡಿದ್ದು ಕೋವಿಡ್ ಸಾಂಕ್ರಾಮಿಕ ಆರಂಭವಾದಾಗ. ಸೋಂಕು ಹರಡುವ ಭೀತಿಯಿಂದ ಜನರು ಡಿಜಿಟಲ್ ಪಾವತಿಯ ಮೊರೆ ಹೋಗುವುದು ಅನಿವಾರ್ಯ ಆಯಿತು. ಡಿಜಿಟಲ್ ಪಾವತಿಯು ಜನಪ್ರಿಯ ಆಗುವಲ್ಲಿ ಯುಪಿಐ ಆ್ಯಪ್‌ಗಳ ಪಾತ್ರ ಬಹಳ ಮುಖ್ಯವಾಗಿದೆ. ದೇಶದಲ್ಲಿ ಸರಿಸುಮಾರು 60ಕ್ಕೂ ಅಧಿಕ ಆ್ಯಪ್‌ಗಳಿವೆ. ಆದರೆ ಅದರಲ್ಲಿ ಹೆಚ್ಚು ಬಳಕೆ ಆಗುತ್ತಿರುವುದು ಫೋನ್‌ಪೇ, ಗೂಗಲ್ ಪೇ, ಪೇಟಿಎಂ, ಅಮೆಜಾನ್ ಪೇನಂತಹ ಯುಪಿಐ ಆ್ಯಪ್‌ಗಳು ಮಾತ್ರ. ಇವುಗಳಲ್ಲಿ ಮಾರುಕಟ್ಟೆಯ ಮೇಲೆ ಹಿಡಿತ ಸಾಧಿಸಿರುವುದು ವಿದೇಶಿ ಕಂಪನಿಗಳ ಒಡೆತನದ ಫೋನ್‌ಪೇ ಮತ್ತು ಗೂಗಲ್ ಪೇ ಎನ್ನುವುದೇ ಅಚ್ಚರಿ ವಿಷಯ.

ಯುಪಿಐ ಆ್ಯಪ್‌ಗಳ ಮೂಲಕ ನಡೆಯುತ್ತಿರುವ ವಹಿವಾಟಿನಲ್ಲಿ ವಾಲ್‌ಮಾರ್ಟ್ ಒಡೆತನದ ಫೋನ್ ಪೇ ಮತ್ತು ಗೂಗಲ್ ಒಡೆತನದ ಜಿ–ಪೇ ಪಾಲು ಒಟ್ಟಾರೆ ಶೇ 81.2ರಷ್ಟಿದೆ. ಇನ್ನು ಮೂರನೇ ಸ್ಥಾನದಲ್ಲಿ ಇರುವ ಭಾರತದ ಪೇಟಿಎಂನ ಷೇರುಪಾಲನ್ನು ಸೇರಿಸಿದರೆ ಶೇ 95.9ರಷ್ಟು ಆಗುತ್ತದೆ. ಅಂದರೆ ಯುಪಿಐ ಆ್ಯಪ್ ಮಾರುಕಟ್ಟೆಯನ್ನು ಮೂರು ಕಂಪನಿಗಳು ಮಾತ್ರವೇ ಆಳುತ್ತಿದ್ದು, ಅದರಲ್ಲಿ ಮೊದಲ ಎರಡು ಕಂಪನಿಗಳು ವಿದೇಶದ್ದಾಗಿವೆ.

ಯುಪಿಐ ಆ್ಯಪ್ ಬಳಕೆ ಎಲ್ಲೆಲ್ಲಿ?

ಹೆಚ್ಚು ಬಳಕೆ: ದಿನಸಿ, ಸೂಪರ್‌ಮಾರ್ಕೆಟ್, ಹೋಟೆಲ್, ರೆಸ್ಟೋರೆಂಟ್, ಮೊಬೈಲ್ ರೀಚಾರ್ಜ್, ಫಾಸ್ಟ್ ಫುಡ್ ರೆಸ್ಟೋರೆಂಟ್, ಡಿಪಾರ್ಟ್‌ಮೆಂಟಲ್ ಸ್ಟೋರ್‌ಗಳು, ಬೇಕರಿ, ಮೆಡಿಕಲ್
ಮಧ್ಯಮ ಬಳಕೆ: ಡೈರಿ, ವಿದ್ಯುತ್, ನೀರು, ಗ್ಯಾಸ್ ಬಿಲ್ ಪಾವತಿಗೆ, ಬಟ್ಟೆ ಖರೀದಿಗೆ
ಇತರೆ: ಎಲೆಕ್ಟ್ರಾನಿಕ್ಸ್ ಮಳಿಗೆ, ಸಲೂನ್, ಬ್ಯೂಟಿ ಪಾರ್ಲರ್, ಆನ್‌ಲೈನ್ ಖರೀದಿ, ಟ್ಯಾಕ್ಸಿ

ವಿದೇಶದ್ದೇ ಆಗಿರುವ ಅಮೆಜಾನ್ ಪೇ ಕಂಪನಿಯೂ ಯುಪಿಐ ಆ್ಯಪ್‌ನಲ್ಲಿ ಐದನೇ ಸ್ಥಾನದಲ್ಲಿ ಗುರುತಿಸಿಕೊಳ್ಳುತ್ತಿದ್ದು, ಬಹಳ ವೇಗವಾಗಿ ತನ್ನ ಮಾರುಕಟ್ಟೆ ಪಾಲನ್ನು ಹೆಚ್ಚಿಸಿಕೊಳ್ಳಲು ಕಾರ್ಯಯೋಜನೆ ರೂಪಿಸಿದೆ. ಆದರೆ, ಸದ್ಯ ಅದು ಹೊಂದಿರುವುದು ಶೇ 1ರಷ್ಟು ಮಾರುಕಟ್ಟೆ ಪಾಲು ಮಾತ್ರ. ಜನಪ್ರಿಯ ಸಾಮಾಜಿಕ ಮಾಧ್ಯಮ ಆಗಿರುವ ವಾಟ್ಸ್‌ಆ್ಯಪ್ ಸಹ ತನ್ನದೇ ಪಾವತಿ ಸೌಲಭ್ಯ ಹೊಂದಿದ್ದರೂ ಮಾರುಕಟ್ಟೆಯಲ್ಲಿ ಸೀಮಿತ ಮಟ್ಟಿಗೆ ಬಳಕೆಯಲ್ಲಿದೆ.

2016–17ರ ಮೊದಲ ತ್ರೈಮಾಸಿಕದಲ್ಲಿ ಪ್ರಮುಖ ಐದು ಕಂಪನಿಗಳು ಶೇ 9–10ರಷ್ಟು ಮಾರುಕಟ್ಟೆ ಷೇರುಪಾಲು ಹೊಂದಿದ್ದವು. ಆದರೆ ನಂತರದ ತ್ರೈಮಾಸಿಕದಲ್ಲಿಯೇ ಮೊದಲೆರಡು ಕಂಪನಿಗಳ ಪಾಲು ಶೇ 15ಕ್ಕೂ ಹೆಚ್ಚು ಏರಿಕೆ ಕಂಡಿತು. ನಾಲ್ಕನೇ ತ್ರೈಮಾಸಿಕದ ವೇಳೆಗೆ ಫೋನ್‌ಪೇ ಶೇ 45ರಷ್ಟು ಮತ್ತು ಗೂಗಲ್ ಪೇ ಶೇ 35ರಷ್ಟು ಷೇರುಪಾಲು ಹೊಂದಿತು. ನಂತರದಲ್ಲಿಯೂ ಮಾರುಕಟ್ಟೆ ಪಾಲು ಹೆಚ್ಚಾಗುತ್ತಲೇ ಇದೆ.

ಮೊಬೈಲ್ ಪಾವತಿ: ಮೊಬೈಲ್ ಫೋನ್ ಆ್ಯಪ್‌ಗಳನ್ನು ಬಳಸಿ ಮಾಡುವ ಪಾವತಿಯು ಇಳಿಕೆ ಕಾಣುತ್ತಿದೆ. 2023ರ ಮೊದಲ ಆರು ತಿಂಗಳಲ್ಲಿ ಮೊಬೈಲ್ ಪಾವತಿಯ ಮೂಲಕ 5,215 ಕೋಟಿ ವಹಿವಾಟು ನಡೆದಿದೆ. 2022ರ ಮೊದಲ ಆರು ತಿಂಗಳಲ್ಲಿ 5,540 ಕೋಟಿ ವಹಿವಾಟು ಆಗಿದೆ. ಮೌಲ್ಯದ ಲೆಕ್ಕದಲ್ಲಿ ₹95 ಲಕ್ಷ ಕೋಟಿಯಿಂದ ₹132 ಲಕ್ಷ ಕೋಟಿಗೆ ಶೇ 38.9ರಷ್ಟು ಏರಿಕೆ ಕಂಡಿದೆ.

ಸಂಸದರ ವಿರೋಧ: ಡಿಜಿಟಲ್ ಹಣ ಪಾವತಿ ವ್ಯವಸ್ಥೆಯಲ್ಲಿ ವಿದೇಶಿ ಕಂಪನಿಗಳು ಮೇಲುಗೈ ಹೊಂದಿರುವುದಕ್ಕೆ ಬಿಜೆಪಿಯ ಸಂದದರನ್ನೂ ಒಳಗೊಂಡು ಹಲವು ಸಂಸದರು ವಿರೋಧ ವ್ಯಕ್ತಪಡಿಸಿದ್ದು, ಈ ಸಂಬಂಧ ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ವಿಷಯ ಪ್ರಸ್ತಾಪಿಸಲು ಮುಂದಾಗಿದ್ದಾರೆ ಎಂದು ವರದಿಯಾಗಿತ್ತು.

ಈ ಕುರಿತು ಪಕ್ಷಗಳು ಒಂದು ಸ್ಪಷ್ಟವಾದ ನಿಲುವನ್ನು ಇನ್ನಷ್ಟೇ ತಳೆಯಬೇಕಿದೆ. ಹೀಗಾಗಿ ಈಗಲೇ ತಮ್ಮ ಹೆಸರನ್ನು ಬಹಿರಂಗಪಡಿಸಬಾರದು ಎಂದೂ ಸಂಸದರು ಹೇಳಿದ್ದರು. ಪಾವತಿ ವ್ಯವಸ್ಥೆಯಲ್ಲಿ ವಿದೇಶಿ ಕಂಪನಿಗಳ ಮೇಲುಗೈ ಇದ್ದರೆ ಅದರಿಂದ ಅಪಾಯ ಎದುರಾಗಬಹುದು ಎಂದೂ ಅವರು ಕಳವಳ ವ್ಯಕ್ತಪಡಿಸಿದ್ದರು. ಸಂಸದೀಯ ಸಮಿತಿಯ ಮುಂದೆಯೂ ವಿಷಯ ಪ್ರಸ್ತಾಪಿಸುವುದಾಗಿ ತಿಳಿಸಿದ್ದರು. ಆದರೆ, ಸಂಸತ್‌ನಲ್ಲಿ ಆಗಲಿ, ಸಂಸದೀಯ ಸಮಿತಿ ಎದುರಾಗಲಿ ವಿಷಯ ಪ್ರಸ್ತಾಪಿಸಲಾಗಿದೆಯೇ ಎಂಬುದು ವರದಿ ಆಗಿಲ್ಲ.

ಮಂಕಾಗಿದೆ ಭೀಮ್ ಆ್ಯಪ್

ಭೀಮ್– ರಾಷ್ಟ್ರೀಯ ಪಾವತಿ ನಿಮಗವು (ಎನ್‌ಪಿಸಿಐ) ಅಭಿವೃದ್ಧಿಪಡಿಸಿರುವ ಮೊಬೈಲ್ ಪಾವತಿ ಆ್ಯಪ್ ಇದಾಗಿದೆ. 2016ರ ಡಿಸೆಂಬರ್ 30ರಂದು ಇದನ್ನು ಬಿಡುಗಡೆ ಮಾಡಲಾಯಿತು. ನಗದು ರಹಿತ ವಹಿವಾಟಿಗೆ ಉತ್ತೇಜನ ನೀಡುವ ಉದ್ದೇಶದಿಂದ ಇದನ್ನು ಬಿಡುಗಡೆ ಮಾಡಲಾಗಿದೆ. ಆದರೆ, ಪ್ರತಿಸ್ಪರ್ಧಿ ಆ್ಯಪ್‌ಗಳಿಗೆ ಹೋಲಿಸಿದರೆ ಇದರ ಒಟ್ಟು ಬಳಕೆಯು ತೀರಾ ಕಡಿಮೆ ಇದೆ.

ತಾಂತ್ರಿಕ ದೋಷ ಮತ್ತು ಬೇರೆ ಆ್ಯಪ್‌ಗಳ ಬಳಕೆಯು ಇದಕ್ಕಿಂತಲೂ ಸುಲಭ ಆಗಿರುವುದರಿಂದ ಇದರ ಬಳಕೆ ಕಡಿಮೆ ಆಗುತ್ತಲೇ ಬರುತ್ತಿದೆ. 2022ರ ಅಕ್ಟೋಬರ್‌ನಲ್ಲಿ ₹8,523 ಕೋಟಿ ಮೌಲ್ಯದ ವಹಿವಾಟು ನಡೆದಿತ್ತು. ಇದು 2023ರ ಅಕ್ಟೋಬರ್‌ನಲ್ಲಿ ₹8,174 ಕೋಟಿಗೆ ಇಳಿಕೆ ಕಂಡಿದೆ. 2023ರ ಅಕ್ಟೋಬರ್‌ನಲ್ಲಿ ಫೋನ್‌ಪೇ ಮೂಲಕ ₹8,38,371 ಕೋಟಿ ಮೌಲ್ಯದ ವಹಿವಾಟು ನಡೆದಿದೆ. ಪ್ರಮುಖ ಆ್ಯಪ್‌ಗಳ ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿ ಇರುವ ಕ್ರೆಡ್‌ನ ವಹಿವಾಟು ಮೌಲ್ಯಕ್ಕೆ ಹೋಲಿಸಿದರೂ (₹34,691) ಭೀಮ್ ಆ್ಯಪ್ ವಹಿವಾಟು ಮೌಲ್ಯ ತೀರಾ ಕಡಿಮೆ ಇದೆ.



ರಿಟೇಲ್ ವಹಿವಾಟಿನಲ್ಲಿ ಸಿಂಹಪಾಲು

ದೇಶದಲ್ಲಿ ಡಿಜಿಟಲ್ ರೂಪದಲ್ಲಿ ನಡೆಯುತ್ತಿರುವ ವಹಿವಾಟಿನಲ್ಲಿ ಯುಪಿಐ ಪಾಲು ಗರಿಷ್ಠ ಪ್ರಮಾಣದಲ್ಲಿ ಇದೆ. ಇದರಲ್ಲಿಯೂ ಚಿಲ್ಲರೆ ವಹಿವಾಟಿಗೆ ಯುಪಿಐ ಮೂಲಕ ಹಣ ಪಾವತಿಸುವುದು ಹೆಚ್ಚಾಗುತ್ತಿದೆ ಎನ್ನುತ್ತದೆ ಪಿಡಬ್ಲ್ಯುಸಿ ಇಂಡಿಯಾ ವರದಿ

75%	90%	8,371	37,900
2022–23ರಲ್ಲಿ ಡಿಜಿಟಲ್ ವಹಿವಾಟಿನಲ್ಲಿ ಯುಪಿಐ ವಹಿವಾಟಿನ ಪಾಲು	2026–27ರ ವೇಳೆಗೆ ಡಿಜಿಟಲ್ ವಹಿವಾಟಿನಲ್ಲಿ ಯುಪಿಐ ಹೊಂದಲಿರುವ ಪಾಲು	ಕೋಟಿ 2022–23ರಲ್ಲಿ ಯುಪಿಐ ಮೂಲಕ ನಡೆದಿರುವ ವಹಿವಾಟುಗಳ ಸಂಖ್ಯೆ	ಕೋಟಿ 2026–27ರ ವೇಳೆಗೆ ಯುಪಿಐ ಮೂಲಕ ನಡೆಯಲಿರುವ ವಹಿವಾಟುಗಳ ಸಂಖ್ಯೆ

ಎನ್‌ಪಿಸಿಐ ನಿಯಮ ಹೇಳುವುದೇನು?

ಪಾವತಿ ನಿಗಮವು 2021ರ ಮಾರ್ಚ್‌ನಲ್ಲಿ ಯುಪಿಐ ಆ್ಯಪ್‌ಗಳಿಗೆ ನಿರ್ದಿಷ್ಟ ಕಾರ್ಯಾಚರಣೆ ಪ್ರಕ್ರಿಯೆಗಳನ್ನು ನೀಡಿದೆ. ಒಂದು ನಿರ್ದಿಷ್ಟ ಕಂಪನಿಯ ಮಾರುಕಟ್ಟೆ ಪಾಲು ಶೇ 30ರಷ್ಟನ್ನು ಮೀರುವಂತಿಲ್ಲ. ಒಂದೊಮ್ಮೆ ಹೆಚ್ಚಿನ ಪಾಲು ಹೊಂದಿದ್ದರೆ 2023ರ ಜನವರಿ ಒಳಗಾಗಿ ಕಡಿಮೆ ಮಾಡಿಕೊಳ್ಳಬೇಕು ಎನ್ನುವ ಗಡುವು ನೀಡಲಾಗಿತ್ತು. ಆದರೆ, ಕೆಲವು ಕಂಪನಿಗಳು ನಡೆಸಿದ ಲಾಬಿಯಿಂದಾಗಿ ಗಡುವು 2024ರ ಡಿಸೆಂಬರ್ 31ರವರೆಗೆ ವಿಸ್ತರಣೆ ಆಗಿದೆ

ಯುಪಿಐ ಆ್ಯಪ್‌ಗಳ ಮಾರುಕಟ್ಟೆ ಪಾಲು



ಯುಪಿಐ ವಹಿವಾಟು

(%) 2023ರ ಅಕ್ಟೋಬರ್‌ನಲ್ಲಿ



ಪಾವತಿಯ ಹೊಸ ಆಯ್ಕೆಗಳು

ರಾಷ್ಟ್ರೀಯ ಪಾವತಿ ನಿಗಮವು (ಎನ್‌ಪಿಸಿಐ) ಈಚೆಗಷ್ಟೇ ಕೆಲವು ಹೊಸ ಪಾವತಿ ಆಯ್ಕೆಗಳನ್ನು ಜಾರಿಗೊಳಿಸಿದೆ. ಅದರಲ್ಲಿ ಮುಖ್ಯವಾಗಿರುವುದು ಯುಪಿಐ ಲೈಟ್ ಎಕ್ಸ್, ಟ್ಯಾಪ್ ಆ್ಯಂಡ್ ಪೇ, ಹಲೋ ಯುಪಿಐ, ಕ್ರೆಡಿಟ್ ಲೈನ್ ಇತ್ಯಾದಿ.

Hello UPI!: ಧ್ವನಿ ಆಧಾರಿತ ಯುಪಿಐ ಪಾವತಿ ಆಯ್ಕೆ ಇದಾಗಿದೆ. ಯುಪಿಐ ಆ್ಯಪ್‌ನಲ್ಲಿ ವಾಯ್ಸ್ ಕಮಾಂಡ್, ದೂರವಾಣಿ ಕರೆ ಮತ್ತು ಐಒಟಿ ಸಾಧನಗಳ ಮೂಲಕ ಪಾವತಿ ಪ್ರಕ್ರಿಯೆ ಪೂರ್ಣಗೊಳಿಸಬಹುದು. ಸದ್ಯಕ್ಕೆ ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಮಾತ್ರವೇ ಇದು ಲಭ್ಯ.

ಬಿಲ್‌ಪೇ ಕನೆಕ್ಟ್: ಮೆಸೇಜಿಂಗ್ ಆ್ಯಪ್ ಮೂಲಕ 'Hi' ಎಂಬ ಸಂದೇಶ ಕಳುಹಿಸಿ ಬಿಲ್ ವಿವರ ಪಡೆಯಬಹುದಷ್ಟೇ ಅಲ್ಲದೆ ಬಿಲ್ ಮೊತ್ತ ಪಾವತಿಸಬಹುದು. ಸ್ಮಾರ್ಟ್‌ಫೋನ್ ಅಥವಾ ಮೊಬೈಲ್ ಡೇಟಾ ಇಲ್ಲದೆಯೇ ಮಿಸ್ಡ್ ಕಾಲ್ ನೀಡಿಯೂ ಬಿಲ್ ಪಾವತಿಸಬಹುದು. ಮಿಸ್ಡ್ ಕಾಲ್ ನೀಡಿದಾಕ್ಷಣ ಗ್ರಾಹಕರಿಗೆ ದೃಢೀಕರಿಸಲು ಮತ್ತು ಪಾವತಿ ಅಧಿಕೃತಗೊಳಿಸುವ ಕರೆ ಬರುತ್ತದೆ. ಧ್ವನಿ ಆಧಾರಿತ ಬಿಲ್ ಪಾವತಿ ವ್ಯವಸ್ಥೆಯನ್ನೂ ನೀಡಲಾಗಿದೆ.

ಯುಪಿಐ ಲೈಟ್ ಎಕ್ಸ್: ಆಫ್‌ಲೈನ್ ಪಾವತಿಗೆ ಇದನ್ನು ಜಾರಿಗೊಳಿಸಲಾಗಿದೆ. ಇಂಟರ್‌ನೆಟ್ ಸಂಪರ್ಕ ಇಲ್ಲದೆಯೇ ಹಣ ರವಾನೆ ಮತ್ತು ಸ್ವೀಕಾರ ಸಾಧ್ಯ. ನಿಯರ್ ಫೀಲ್ಡ್ ಕಮ್ಯುನಿಕೇಷನ್ (ಎನ್‌ಎಫ್‌ಎಸ್) ಬೆಂಬಲಿಸುವ ಎಲ್ಲ ಸಾಧನಗಳಲ್ಲಿಯೂ ಇದು ಕೆಲಸ ಮಾಡುತ್ತದೆ. ಕಡಿಮೆ ಸಮಯದಲ್ಲಿ ಹಣ ವರ್ಗಾವಣೆ ಆಗುತ್ತದೆ.

ಆಧಾರ: ಎನ್‌ಪಿಸಿಐ, ಪಿಟಿಐ, ವೈರ್ಲ್ಡ್‌ಲೈನ್

ಸಹಜ ಹಾಸ್ಯದ ಕಚಗುಳಿ

ರಾಜಯೋಗ ಚಿತ್ರದ ದೃಶ್ಯ

ನಾವು ನೋಡಿದ ಸಿನಿಮಾ

ರಾಜಯೋಗ

- ನಿರ್ದೇಶನ: ಲಿಂಗರಾಜ ಉಚ್ಚಂಗಿದುರ್ಗ
- ನಿರ್ಮಾಣ: ಶ್ರೀರಾಮರತ್ನ ಪ್ರೊಡಕ್ಷನ್ಸ್
- ತಾರಾಗಣ: ಧರ್ಮಣ್ಣ ಕಡೂರು, ನಿರೀಕ್ಷಾ ರಾವ್, ನಾಗೇಂದ್ರ ಶಾ ಮತ್ತಿತರರು

ಕೆಲವು ಸಿನಿಮಾಗಳು ಸದ್ದು ಗದ್ದವಿಲ್ಲದೆ ತೆರೆಗೆ ಬಂದು ಅನಿರೀಕ್ಷಿತವಾಗಿ ಅಚ್ಚರಿ ಮೂಡಿಸುತ್ತವೆ. ಅಂತಹ ಸಿನಿಮಾಗಳ ಸಾಲಿಗೆ 'ರಾಜಯೋಗ'ವನ್ನೂ ಸೇರಿಸಬಹುದು. ಸಾಕಷ್ಟು ಇತಿಮಿತಿಗಳ ನಡುವೆ ನಗುವನ್ನೇ ಪ್ರಧಾನವಾಗಿಸಿಕೊಂಡು, ಸಣ್ಣ ತಿರುವುಗಳೊಂದಿಗೆ ಕೊನೆಗೊಂದು ಸಂದೇಶ ನೀಡುವ ಅಚ್ಚುಕಟ್ಟಾದ ಚಿತ್ರವಿದು. ನಾಯಕ ಧರ್ಮಣ್ಣ ಕಡೂರು, ನಾಗೇಂದ್ರ ಶಾ ಅಭಿನಯ, ಹಾಸ್ಯದ ಸನ್ನಿವೇಶಗಳೇ ಚಿತ್ರದ ಜೀವಾಳ.

ನಾಯಕ 'ಪ್ರಾಣೇಶ್' ಮೂಲಾ ನಕ್ಷತ್ರದಲ್ಲಿ ಹುಟ್ಟಿದವನೆಂಬ ಕಾರಣಕ್ಕೆ ತಂದೆಯಿಂದ ಹಿಡಿದು ಊರಿನ ಎಲ್ಲರೆದುರು ಅವಮಾನಕ್ಕೆ ಒಳಗಾಗುತ್ತಾನೆ. ವಿಪರೀತ ಓದಿಕೊಂಡಿರುವ ಈತ ಆಗಾಗ ಸಾಧಕರ ಮಾತುಗಳನ್ನು ನೆನಪಿಸಿಕೊಳ್ಳುತ್ತ, ಕೈಯಲ್ಲಿರುವ ಪುಸ್ತಕದಿಂದ ಒಂದಷ್ಟು ಸಾಲುಗಳನ್ನು ಹೇಳುತ್ತ ತನಗಾದ ಅವಮಾನವನ್ನು ನುಂಗಿಕೊಳ್ಳುತ್ತಾನೆ. ಯಾರೆಷ್ಟೇ ಉಗಿದರೂ ಒರೆಸಿಕೊಂಡು ಹೋಗುವ ಜಾಯಮಾನ ತನ್ನದು ಎಂಬಂತೆ ಬದುಕುತ್ತಿರುವ ಈತನಿಗೆ ಕೆಎಎಸ್ ಪರೀಕ್ಷೆ ಬರೆದು ಅದೇ ಊರಿಗೆ ತಹಶೀಲ್ದಾರನಾಗಿ ಬರಬೇಕೆಂಬ ಕನಸು. ಆತನ ಕನಸು ಈಡೇರುತ್ತದೆಯೋ ಇಲ್ಲವೋ ಎಂಬುದೇ ಚಿತ್ರದ ಒಟ್ಟಾರೆ ಕಥೆ.

ಹಳ್ಳಿಯಲ್ಲಿ ನಡೆಯುವ ಕಥೆಗೆ ಸೂಕ್ತವಾದ ಪಾತ್ರಗಳನ್ನು ಕಟ್ಟಿಕೊಡುವಲ್ಲಿ ನಿರ್ದೇಶಕರು ಯಶಸ್ವಿಯಾಗಿದ್ದಾರೆ. ಕೆಲವಷ್ಟು ಹೊಸ ಬಗೆಯ ಹಾಸ್ಯದ ಸನ್ನಿವೇಶಗಳು ಮುದ ನೀಡುತ್ತವೆ. ಅವಕ್ಕೆ ಪೂರಕವಾದ ಸಂಭಾಷಣೆ ಇದೆ. ಸನ್ನಿವೇಶಕ್ಕೆ ತಕ್ಕಂತೆ ಆ ಮಾತುಗಳನ್ನು ದಾಟಿಸುವ ಧರ್ಮಣ್ಣ ಹಾಗೂ ನಾಯಕನ ತಂದೆಯ ಪಾತ್ರಧಾರಿ ನಾಗೇಂದ್ರ ಶಾ ತಮ್ಮ ಅಭಿನಯದಿಂದಲೇ ಸಿನಿಮಾವನ್ನು ಜೀವಂತವಾಗಿಸಿರುತ್ತಾರೆ. ನಾಯಕಿ ನಿರೀಕ್ಷಾ ಅಭಿನಯ ಕೂಡ ಸಹಜವಾಗಿದೆ. ಬಹುತೇಕ ಎಲ್ಲ ಪ್ರಮುಖ ನಟರು ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ.

ಸನ್ನಿವೇಶಗಳಲ್ಲಿ ಸಹಜವಾಗಿಯೇ ಹಾಸ್ಯ ಬೆರೆತಿದೆ. ದ್ವಂದ್ವಾರ್ಥದ ಹಾಸ್ಯಗಳಿಲ್ಲ. ಆದಾಗ್ಯೂ ಕೆಲವೆಡೆ ಇರುವ ಹಳ್ಳಿಗಾಡಿನ ಒರಟು ಭಾಷೆಯನ್ನು ಒಂಚೂರು ಮೃದುವಾಗಿಸಬಹುದಿತ್ತು. ಇಡೀ ಚಿತ್ರಕ್ಕೆ ಅವಧಿಯೇ ಭಾರ. ಸಂಕಲನವನ್ನು ಇನ್ನಷ್ಟು ಮೊನಚಾಗಿಸಿ, ಹೇಳಿದ್ದನ್ನೇ ಮತ್ತೆ ಮತ್ತೆ ಹೇಳುವ ಕೆಲವಷ್ಟು ದೃಶ್ಯಗಳನ್ನು ಕತ್ತರಿಸಿ, ಒಟ್ಟಾರೆ ಅವಧಿಯನ್ನು ಇನ್ನೂ ಅರ್ಧಗಂಟೆಯಷ್ಟು ಇಳಿಸುವ ಎಲ್ಲ ಅವಕಾಶ ನಿರ್ದೇಶಕರಿಗಿತ್ತು. ಕಥೆಗೆ ಅವಶ್ಯವಿಲ್ಲದ, ನೆನಪಿನಲ್ಲಿಯೂ ಉಳಿಯದ ಮೂರು ಹಾಡುಗಳನ್ನು ಕತ್ತರಿಸಿದ್ದರೆ ಚಿತ್ರ ಇನ್ನಷ್ಟು ಹಿತವೆನಿಸುತ್ತಿತ್ತು.

ವಿನಾಯಕ ಕೆ.ಎಸ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ಹೊಂದಾಣಿಕೆಯೇ ಹರುಷದ ಹಾದಿ

ನುಡಿ ಬೆಳಗು



ಎಚ್.ಎಸ್.ನವೀನಕುಮಾರ್ ಹೊಸದುರ್ಗ

ಒಮ್ಮೆ ಮುಲ್ಲಾ ನಸ್ರುದ್ದೀನ್ ಬಳಿ ವ್ಯಕ್ತಿ ಒಬ್ಬ ಒಂದು ಸಮಸ್ಯೆಯನ್ನು ತಂದ. 'ನನ್ನ ಮನೆ ಬಹಳ ಚಿಕ್ಕದಿದೆ. ಇದರಲ್ಲಿ ನಾನು ನನ್ನ ಹೆಂಡತಿ ನಾಲ್ಕು ಮಕ್ಕಳು ನನ್ನ ತಂದೆ ತಾಯಿ ಅತ್ತೆ ಮಾವ ಎಲ್ಲ ವಾಸಿಸಬೇಕಾಗಿದೆ. ಅದರಲ್ಲಿ ಹೊಂದಿಕೊಂಡು ಹೋಗುವುದು ಬಹಳ ಕಷ್ಟವಾಗುತ್ತಿದೆ ಏನು ಮಾಡಲಿ?' ಎಂಬುದು ಆ ವ್ಯಕ್ತಿಯ ಸಮಸ್ಯೆ ಆಗಿತ್ತು. ಆಗ ನಸ್ರುದ್ದೀನ್ 'ನಿನ್ನ ಮನೆಯಲ್ಲಿ ಒಂಟೆ ಇದೆಯೇ' ಎಂದು ಪ್ರಶ್ನಿಸಿದ. ಆಗ ಆ ವ್ಯಕ್ತಿ 'ಹೌದು ಸ್ವಾಮಿ ಇದೆ' ಎಂದ.

'ಹಾಗಾದರೆ ಅದನ್ನು ಮನೆಯೊಳಗೆ ಕಟ್ಟಿ ಹಾಕು' ಎಂದು ಸಲಹೆ ಕೊಟ್ಟ. ಆ ವ್ಯಕ್ತಿ ಆಶ್ಚರ್ಯ ಚಕಿತನಾಗಿ 'ಸ್ವಾಮಿ ನಾನು ಮನೆಯಲ್ಲಿ ತುಂಬಾ ಇಕ್ಕಟ್ಟಾಗಿದೆ ಎನ್ನುತ್ತಿದ್ದೇನೆ' ಎಂದು ಪುನರುಚ್ಚರಿಸಿದ. ಆಗ ಮುಲ್ಲಾ 'ನಿನ್ನ ಸಮಸ್ಯೆಗೆ ಪರಿಹಾರ ಬೇಕು ತಾನೆ? ಸುಮ್ಮನೆ ನಾನು ಹೇಳಿದಂತೆ ಕೇಳು' ಎಂದ.

ಮರುದಿನ ಆ ವ್ಯಕ್ತಿ ಓಡೋಡಿ ಬಂದು 'ಸ್ವಾಮಿ ಸಮಸ್ಯೆ ಇನ್ನಷ್ಟು ಬಿಗಡಾಯಿಸಿದೆ' ಎಂದು ಅಳಲು ತೋಡಿಕೊಂಡ. ನಸ್ರುದ್ದೀನ್ ಶಾಂತಚಿತ್ತದಿಂದ 'ನಿನ್ನ ಮನೆಯಲ್ಲಿ ಕುರಿ ಸಾಕಿದ್ದೀಯೋ' ಎಂದು ಪ್ರಶ್ನಿಸಿದ. 'ಹೌದು ಸ್ವಾಮಿ.. ನಾಲ್ಕು ಕುರಿ ಇವೆ' ಎಂಬ ಆ ವ್ಯಕ್ತಿಯ ಉತ್ತರಕ್ಕೆ 'ಹಾಗಾದರೆ ಅವನ್ನೂ ಮನೆ ಒಳಕ್ಕೆ ಬಿಟ್ಟುಕೋ' ಎಂದು ಸಲಹೆ ಕೊಟ್ಟ ನಸ್ರುದ್ದೀನ್. ಸಲಹೆ ಕೇಳಲು ಬಂದಿದ್ದ ವ್ಯಕ್ತಿಗೆ ಮತ್ತಷ್ಟು ತಲೆಬಿಸಿ ಆಯಿತು. ಆದರೆ 'ನಾನು ಹೇಳಿದಷ್ಟು ಕೇಳು' ಎಂದು ಬೈದು ಕಳಿಸಿದ ಮುಲ್ಲಾ.

ಹೀಗೆಯೇ ಮುಲ್ಲಾನ ಸಲಹೆಯಂತೆ ಮನೆಯ ಹೊರಗಿದ್ದ ಕೋಳಿ, ಕತ್ತೆ, ಹಸು ಎಲ್ಲವೂ ವ್ಯಕ್ತಿಯ ಮನೆ ಒಳಗೆ ಸೇರಿಕೊಂಡವು.

ಆ ವ್ಯಕ್ತಿ ಈಗ ಹುಚ್ಚನಾಗಿದ್ದ. ಓಡೋಡಿ ಬಂದು 'ಸ್ವಾಮಿ ನಾನು ಸಮಸ್ಯೆಗೆ ಪರಿಹಾರ ಕೇಳಿದರೆ ನೀವು ಅದನ್ನು ಹೆಚ್ಚು ಮಾಡುತ್ತಿದ್ದೀರಿ. ಏನಾದರೂ ಮಾಡಿ ನನ್ನನ್ನು ಪಾರು ಮಾಡಿ' ಎಂದು ಅಳುತ್ತಾ ಬೇಡಿಕೊಂಡ. ಆಗ ನಸ್ರುದ್ದೀನ್ ನಸುನಗುತ್ತ 'ಈಗ ನೀನು ಒಳಗೆ ಬಿಟ್ಟುಕೊಂಡ ಪ್ರಾಣಿ ಪಕ್ಷಿಗಳನ್ನೆಲ್ಲ ಮತ್ತೆ ಮನೆಯಿಂದ ಹೊರಗೆ ಕಳಿಸು. ಆಮೇಲೆ ನನ್ನನ್ನು ಬಂದು ಭೇಟಿಯಾಗು' ಎಂದ.

ಮರುದಿನ ತುಂಬಾ ಖುಷಿಯಾಗಿ ಬಂದ ವ್ಯಕ್ತಿ 'ಸ್ವಾಮೀ, ತಮ್ಮ ಸಲಹೆ ಎಷ್ಟು ಅದ್ಭುತವಾಗಿದೆ! ನೀವು ಹೇಳಿದಂತೆ ಒಳಗೆ ತಂದು ಕಟ್ಟಿ ಹಾಕಿದ್ದ ಪ್ರಾಣಿ-ಪಕ್ಷಿಗಳನ್ನೆಲ್ಲ ಮನೆಯಿಂದ ಹೊರಗೆ ಬಿಟ್ಟೆ. ಈಗ ನನ್ನ ಮನೆ ಬಹಳ ವಿಶಾಲವೆನಿಸುತ್ತಿದೆ. ಅದರಲ್ಲಿ ನಾನು ನನ್ನ ಹೆಂಡತಿ ನಾಲ್ಕು ಜನ ಮಕ್ಕಳು ಅಪ್ಪ ಅಮ್ಮ ಅತ್ತೆ ಮಾವ ಎಲ್ಲ ಆರಾಮಾಗಿದ್ದೇವೆ' ಎಂದು ನುಡಿದ.

ಹೊಂದಾಣಿಕೆ ಎಂಬುದು ಮನಸ್ಸಿನ ಒಂದು ಸುಂದರ ಸ್ಥಿತಿ. ಇರುವ ಸಮಸ್ಯೆಗೆ ಮನಸ್ಸನ್ನು ಹೊಂದಿಸಿಕೊಂಡು ಬಿಟ್ಟರೆ ಸಮಸ್ಯೆ, ಸಮಸ್ಯೆಯಂತೆ ಗೋಚರಿಸುವುದೇ ಇಲ್ಲ. ನೆಮ್ಮದಿ ಎಂಬುದು ಮನೆಯ ವಿಸ್ತಾರಕ್ಕಿಂತ ಹೆಚ್ಚಾಗಿ ಮನಸ್ಸಿನ ವಿಸ್ತಾರದಲ್ಲಿರುತ್ತದೆ. ಎಷ್ಟೋ ಬಾರಿ ಕುಟುಂಬದ ಪ್ರತಿಯೊಬ್ಬರಿಗೂ ವಿಶಾಲವಾದ ಕೋಣೆ ಹೊಂದಿರುವ ಮಂದಿಗಿಂತ, ಮಳೆ ಗಾಳಿ ಚಳಿಗಳನ್ನು ಲೆಕ್ಕಿಸದೆ ಬಯಲಿನಲ್ಲೇ ಪುಟಾಣಿ ಬಿಡಾರ ಹೂಡಿರುವ ಅಲೆಮಾರಿಗಳು, ತಮ್ಮ ದೊಡ್ಡ ಸಂಸಾರದೊಂದಿಗೆ ಸಂತೋಷದಿಂದ ಇರುತ್ತಾರೆ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಸೋಮವಾರ ನವೆಂಬರ್ 20, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಅಷ್ಟಮಿ ಗಂ.27-17 ನಕ್ಷತ್ರ: ಧನಿಷ್ಠ ಗಂ.21-26 ಯೋಗ: ಧ್ರುವ ಗಂ 20-35 ಕರಣ: ವಿಷ್ಟಿ ಗಂ. 16-20, ವೃಶ್ಚಿಕ ಮಾಸದ 04 ನೇ ದಿನ, ಮಳೆನಕ್ಷತ್ರ: ಅನುರಾಧ 1.
ರಾಹುಕಾಲ : ಬೆಳಿಗ್ಗೆ 07-30 - 09-00
ಸೂರ್ಯೋದಯ : 06-36 ಸೂರ್ಯಾಸ್ತ : 05-57
ಮುಸ್ಲಿಂ ದಿನಾಂಕ : 05 ಜುಮಾದುಲ್ಲಾವಲ್, ದಿನ ವಿಶೇಷ : ಗೋಪಾಷ್ಟಮಿ
ಅದೃಷ್ಟ ಸಂಖ್ಯೆ : 8, 4

ಮೇಷ: ಉದ್ಯೋಗದಲ್ಲಿ ನಷ್ಟದಂಥ ಸಮಸ್ಯೆ ಎದುರಾದರೆ, ಧೃತಿಗೆಡುವ ಅಗತ್ಯವಿಲ್ಲ. ತಂದೆಯಿಂದ ನಿಮ್ಮ ವೃತ್ತಿಗೆ ಸಹಾಯ ದೊರಕುತ್ತದೆ. ಸಂತಾನ ಅಪೇಕ್ಷಿಗಳಿಗೆ ಶುಭ ಸುದ್ದಿ. ಟಿ.ವಿ ಕಲಾವಿದರಿಗೆ ಉತ್ತಮ ದಿನ.

ವೃಷಭ: ಈ ದಿನ ಕಚೇರಿ ಕೆಲಸಗಳಲ್ಲಿ ನಿರ್ದಿಷ್ಟವಾದ ಕಾರ್ಯಸೂಚಿ ಹಾಕಿಕೊಳ್ಳಿ ಮತ್ತು ಅಧಿಕ ಸಮಯ ನೀಡಿ. ಔಷಧಿಗಳ ಬಳಕೆಯಲ್ಲಿ ಜ್ಞಾನವಿರಲಿ ಮತ್ತು ನಿಮ್ಮ ಸ್ವಇಚ್ಛೆಯಂತೆ ಸೇವಿಸಬೇಡಿ. ಬೂದು ಬಣ್ಣವು ನಿಮಗೆ ಶುಭತರಲಿದೆ.

ಮಿಥುನ: ವೃತ್ತಿ ಬದುಕಿನಲ್ಲಿ ನಿಮ್ಮ ಜವಾಬ್ದಾರಿ ಕಡಿಮೆಯಾದ ಕಾರಣ ನಿಂದನೆಗೆ ಒಳಗಾಗುವ ಸಾಧ್ಯತೆ. ಕೆಲವು ಆಕಸ್ಮಿಕ ಪ್ರಯಾಣ ಮಾಡಬೇಕಾಗಬಹುದು. ಅಕ್ಕಿ ವ್ಯಾಪಾರಿಗಳಿಗೆ ಅಧಿಕ ಲಾಭ ಇರುವುದು.

ಕರ್ಕಾಟಕ: ಕೋರ್ಟು ಕಚೇರಿಯ ಕಾರ್ಯಗಳು ಯಾವುದೇ ರೀತಿಯ ಪರದಾಟವಿಲ್ಲದೆ ನಿಮ್ಮ ಅನುಕೂಲಕ್ಕೆ ತಕ್ಕಂತೆ ನಡೆಯುತ್ತದೆ. ಕಿಂಚಿತ್ ಕಾರ್ಯಸಿದ್ಧಿಯಿಂದಲೂ ನೆಮ್ಮದಿ. ತಂದೆ ಮಕ್ಕಳ ಸಂಬಂಧ ಗಾಢವಾಗಿರುವುದು.

ಸಿಂಹ: ವಿದ್ಯಾರ್ಥಿಗಳಿಗೆ ಪಠ್ಯದ ಚಟುವಟಿಕೆಗಿಂತ ಪಠ್ಯೇತರ ಚಟುವಟಿಕೆಯಲ್ಲಿ ಆಸಕ್ತಿ ಮೂಡಲಿದೆ. ನಿಮ್ಮ ಯಶಸ್ಸಿನ ಮೆಟ್ಟಿಲಿಗೆ ಶತ್ರು ಬಾಧೆ ಉಂಟಾಗಲಿದ್ದು ಇದರಿಂದಾಗಿ ಮಾನಸಿಕವಾಗಿ ಅಸಮತೋಲನದ ಅನುಭವ ಆಗುವುದು.

ಕನ್ಯಾ: ಮಕ್ಕಳಲ್ಲಿ ಹೊಂದಾಣಿಕೆ ತೋರಿ ಬಂದು, ಮನೆಯಲ್ಲಿ ನೆಮ್ಮದಿಯ ವಾತಾವರಣ ಕಂಡುಬರುವುದು. ಅಭಿವೃದ್ಧಿದಾಯಕವಾದ ಚಟುವಟಿಕೆಯನ್ನು ರೂಢಿಸಿಕೊಳ್ಳಿರಿ. ಸಾಲಗಾರರ ಕಿರುಕುಳ ಅಧಿಕವಾಗುವ ಲಕ್ಷಣಗಳಿವೆ.

ತುಲಾ: ಪರರಿಗೆ ಉಪಕಾರ ಮಾಡುವುದು ಕಷ್ಟವೆನಿಸಿದರೆ ಸುಮ್ಮನಿರಿ, ಉಪದ್ರವ ಮಾಡಬೇಡಿ. ಚಲನಚಿತ್ರ ನಿರ್ಮಾಪಕರಿಗೆ ನಿರೀಕ್ಷೆಗೂ ಮೀರಿದ ಲಾಭ ಇರಲಿದೆ. ಧೈರ್ಯದಿಂದ ದೊಡ್ಡ ಯೋಜನೆ ಕೈಗೊಳ್ಳಬಹುದು.

ವೃಶ್ಚಿಕ: ಕೆಲಸಗಾರರಲ್ಲಿ ಸಮಾಧಾನವಿರಲಿ, ಇಲ್ಲವಾದರೆ ಮಾನಹಾನಿಯಾಗಬಹುದು. ಕಟ್ಟಡ ನಿರ್ಮಾಣ ಕಾರ್ಯ ಪೂರ್ಣವಾಗಲಿದೆ. ವಿದೇಶದಲ್ಲಿನ ಹುದ್ದೆಗೆ ಅರ್ಜಿ ಸಲ್ಲಿಸಬಹುದು. ವಾಹನ ಚಾಲನೆಯಲ್ಲಿ ಎಚ್ಚರವಿರಲಿ.

ಧನು: ವ್ಯಾಪಾರ ಕ್ಷೇತ್ರದಲ್ಲಿರುವವರಿಗೆ ಹೊಸ ಯೋಜನೆಯತ್ತ ಮುನ್ನುಗುವ ಆಲೋಚನೆ ಬರಲಿದೆ. ಇದರಿಂದ ನಿಮ್ಮ ಗುರಿ ತಲುಪಲು ನೆರವಾಗುವುದು. ನೀರಿನ ಬದಲಾವಣೆ ಅನಾರೋಗ್ಯಕ್ಕೆ ಕಾರಣವಾಗುವುದು.

ಮಕರ: ಕೌಟುಂಬಿಕ ವಿಚಾರ ವಿನಿಮಯದ ಸಂದರ್ಭದಲ್ಲಿ ಅನ್ಯ ವ್ಯಕ್ತಿ ಪ್ರವೇಶವಾಗದಂತೆ ಜಾಗ್ರತೆವಹಿಸಿ. ಧನಾರ್ಜನೆಗೆ ಕೊರತೆ ಕಾಣುವುದಿಲ್ಲ. ಅನಿವಾರ್ಯ ಕಾರಣದಿಂದ ಭೋಜನದ ಸಮಯ ವ್ಯತ್ಯಾಸವಾಗುವುದು.

ಕುಂಭ: ಷೇರು ಪೇಟೆ ವ್ಯವಹಾರದಲ್ಲಿರುವವರು ಹೆಚ್ಚಿನ ಹೂಡಿಕೆಯನ್ನು ಮಾಡದಿರಿ. ಆಲಸ್ಯದಿಂದಾಗಿ ವಿದ್ಯಾಭ್ಯಾಸದಲ್ಲಿ, ಕಲಿಕೆಯಲ್ಲಿ ಹಿನ್ನಡೆ. ಭೂಮಿಯ ಖರೀದಿಯ ಚಿಂತನೆಗೆ ಧನ ಸಂಗ್ರಹವಾಗುವುದು.

ಮೀನ: ತಾಂತ್ರಿಕ ವೃತ್ತಿಯವರಿಗೆ ಕಾರ್ಯರಂಗದಲ್ಲಿ ಮತ್ತು ಕಾರ್ಯಸ್ಥಳದಲ್ಲಿ ಹಿತವಾಗುವ ಘಟನೆ ನಡೆಯಲಿದೆ. ರಾಜಕೀಯ ರಂಗ ಪ್ರವೇಶಕ್ಕೆ ಅನುಕೂಲವಾಗಲಿದೆ. ಕೆಲಸದಲ್ಲಿ ನವೀನ ಹುರುಪು ಇರುವುದು.

ಪದಬಂಧ 5505

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪದ ಹೇಳಿ ಬಹುಮಾನವಾಗಿ ಪಡೆದ ಬಿಲ್ಲೆ (3)
3.ವನದಲ್ಲಿ ಕಾಣಿಸಿದ ಮುಖ (3)
5.ನೆತ್ತರು ಪ್ರವಹಿಸುವಿಕೆ (5)
6.ಹಣ ಇಲ್ಲಿದೆ (2)
8.ನಾವಿಕನಿಗೆ ಪ್ರಾಪ್ತಿಯಾದ ಸ್ವರ್ಗ (2)
9.ಮಾವನ ಮರ್ಯಾದೆ (2)
10.ಕಲಾವಿದ ತೋರಿದ ಬಾಗಿಲು (2)
14.ಕೈಗೂಡದ ಆಸೆಯನ್ನು ಹೀಗೆನ್ನಿ (5)
15.ಪತಿವ್ರತೆ ಇಲ್ಲಿದ್ದಾಳೆ (3)
16.ಆಸೆಗೊಂದು ಪರ್ಯಾಯ ಪದ (3)

ಮೇಲಿಂದ ಕೆಳಕ್ಕೆ
1.ಪರರ ಅಧೀನದಲ್ಲಿರುವಿಕೆ (4)
2.ಪರಿಷ್ಕೃತವಾಗದಿರುವ ಪ್ರತಿ (3)
3.ವ್ಯಾಯಾಮಗಳಲ್ಲಿನ ಪಟ್ಟು (3)
4.ಬೆಂಬಿಡದೆ ಕಾಡುವವನನ್ನು ಹೀಗೆನ್ನುವರು (4)
7.ವನದಲ್ಲಿರುವ ಉಡುಗೆ (3)
8.ಈತ ನಾವೆಯನ್ನು ನಡೆಸುವವ (3)
9.ಆನೆಯನ್ನು ನಡೆಸುವವನು (4)
11.ಬಲಾತ್ಕಾರದ ಆಡಳಿತವನ್ನು ಹೀಗೆನ್ನಿ (4)
12.ಸಂಗಡ ಇರುವವಳು (3)
13.ನಿಸ್ಸಾರವಾದುದು ಉಲ್ಟಾ ಆಗಿದೆ (3)



5504ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಜಯಶಾಲಿ 5.ನಮೂದು
6.ವಾತಾಯನ 8.ಗಡಿಯಾರ
12.ಪ್ರಕಟಿಸು 14.ಅನುವಾದ
15.ಬಾಲಕ 16.ವಿದ್ಯಮಾನ

ಮೇಲಿಂದ ಕೆಳಕ್ಕೆ:
1.ವನಪಾಲಕ 2.ಚದುರಂಗ
3.ಜನಿವಾರ 4.ನಕಲಿ
7.ಯತಿ 9.ಯಾಚಕ
10.ಆಶ್ಚರ್ಯಕರ 11.ಭಾನು
12.ಪ್ರದರ್ಶನ 13.ಸುಮಬಾಣ
14.ಅಡವಿ

ಸುಡೊಕು 5891

		6					5	
		7	5		6	3		2
3	8	5					6	
	2					9		4
			2	4	7			
	7					5		8
		9			8		4	
4		2					8	1
	6		4		2	7		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5890 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

‘ವರ್ಷದೊಳಗೆ ದಕ್ಷಿಣದಲ್ಲಿ ಡಾಬರ್‌ನ ಹೊಸ ಕಾರ್ಖಾನೆ’

ನವದೆಹಲಿ (ಪಿಟಿಐ): ಪ್ರಮುಖ ಎಫ್‌ಎಂಸಿಜಿ ಮತ್ತು ಆಯುರ್ವೇದಿಕ್ ಉತ್ಪನ್ನಗಳ ತಯಾರಕ ಡಾಬರ್, ವರ್ಷದೊಳಗೆ ದಕ್ಷಿಣ ಭಾರತದಲ್ಲಿ ತನ್ನ ಹೊಸ ಉತ್ಪಾದನಾ ಘಟಕ ಸ್ಥಾಪನೆ ಮಾಡಲು ಯೋಜಿಸಿದೆ ಎಂದು ಕಂಪನಿಯ ಸಿಇಒ ಮೋಹಿತ್ ಮಲ್ಹೋತ್ರಾ ಹೇಳಿದ್ದಾರೆ.

ದೇಶೀಯ ಮಾರಾಟದ ಶೇ 20ರಷ್ಟು ಪಾಲನ್ನು ಕಂಪನಿಯು ದಕ್ಷಿಣದಲ್ಲಿ ಹೊಂದಿದೆ. ಕಳೆದ ಐದಾರು ವರ್ಷಗಳಲ್ಲಿ ಈ ಭಾಗದ ಮಾರಾಟವು ದುಪ್ಪಟ್ಟಾಗಿದೆ. ಕಂಪನಿಯು ದೇಶದಲ್ಲಿ ಈಗಾಗಲೇ 13 ತಯಾರಿಕಾ ಘಟಕಗಳನ್ನು ಹೊಂದಿದೆ. ಬೇಡಿಕೆ ಪೂರೈಸಲು ತನ್ನ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಮತ್ತೊಂದು ಘಟಕವನ್ನು ಸ್ಥಾಪಿಸುತ್ತಿದೆ ಎಂದು ಅವರು ಹೇಳಿದರು.

ಮಧ್ಯಪ್ರಾಚ್ಯ ಮತ್ತು ಯುರೋಪ್‌ನ ಬೇಡಿಕೆಗಳನ್ನು ಪೂರೈಸುವುದಕ್ಕಾಗಿ ತಯಾರಿಕೆಯನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ವಿಸ್ತರಿಸಲಾಗುವುದು. ಡಾಬರ್ ಕೊನೆಯದಾಗಿ ಇಂದೋರ್‌ನಲ್ಲಿ ತನ್ನ ಹೊಸ ಘಟಕವನ್ನು ತೆರೆಯಲು ₹350 ಕೋಟಿ ಹೂಡಿಕೆ ಮಾಡಿತ್ತು ಎಂದು ಕಂಪನಿ ತಿಳಿಸಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

25ನೇ ವರ್ಷದ ಪುಣ್ಯಸ್ಮರಣೆ

26.09.1927 — 20.11.1998
ಶ್ರೀಮತಿ ಬಿ.ಜಿ. ಶಾರದಮ್ಮ
ದಿ|| ಡಾ. ಎಂ. ಅಶ್ವತ್ಥನಾರಾಯಣ, ಮಾಜಿ ಡೀನ್ ಕಿದ್ವಾಯಿ ಮೆಮೋರಿಯಲ್ ಕ್ಯಾನ್ಸರ್ ಆಸ್ಪತ್ರೆ, ಬೆಂಗಳೂರು, ಇವರ ಧರ್ಮಪತ್ನಿ
ನಮ್ಮನಗಲಿದ ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುವ,
ಮಗ, ಸೊಸೆ, ಮೊಮ್ಮಕ್ಕಳು, ಅಳಿಯಂದಿರು, ಮರಿಮೊಮ್ಮಕ್ಕಳು ಹಾಗೂ ಬಂಧು-ವರ್ಗದವರು

ಸೈಬರ್ ಭದ್ರತೆ ಬಲಪಡಿಸಿ ಬ್ಯಾಂಕ್‌ಗಳಿಗೆ ಸರ್ಕಾರ ಸೂಚನೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ತಮ್ಮ ಡಿಜಿಟಲ್ ಕಾರ್ಯಾಚರಣೆಗೆ ಸಂಬಂಧಿಸಿದ ವ್ಯವಸ್ಥೆ ಮತ್ತು ಪ್ರಕ್ರಿಯೆಗಳನ್ನು ಪರಿಶೀಲಿಸುವಂತೆ ಹಣಕಾಸು ಸಚಿವಾಲಯವು ಸೂಚಿಸಿದೆ. ಯುಕೋ ಬ್ಯಾಂಕ್‌ನಲ್ಲಿ ಇತ್ತೀಚೆಗೆ ನಡೆದ ಘಟನೆಯಿಂದಾಗಿ ಸಚಿವಾಲಯ ಈ ಸೂಚನೆ ನೀಡಿದೆ.

ಬ್ಯಾಂಕ್‌ಗಳು ತಮ್ಮ ಸೈಬರ್ ಸುರಕ್ಷತೆಯ ದೃಢತೆಯನ್ನು ಪರಿಶೀಲಿಸಲು ಮತ್ತು ಅವುಗಳನ್ನು ಬಲಪಡಿಸಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದೆ. ಬ್ಯಾಂಕ್‌ಗಳು ಹೆಚ್ಚು ಜಾಗರೂಕತೆಯನ್ನು ಇಟ್ಟುಕೊಳ್ಳಬೇಕು ಮತ್ತು ಭವಿಷ್ಯದಲ್ಲಿ ಸಂಭವಿಸಬಹುದಾದ ಸೈಬರ್ ಬೆದರಿಕೆ ಬಗ್ಗೆ ಮುನ್ನೆಚ್ಚರಿಕೆ ವಹಿಸುವಂತೆ ತಿಳಿಸಿದೆ ಎಂದು ಮೂಲಗಳು ತಿಳಿಸಿವೆ.

ಘಟನೆಯೇನು?: ಸಾರ್ವಜನಿಕ ವಲಯದ ಕೋಲ್ಕತ್ತದ ಯುಕೋ ಬ್ಯಾಂಕ್ ಕಳೆದ ವಾರ ₹820 ಕೋಟಿಯನ್ನು ಬ್ಯಾಂಕ್‌ನ ಖಾತೆದಾರರಿಗೆ ತಕ್ಷಣ ಪಾವತಿ ಸೇವೆ (ಐಎಂಪಿಎಸ್) ಮೂಲಕ ತಪ್ಪಾಗಿ ಹಾಕಿತ್ತು. ಈ ಹಣದ ಪೈಕಿ ₹649 ಕೋಟಿಯ ಪಾವತಿಗೆ ತಡೆ ಒಡ್ಡಲಾಗಿದೆ. ಉಳಿದ ಹಣ ಬರಬೇಕಿದೆ. ಇದು ಮಾನವ ದೋಷ ಅಥವಾ ಹ್ಯಾಕಿಂಗ್‌ನಿಂದ ಉಂಟಾಗಿದೆಯೇ ಎಂದು ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಇನ್ನೂ ಸ್ಪಷ್ಟಪಡಿಸಿಲ್ಲ. ಅಗತ್ಯ ಕ್ರಮಕ್ಕಾಗಿ ಬ್ಯಾಂಕ್ ಕಾನೂನು ಜಾರಿ ಸಂಸ್ಥೆಗಳಿಗೆ ವಿಷಯವನ್ನು ತಿಳಿಸಿದೆ.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹305-468
ದ್ವಿತಳಿ (ಬಿ.ವಿ)	₹272-577

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹595
12 ಮೊಟ್ಟೆಗೆ	₹80
ಮೈಸೂರು	
100 ಮೊಟ್ಟೆಗೆ	₹595

ಕಾರು ಖರೀದಿಗೆ ನೆರವಾಗುವ 20/4/10 ಸೂತ್ರ!

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಮನೆ ಖರೀದಿ ಹೊರತುಪಡಿಸಿದರೆ ಕುಟುಂಬವೊಂದರಲ್ಲಿ ಮಾಡುವ ಅತ್ತಿ ದೊಡ್ಡ ವೆಚ್ಚ ಕಾರು ಖರೀದಿ. ಕಾರು ತೆಗೆದುಕೊಳ್ಳುವಾಗ ಖರೀದಿ ಸಾಮರ್ಥ್ಯ ಎಷ್ಟಿದೆ ಎನ್ನುವುದರ ಲೆಕ್ಕಾಚಾರ ಮಾಡದೆ ಅನೇಕರು ಅತಿಯಾದ ಸಾಲ ಮಾಡಿಕೊಂಡು ಸಂಕಷ್ಟಕ್ಕೆ ಸಿಲುಕುತ್ತಾರೆ. ಇದನ್ನು ತಪ್ಪಿಸಲು ಸರಳ ನಿಯಮವೊಂದಿದೆ. ಅದೇ 20/4/10 ಸೂತ್ರ.

ಏನಿದು ಸೂತ್ರ: ಕಾರು ಖರೀದಿಸುವ ಮುನ್ನ ಪ್ರತಿಯೊಬ್ಬರೂ ಅಳವಡಿಸಿಕೊಳ್ಳಲೇಬೇಕಾದ ಒಂದು ಸರಳ ಸೂತ್ರವಿದೆ. ಅದೇ 20/4/10 ನಿಯಮ. ಈ ಲೆಕ್ಕಾಚಾರವನ್ನು ಅಳವಡಿಸಿಕೊಂಡರೆ ನಿಮ್ಮ ಆರ್ಥಿಕ ಸ್ಥಿತಿಗೆ ಅನುಗುಣವಾಗಿ ಎಷ್ಟು ಮೌಲ್ಯದ ಕಾರು ಖರೀದಿಸಬೇಕು, ಕಾರು ಕೊಳ್ಳಲು ಎಷ್ಟು ಡೌನ್ ಪೇಮೆಂಟ್ ಮಾಡಬೇಕು, ಕಾರು ಸಾಲದ ಮಾಸಿಕ ಕಂತು ಎಷ್ಟಿರಬೇಕು ಮತ್ತು ಕಾರಿನ ವಾರ್ಷಿಕ ನಿರ್ವಹಣಾ ಮೊತ್ತ ಎಷ್ಟಿರಬೇಕು ಎಂಬ ಮಾಹಿತಿ ತಿಳಿಯುತ್ತದೆ. ಈ ನಿಯಮದಲ್ಲಿ 20 ಅಂದರೆ ಕಾರಿನ ಒಟ್ಟು ಮೌಲ್ಯದಲ್ಲಿ ಶೇ 20 ರಷ್ಟು ಡೌನ್ ಪೇಮೆಂಟ್ ಮಾಡಬೇಕು ಅಂತ. ಕಾರು ಖರೀದಿಗೆ ಕೊಳ್ಳುವ ಸಾಲ ಅವಧಿ 4 ವರ್ಷಗಳನ್ನು ಮೀರಬಾರದು ಎನ್ನುವುದನ್ನು 4 ಸೂಚಿಸುತ್ತದೆ. ಹಾಗೆಯೇ 10 ಎಂಬುದು ಕಾರಿನ ನಿರ್ವಹಣಾ ವೆಚ್ಚವು ವ್ಯಕ್ತಿಯ ವಾರ್ಷಿಕ ಆದಾಯದ ಶೇ 10 ರಷ್ಟನ್ನು ಮೀರಬಾರದು ಎಂದು ಹೇಳುತ್ತದೆ. ವಾರ್ಷಿಕ ವೆಚ್ಚದಲ್ಲಿ ಕಾರು ಸಾಲದ ಮಾಸಿಕ ಕಂತು, ಪೆಟ್ರೋಲ್ ವೆಚ್ಚ, ಇನ್ಶುರೆನ್ಸ್, ಸರ್ವೀಸ್ ಎಲ್ಲವೂ ಸೇರಿರುತ್ತದೆ. ಈ ಸೂತ್ರ ಅಳವಡಿಸಿಕೊಂಡು ಕಾರು ಖರೀದಿಸಿದರೆ ನಿಮ್ಮ ಹಣಕಾಸಿನ ನಿರ್ವಹಣೆ ಹಳಿ ತಪ್ಪುವುದಿಲ್ಲ.

ಪ್ರಾಯೋಗಿಕ ವಿವರಣೆ 1: ಉದಾಹರಣೆಗೆ ನಿಮ್ಮ ವಾರ್ಷಿಕ ಆದಾಯ ₹ 15 ಲಕ್ಷವಾಗಿದ್ದು ₹ 6 ಲಕ್ಷ ಮೌಲ್ಯದ ಕಾರು ಖರೀದಿಸಲು ಮುಂದಾಗಿದ್ದೀರಿ ಎಂದು ಭಾವಿಸಿ. ಆಗ ಈ ಸೂತ್ರದಂತೆ ₹ 1.5 ಲಕ್ಷವನ್ನು ನೀವು ಡೌನ್ ಪೇಮೆಂಟ್ ಆಗಿ ಮಾಡಬೇಕು. ಉಳಿದ ₹ 4.5 ಲಕ್ಷವನ್ನು ಶೇ 8 ರ ಬಡ್ಡಿ ದರದಲ್ಲಿ ಸಾಲವಾಗಿ ಪಡೆದರೆ ಮಾಸಿಕ ₹ 10,986 ಇಎಂಐ ಬರುತ್ತದೆ. ಈ ಲೆಕ್ಕಾಚಾರ ಸೂತ್ರಕ್ಕೆ ಅನುಗುಣವಾಗೇ ಇದೆ.

ಪ್ರಾಯೋಗಿಕ ವಿವರಣೆ 2: ಉದಾಹರಣೆಗೆ ನಿಮ್ಮ ವಾರ್ಷಿಕ ಆದಾಯ ₹12 ಲಕ್ಷವಾಗಿದ್ದು ₹ 6 ಲಕ್ಷ ಮೌಲ್ಯದ ಕಾರು ಖರೀದಿಸಲು ಮುಂದಾಗಿದ್ದೀರಿ ಎಂದು ಭಾವಿಸಿ. ಆಗ 20/4/10 ಸೂತ್ರದಂತೆ ₹1.2 ಲಕ್ಷವನ್ನು ನೀವು ಡೌನ್ ಪೇಮೆಂಟ್ ಆಗಿ ಮಾಡಬೇಕು. ಉಳಿದ ₹ 4.8 ಲಕ್ಷವನ್ನು ಶೇ 8 ರ ಬಡ್ಡಿ ದರದಲ್ಲಿ ಸಾಲವಾಗಿ ಪಡೆದರೆ ಮಾಸಿಕ ₹ 11,718 ಇಎಂಐ ಬರುತ್ತದೆ. ಈ ಲೆಕ್ಕಾಚಾರ ಈ ಸೂತ್ರಕ್ಕೆ ಅನುಗುಣವಾಗಿ ಇಲ್ಲ. ಇಲ್ಲಿ ಕಾರಿನ ನಿರ್ವಹಣಾ ವೆಚ್ಚ ಶೇ 10ರಷ್ಟನ್ನು ಮೀರುತ್ತದೆ. ಇಂತಹ ಸಂದರ್ಭದಲ್ಲಿ ಕಾರು ಖರೀದಿಸುವಾಗ ಡೌನ್ ಪೇಮೆಂಟ್ ಹೆಚ್ಚಳ ಮಾಡುವುದು ಇಲ್ಲವೇ ಸಂಪೂರ್ಣ ಪೇಮೆಂಟ್ ಮಾಡಿ ಕಾರು ಖರೀದಿಸಲು ಮುಂದಾಗುವುದು ಒಳಿತು. ಅದು ಸಾಧ್ಯವಾಗುವುದಿಲ್ಲ ಎಂದಾದಲ್ಲಿ 6 ಲಕ್ಷಕ್ಕಿಂತ ಕಡಿಮೆ ಬಜೆಟ್‌ನ ಕಾರು ಖರೀದಿಸಬಹುದು. ಮತ್ತೊಂದು ಆಯ್ಕೆ ಎಂದರೆ ಸೆಕೆಂಡ್ ಹ್ಯಾಂಡ್ ಕಾರಿನ ಮೊರೆ ಹೋಗುವುದು.

ಸತತ ಮೂರನೇ ವಾರ ಗಳಿಕೆ

ಷೇರುಪೇಟೆ ಸೂಚ್ಯಂಕಗಳು ಸತತ ಮೂರನೇ ವಾರವೂ ಗಳಿಕೆ ಕಂಡಿವೆ. ನವೆಂಬರ್ 17ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಗಳಿಕೆ ದಾಖಲಿಸಿವೆ. 65,794 ಅಂಶಗಳಲ್ಲಿ ವಹಿವಾಟು ಮುಗಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.37 ರಷ್ಟು ಗಳಿಸಿಕೊಂಡಿದೆ. 19,731 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ನಿಫ್ಟಿ ಶೇ 1.57 ರಷ್ಟು ಜಿಗಿದಿದೆ. ತೈಲ ಬೆಲೆ ಇಳಿಕೆ, ವಿವಿಧ ದೇಶಗಳ ಸೆಂಟ್ರಲ್ ಬ್ಯಾಂಕ್ ಗಳಿಂದ ಬಡ್ಡಿ ದರ ಹೆಚ್ಚಳಕ್ಕೆ ಅಲ್ಪ ವಿರಾಮ ಸೇರಿದಂತೆ ಹಲವು ಅಂಶಗಳು ಮಾರುಕಟ್ಟೆ ಮೇಲೆ ಪರಿಣಾಮ ಬೀರಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 5, ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 4.7, ಆಟೊ ಸೂಚ್ಯಂಕ ಶೇ 4 ಮತ್ತು ನಿಫ್ಟಿ ಮೆಟಲ್ ಸೂಚ್ಯಂಕ ಶೇ 3 ರಷ್ಟು ಗಳಿಸಿಕೊಂಡಿವೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 404.82 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿಯ ಸಾಂಸ್ಥಿಕ ಹೂಡಿಕೆದಾರರು ₹ 1,675.7 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ನೈಕಾ, ಐಷರ್ ಮೋಟರ್ಸ್, ಹೀರೊ ಮೋಟೊಕಾರ್ಪ್, ಐಸಿಐಸಿಐ ಲೋಂಬಾರ್ಡ್ ಜನರಲ್ ಇನ್ಶುರೆನ್ಸ್, ಕೋಲ್ ಇಂಡಿಯಾ, ಇನ್ಫೊ ಎಡ್ಜ್, ಟೆಕ್ ಮಹೀಂದ್ರ, ಐಸಿಐಸಿಐ ಪ್ರೂಡೆನ್ಶಿಯಲ್ ಲೈಫ್ ಇನ್ಶೂರೆನ್ಸ್ ಕಂಪನಿ ಮತ್ತು ಬಾಷ್ ಗಳಿಕೆ ಕಂಡಿವೆ. ಮಿಡ್ ಕ್ಯಾಪ್‌ನಲ್ಲಿ ಸೋಲಾರ್ ಇಂಡಸ್ಟ್ರೀಸ್ ಇಂಡಿಯಾ, ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿ, ಪವರ್ ಫೈನಾನ್ಸ್ ಕಾರ್ಪೊರೇಷನ್, ಭಾರತ್ ಹೆವಿ ಎಲೆಕ್ಟ್ರಿಕಲ್ಸ್, ಪಿಬಿ ಫಿನ್ ಟೆಕ್, ಟೊರೆಂಟ್ ಪವರ್, ಟಿವಿಎಸ್ ಮೋಟಾರ್ ಕಂಪನಿ ಮತ್ತು ಒಬೆರಾಯ್ ರಿಯಾಲಿಟಿ ಗಳಿಕೆ ಕಂಡಿವೆ. ಬಿಎಸ್‌ಇ ಸ್ಮಾಲ್ ಕ್ಯಾಪ್‌ನಲ್ಲಿ ವೆರಾಂಡಾ ಲರ್ನಿಂಗ್ ಸಲ್ಯೂಷನ್ಸ್, ಅಪೋಲೊ ಮೈಕ್ರೋ ಸಿಸ್ಟಮ್ಸ್, ಓರಿಯಂಟ್ ಗ್ರೀನ್ ಪವರ್, ಜಿಇ ಪವರ್ ಇಂಡಿಯಾ ಸೇರಿ ಕೆಲ ಕಂಪನಿಗಳು ಶೇ 20 ರಿಂದ ಶೇ 41 ರಷ್ಟು ಗಳಿಸಿಕೊಂಡಿವೆ.

ಮುನ್ನೋಟ: ನವೆಂಬರ್ 22 ರಂದು ಟಾಟಾ ಟೆಕ್ನಾಲಜೀಸ್ ಐಪಿಒ (ಆರಂಭಿಸ ಸಾರ್ವಜನಿಕ ಹೂಡಿಕೆ) ಬಿಡ್ಡಿಂಗ್ ಪ್ರಕ್ರಿಯೆ ಆರಂಭವಾಗಲಿದೆ. 20 ವರ್ಷಗಳ ಬಳಿಕ ಟಾಟಾ ಸಮೂಹದ ಕಂಪನಿಯೊಂದು ಐಪಿಒಗೆ ಮುಂದಾಗಿದೆ. ಉಳಿದಂತೆ ಈ ವಾರ ಅಶಿನಾ ಇಸ್ಪ್ಯಾಟ್ ಲಿ., ವಿಜೆಟಿಎಫ್ ಎಜು ಸರ್ವೀಸಸ್ ಲಿ., ಕ್ಲಿಯೊ ಇನ್ಫೊಟೆಕ್ ಲಿ., ಮಚಿನೋ ಪ್ಲಾಸ್ಟಿಕ್ಸ್ ಲಿ., ಯುನಿಸ್ಟಾರ್ ಮಲ್ಟಿಮಿಡಿಯಾ ಲಿ, ಬ್ರಹ್ಮಪುತ್ರ ಇನ್ಫ್ರಾಸ್ಟ್ರಕ್ಚರ್ ಲಿ, ಸೇರಿ ಕೆಲ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ.

ಕೊನೆಯ ಮಾತು: ಸರಳವಾಗಿ ಹೇಳುವುದಾದರೆ ಹಾಸಿಗೆ ಇದ್ದಷ್ಟು ಕಾಲು ಚಾಚು ಎನ್ನುವುದನ್ನು ಈ ಸೂತ್ರ ಪ್ರತಿಪಾದಿಸುತ್ತದೆ. ಸಾಲ ಸಿಗುತ್ತದೆ ಎನ್ನುವ ಕಾರಣಕ್ಕೆ ಅಳತೆ ಅಂದಾಜಿಲ್ಲದೆ ಬೃಹತ್ ಸಾಲ ಮಾಡಿ ದೊಡ್ಡ ದೊಡ್ಡ ಕಾರುಗಳನ್ನು ಖರೀದಿಸಿ ಇಎಂಐ ಕಟ್ಟಲು ಪರದಾಡಬಾರದು ಎನ್ನುವುದು ಈ ನಿಯಮದ ಉದ್ದೇಶ. ಇದನ್ನು ನಿಮ್ಮ ಅಗತ್ಯ ಅನುಕೂಲಕ್ಕೆ ತಕ್ಕಂತೆ ಲೆಕ್ಕಾಚಾರ ಮಾಡಿ ಮಾರ್ಪಾಡು ಮಾಡಿಕೊಳ್ಳಬಹುದು.

(ಲೇಖಕಿ ಚಾರ್ಟರ್ಡ್ ಅಕೌಂಟೆಂಟ್)

₹7,300 ಕೋಟಿ ಬಂಡವಾಳ ಸಂಗ್ರಹಿಸುವ ಉದ್ದೇಶ ಹೊಂದಿರುವ ಕಂಪನಿಗಳು

ಐದು ಕಂಪನಿಗಳ ಐಪಿಒ ಈ ವಾರ

ನವದೆಹಲಿ (ಪಿಟಿಐ): ಟಾಟಾ ಟೆಕ್ನಾಲಜೀಸ್, ಕೇಂದ್ರ ಸರ್ಕಾರದ ಮಾಲೀಕತ್ವದ ಐಆರ್‌ಇಡಿಎ ಸೇರಿದಂತೆ ಐದು ಕಂಪನಿಗಳ ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಈ ವಾರದಲ್ಲಿ ಇರಲಿದೆ. ಐದು ಕಂಪನಿಗಳು ಒಟ್ಟು ₹7,300 ಕೋಟಿ ಬಂಡವಾಳ ಸಂಗ್ರಹಿಸುವ ಉದ್ದೇಶ ಹೊಂದಿವೆ.

ಫೆಡ್‌ಬ್ಯಾಂಕ್ ಫೈನಾನ್ಶಿಯಲ್ ಸರ್ವಿಸಸ್, ಫ್ಲೇರ್ ರೈಟಿಂಗ್ ಇಂಡಸ್ಟ್ರೀಸ್ ಮತ್ತು ಗಾಂಧಾರ್ ಆಯಿಲ್ ರಿಫೈನರಿ ಇಂಡಿಯಾ ಐಪಿಒ ನಡೆಸಲಿರುವ ಇನ್ನುಳಿದ ಮೂರು ಕಂಪನಿಗಳು.

ಈಚೆಗೆ ಐಪಿಒ ಹಾದಿ ತುಳಿದ ಹಲವು ಕಂಪನಿಗಳ ಷೇರು ಮೌಲ್ಯವು, ಬಂಡವಾಳ ಮಾರುಕಟ್ಟೆಯಲ್ಲಿ ವಹಿವಾಟು ಆರಂಭಿಸಿದ ನಂತರದಲ್ಲಿ ಉತ್ತಮ ಬೆಳವಣಿಗೆ (ಸರಾಸರಿ ಶೇ 30ರಷ್ಟು) ಕಂಡಿದೆ. ಇದು ಕೂಡ ಕಂಪನಿಗಳು ಐಪಿಒ ಕಡೆ ಮುಖ ಮಾಡುತ್ತಿರುವುದಕ್ಕೆ ಒಂದು ಕಾರಣ ಎಂದು ಆನಂದ್ ರಾಠಿ ಸಂಸ್ಥೆಯ ಹಿರಿಯ ಅಧಿಕಾರಿ ವಿ. ಪ್ರಶಾಂತ್ ರಾವ್ ಹೇಳಿದ್ದಾರೆ.

‘ಹಲವು ಕಂಪನಿಗಳು ಐಪಿಒಗೆ ಅನುಮತಿ ಕೋರಿ ಕರಡು ದಾಖಲೆ ಪತ್ರಗಳನ್ನು ಸಲ್ಲಿಸಿವೆ. ಸೆಬಿ ಅನುಮತಿ ಪಡೆದಿರುವ ಕಂಪನಿಗಳು ಲೋಕಸಭಾ ಚುನಾವಣೆಗೂ ಮೊದಲು ಐಪಿಒ ನಡೆಸುವ ಉದ್ದೇಶ ಹೊಂದಿವೆ. ಹೀಗಾಗಿ, ಒಂದಾದ ನಂತರ ಒಂದು ಕಂಪನಿಯ ಐಪಿಒ ನಡೆಯುತ್ತಿದೆ’ ಎಂದು ಅವರು ಹೇಳಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದ ಮೊದಲ 6 ತಿಂಗಳಲ್ಲಿ 31 ಕಂಪನಿಗಳು ಐಪಿಒ ಮೂಲಕ ₹26,300 ಕೋಟಿ ಸಂಗ್ರಹಿಸಿವೆ. ಇದು ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 26ರಷ್ಟು ಕಡಿಮೆ. ಆದರೆ, ಪ್ರಸಕ್ತ ಹಣಕಾಸು ವರ್ಷದ ದ್ವಿತೀಯಾರ್ಧದಲ್ಲಿ ಒಳ್ಳೆಯ ಗುಣಮಟ್ಟದ ಹಾಗೂ ಸೂಕ್ತ ಮೌಲ್ಯದ ಕಂಪನಿಗಳ ಐಪಿಒ ನಡೆಯಲಿದೆ ಎಂದು ರಾವ್ ಹೇಳಿದ್ದಾರೆ.

ಐಆರ್‌ಇಡಿಎ ಕಂಪನಿಯ ಐಪಿಒಗೆ ಅರ್ಜಿ ಸಲ್ಲಿಸಲು ನ. 21ರಿಂದ 23ರವರೆಗೆ ಅವಕಾಶ ಇರಲಿದೆ. ಇನ್ನುಳಿದ 4 ಕಂಪನಿ ಐಪಿಒಗೆ ಅರ್ಜಿ ಸಲ್ಲಿಸಲು ನ. 22ರಿಂದ 24ರವರೆಗೆ ಅವಕಾಶ ಇರಲಿದೆ.

ಎನ್‌ಎಫ್‌ಒ ಸಂಗ್ರಹ ನಾಲ್ಕು ಪಟ್ಟು ಏರಿಕೆ

ನವದೆಹಲಿ (ಪಿಟಿಐ): ಹೊಸದಾಗಿ ಆರಂಭಿಸುವ ಫಂಡ್‌ಗಳ (ಎನ್‌ಎಫ್‌ಒ) ಮೂಲಕ ಮ್ಯೂಚುವಲ್ ಫಂಡ್ ಕಂಪನಿಗಳು ಸಂಗ್ರಹಿಸಿದ ಮೊತ್ತವು ಸೆಪ್ಟೆಂಬರ್ ತ್ರೈಮಾಸಿಕದ ಅವಧಿಯಲ್ಲಿ ನಾಲ್ಕು ಪಟ್ಟು ಹೆಚ್ಚಾಗಿದ್ದು, ₹22,049 ಕೋಟಿಗೆ ತಲುಪಿದೆ. ಜೂನ್ ತ್ರೈಮಾಸಿಕದಲ್ಲಿ ಎನ್‌ಎಫ್‌ಒ ಮೂಲಕ ₹5,539 ಕೋಟಿ ಮಾತ್ರ ಸಂಗ್ರಹ ಆಗಿತ್ತು.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಒಟ್ಟು 48 ಹೊಸ ಫಂಡ್‌ಗಳು ಶುರುವಾಗಿವೆ, ಜೂನ್ ತ್ರೈಮಾಸಿಕದಲ್ಲಿ 25 ಹೊಸ ಫಂಡ್‌ಗಳು ಶುರುವಾಗಿದ್ದವು ಎಂದು ಮಾರ್ನಿಂಗ್‌ಸ್ಟಾರ್ ಇಂಡಿಯಾ ಕಲೆಹಾಕಿರುವ ದತ್ತಾಂಶ ಹೇಳಿದೆ.

ಮುಂದಿನ ತ್ರೈಮಾಸಿಕಗಳಲ್ಲಿ ಹೊಸ ಆಸ್ತಿ ನಿರ್ವಹಣಾ ಕಂಪನಿಗಳು ಕಾರ್ಯ ಆರಂಭಿಸಲಿವೆ. ಹೊಸ ಎನ್‌ಎಫ್‌ಒಗಳು ಬರುವ ನಿರೀಕ್ಷೆ ಇದೆ ಎಂದು ಫೈಯರ್ಸ್ ಸಂಸ್ಥೆಯ ಸಂಶೋಧನಾ ವಿಭಾಗದ ಉಪಾಧ್ಯಕ್ಷ ಗೋಪಾಲ್ ಕವಲಿರೆಡ್ಡಿ ಹೇಳಿದ್ದಾರೆ.

‘ದೇಶದ ಬೆಳವಣಿಗೆಯ ವಿಚಾರವಾಗಿ ಹೂಡಿಕೆದಾರರಿಗೆ ದೃಢ ವಿಶ್ವಾಸ ಇದೆ. ಹೆಚ್ಚೆಚ್ಚು ಕಂಪನಿಗಳು ಬಂಡವಾಳ ಮಾರುಕಟ್ಟೆಗಳಿಂದ ಹಣ ಸಂಗ್ರಹಿಸಲು ಮುಂದಾಗುತ್ತಿವೆ. ಷೇರುಪೇಟೆ ನೋಂದಾಯಿತ ಕಂಪನಿಗಳಿಗೆ ನೆರವಾಗುವ ಉದ್ದೇಶದಿಂದ ಆಸ್ತಿ ನಿರ್ವಹಣಾ ಕಂಪನಿಗಳು ಈಕ್ವಿಟಿ ಹಾಗೂ ಹೈಬ್ರಿಡ್ ವಿಭಾಗಗಳಲ್ಲಿ ಹೊಸ ಫಂಡ್ ಯೋಜನೆಗಳನ್ನು ರೂಪಿಸುತ್ತಿವೆ. ಅದರಲ್ಲೂ ಮುಖ್ಯವಾಗಿ ಮಿಡ್, ಸ್ಮಾಲ್ ಮತ್ತು ಮೈಕ್ರೊ ಕ್ಯಾಪ್ ವಿಭಾಗಗಳಲ್ಲಿ ಹೊಸ ಫಂಡ್‌ಗಳನ್ನು ರೂಪಿಸುತ್ತಿವೆ’ ಎಂದು ಅವರು ಹೇಳಿದ್ದಾರೆ.

ಸಾಮಾನ್ಯವಾಗಿ, ಷೇರುಪೇಟೆ ಸೂಚ್ಯಂಕಗಳು ಏರುಗತಿಯಲ್ಲಿ ಇದ್ದಾಗ ಹೊಸ ಫಂಡ್‌ಗಳನ್ನು ಆರಂಭಿಸಲಾಗುತ್ತದೆ. ‘ಈಕ್ವಿಟಿ ಹೂಡಿಕೆಗಳ ವಿಚಾರವಾಗಿ ಆಶಾದಾಯಕ ವಾತಾವರಣ ಇರುವ ಕಾರಣ ಎನ್‌ಎಫ್‌ಒಗಳಿಗೆ ಹೆಚ್ಚಿನ ಹಣ ಹರಿದುಬರುತ್ತಿದೆ’ ಎಂದು ಆನಂದ ರಾಠಿ ವೆಲ್ತ್ ಸಂಸ್ಥೆಯ ಉಪ ಸಿಇಒ ಫಿರೋಜ್ ಅಜೀಜ್ ಹೇಳಿದ್ದಾರೆ.

ಆದರೆ ಎನ್‌ಎಫ್‌ಒಗಳ ವಿಚಾರವಾಗಿ ಹೂಡಿಕೆದಾರರು ಅವಸರ ತೋರುವ ಅಗತ್ಯವಿಲ್ಲ. ಎನ್‌ಎಫ್‌ಒ ಹೂಡಿಕೆಯಿಂದ ಹೆಚ್ಚುವರಿ ಪ್ರಯೋಜನಗಳೇನೂ ಇರುವುದಿಲ್ಲ ಎಂದು ಅಜೀಜ್ ಕಿವಿಮಾತು ಹೇಳಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿನಲ್ಲಿ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
www.homages.deccanherald.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
General
ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673
ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ,TVS, ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ITIನವರುಗಳು 17,000- 65,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930
ತಕ್ಷಣ ಬೇಕಾಗಿದ್ದಾರೆ: ಕರ್ನಾಟಕದಾದ್ಯಂತ ಯುವಕ ಯುವತಿಯರು ಕಂಪನಿ ಕೆಲಸಕ್ಕೆ ಬೇಕಾಗಿದ್ದಾರೆ. 20,000—65,000/—. ಊಟ ವಸತಿಯೊಂದಿಗೆ. 9686687380, 9945791526
Teachers/ Professors
KISHORA VIDYA BHAVANA
Chintamani, Chikkaballapur District.
Over 50 years old reputed School requires
RESIDENTIAL PRINCIPAL
Post Graduate Candidates having brilliant academic record and over 15 years teaching experience and 5 years of administrative experience are preferred. They should be proficient in English with sound knowledge of state curriculum.
Benefits and Remuneration: befitting the experience and qualification.
Apply to:
Secretary, Kishora Vidya Bhavana, Chintamani - 563125
OR kishoravidyabhavana@gmail.com
Applications end on 30th November 2023

Part-Time Jobs
ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.
Walk-in
ಉದ್ಯೋಗವಕಾಶ: ಮಹಿಳೆಯರು, ಪುರುಷರು, ವಿಧವೆಯರು ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ. (ಸರ್ಕಾರಿ ನೊಂದಾಯಿತಾ ಸಂಸ್ಥೆ) 9743135666, 9035113222

Wanted
ಯುವಕ ಯುವತಿಯರಿಗೆ ಹೆಲ್ಪರ್ ಕೆಲಸ ಖಾಲಿ ಇದೆ. ಊಟ ವಸತಿಯೊಂದಿಗೆ ತಿಂಗಳಿಗೆ ವೇತನ 20000 ರಿಂದ 25000/-ವರಗೆ. ವಿಳಾಸ : ಶ್ರೀ ಶಕ್ತಿ ಹೆಲ್ತ್ ಕೇರ್ ಶೇಷಾದ್ರಿಪುರಂ ಪೊಲೀಸ್ ಠಾಣೆ ಎದುರು ಬೆಂಗಳೂರು. 7349494852
ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ 12,000- 17,000. 8951315839, 9141634619
ವ್ಯಾಪಾರ
Business to Business
Business
ಹೊಸ ಬಿಸಿನೆಸ್ ಪ್ಲಾನ್ ಹಾಗೂ ಹಳೆಯ ಬಿಸಿನೆಸ್ ನವೀಕರಣ, ಆರ್ಥಿಕ ಸಹಾಯಕ್ಕಾಗಿ /ಮಾಹಿತಿಗಾಗಿ ಸಂಪರ್ಕಿಸಿ: 9113972476, 8310754239, 7406009827
ಭವಿಷ್ಯ
Astrology
ಓಂ ಶ್ರೀ.ಮಹಾಗಣಪತಿ ಜೋತಿಷ್ಯಾಲಯ, ಮಹಾರಾಷ್ಟ್ರದ ಪ್ರಖ್ಯಾತ ಜೋತಿಷ್ಯರು, ಕನ್ನಡ,ಹಿಂದಿ, ಮರಾಠಿ ಭಾಷೆಯಲ್ಲಿ ಭವಿಷ್ಯವನ್ನು ಹೇಳುತ್ತಾರೆ, ಸ್ತ್ರೀ/ ಪುರುಷ ವಶೀಕರಣ,ಕೆಲವೇ ದಿನಗಳಲ್ಲಿ ಪರಿಹಾರ, ನಿಮ್ಮ ಹಲವಾರು ಸಮಸ್ಯೆಗಳಿಗೆ ಪರಿಹಾರ,ಕೆಲಸ ಆಗದಿದ್ದಲ್ಲಿ ಹಣ ವಾಪಸ್ಸ. ಗಣೇಶರಾವ್ ಶಾಸ್ತ್ರಿ ಜಿ: 9226506660/ 9960147770

“ಕೆಲಸ ಆದ ನಂತರ ಕಾಣಿಕೆ” ಎಲ್ಲಿಯೂ ಪರಿಹಾರವಾಗದ ಕಠಿಣ,ನಿಗೂಢ ಗುಪ್ತಸಮಸ್ಯೆಗಳಿಗೆ ಬ್ರಹ್ಮತಂತ್ರ ವಿದ್ಯೆಯಿಂದ, ಶ್ರೀರಾಘವೇಂದ್ರಶರ್ಮರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಶ್ರೀಬಂಡೆಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವೀಪುರಂ,ಗುಟ್ಟಹಳ್ಳಿ. ಬೆಂ.9620201188
ಪ್ರವಾಸ
Travel
3.12.2023 ಗುಜರಾತ್, ಮಧ್ಯಪ್ರದೇಶ. 23.12.2023 ಗುರುವಾಯೂರು, ಮುನ್ನಾರ್, ಕೊಚ್ಚಿನ್, ಅಲಪೇ, ಜಠಾಯು, ತಿರುವನಂತಪುರಂ, ಕನ್ಯಾಕುಮಾರಿ,ರಾಮೇಶ್ವರಂ, ಮದುರೈ ಕರ್ನಾಟಕ ಹೆರಿಟೇಜ್ ಟೂರ್ಸ್(ಹನುಮಂತನಗರ) 9845035349, 9482435755
25.11.2023 ರಿಂದ 3ದಿನಗಳು ಮಡಿಕೇರಿ, ಬಂಡಿಪುರ, ಹಿಮಗೋಪಾಲಸ್ವಾಮಿಬೆಟ್ಟ, ಮೈಸೂರು, ಬೈಲುಕುಪ್ಪೆ. 25.11.2023ರಿಂದ 4ದಿನಗಳು ಧರ್ಮಸ್ಥಳ, ಮುರುಡೇಶ್ವರ, ಕೊಲ್ಲೂರು ಮೂಕಾಂಬಿಕ, ಹೊರನಾಡು,ಕುಕ್ಕೆಸುಬ್ರಮಣ್ಯ. 23.11.2023 ರಿಂದ7ದಿನಗಳು ಭದ್ರಾಚಲಂ, ಹೈದ್ರಾಬಾದ್, ಮಂತ್ರಾಲಯ, ವಿಜಯವಾಡ, ಅಮರಾವತಿ,ರಾಮೋಜಿಫಿಲಂಸಿಟಿ. 24.11.2023 ರಿಂದ6ದಿನಗಳು ವಿಶಾಖಪಟ್ಟಣ, ಭದ್ರಾಚಲಂ, ಅನ್ನಾವರಂ, ಬೋರಕೋವಿಸ್, ಅರುಕುವ್ಯಾಲಿ,ಪಾರಮಶಾಲಾ, ಸಿಂಹಚಲಂ, ದ್ವಾರಕತಿರುಮಲ.ವಿಚಾರಿಸಿ. ಶ್ರೀಗುರುರಾಜ ಟ್ರಾವೆಲ್ಸ್.ಕೋಲಾರ- 9900124333, 9611082432, 8123099913
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ರಿಯಾಯಿತಿ ದರದಲ್ಲಿ ವಿದೇಶ ಪ್ರವಾಸಗಳು: 2024 ದುಬೈ,ಅಬುದಾಬಿ ವಿಯೆಟ್ನಾಂ,ಕಾಂಬೋಡಿಯ ಆಸ್ಟ್ರೇಲಿಯಾ ನ್ಯೂಜಿಲ್ಯಾಂಡ್ ನೇಪಾಳ,ಮುಕ್ತಿನಾಥ ಯುಕೆ,ಯುರೋಪ್ ಪ್ರವಾಸಗಳು. ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ ಬೆಂಗಳೂರು.04. 9900080793 9900080796
ಅಂಡಮಾನ್ ಹವಳದ್ವೀಪ ಪ್ರತಿ ಗುರುವರ 5/8ದಿನಗಳು ಹಡಗು/ವಿಮಾನದಲ್ಲಿ Royal Package 27.11.2023 ಮಾತು11.12.2023 ರಿಯಯಿತಿ ದರದಲ್ಲಿ 6ದಿನಗಳು ಕಾಶಿ ಗಯಾ ಅಲಹಾಬಾದ್ ಅಯೋಧ್ಯ(ಕೆಲವೇ ಸೀಟುಗಳಿವೆ) ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9739847429/ 9845560219
Holiday Package Tours
28.1.2024, 2.2.2024, 10ದಿನ ಅಯೋಧ್ಯ ವಿಶೇಷ ಪ್ರವಾಸ,ಲಕ್ನೋ,ನೈಮಿಷಾರಣ್ಯ ಅಯೋಧ್ಯರಾಮಮಂದಿರ ಅಲಹಾಬಾದ್,ಗಯಾ ಬುದ್ಧಗಯಾ,ಕಾಶಿ,ಆಗ್ರಾ ಮಥುರ,ದೆಹಲಿ Twite Holidays Pvt.Ltd. 8088559962, 7975189234
Pilgrimage Tours
ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 21/12 ಗುಜರಾತ್, ಮಧ್ಯಪ್ರದೇಶ 4 ಜ್ಯೋತಿರ್ಲಿಂಗ ದರ್ಶನ. 4/12 ಪುರಿ ಜಗನ್ನಾಥ್, ಕೋನಾರ್ಕ್, ಭುನೇಶ್ವರ.9964527782,95 91017782
ಪ್ರಜಾವಾಣಿ
To place your ad in Prajavani Classifieds
ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿರಿ:
9845114560 : 9731810277
080 - 45557163 / 164

ಏಳು ಕಂಪನಿಗಳ ಎಂ ಕ್ಯಾಪ್ ₹1.50 ಲಕ್ಷ ಕೋಟಿಯಷ್ಟು ಏರಿಕೆ

ನವದೆಹಲಿ (ಪಿಟಿಐ): ಪ್ರಮುಖ 10 ಕಂಪನಿಗಳ ಪೈಕಿ 7 ಕಂಪನಿಗಳ ಸಂಯೋಜಿತ ಮಾರುಕಟ್ಟೆ ಮೌಲ್ಯ (ಎಂಕ್ಯಾಪ್) ಕಳೆದ ವಾರ ₹1.50 ಲಕ್ಷ ಕೋಟಿಯಷ್ಟು ಏರಿಕೆ ಕಂಡಿದೆ. ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಮತ್ತು ಇನ್ಫೊಸಿಸ್ ಹೆಚ್ಚು ಗಳಿಕೆ ಕಂಡಿವೆ.

ರಿಲಯನ್ಸ್ ಇಂಡಸ್ಟ್ರೀಸ್, ಟಿಸಿಎಸ್, ಎಚ್‌ಡಿಎಫ್‌ಸಿ ಬ್ಯಾಂಕ್, ಇನ್ಫೊಸಿಸ್, ಹಿಂದೂಸ್ತಾನ್ ಯೂನಿಲಿವರ್, ಐಟಿಸಿ ಮತ್ತು ಭಾರ್ತಿ ಏರ್‌ಟೆಲ್ ಲಾಭ ಗಳಿಸಿವೆ. ಆದರೆ, ಐಸಿಐಸಿಐ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಮತ್ತು ಬಜಾಜ್ ಫೈನಾನ್ಸ್‌ನ ಎಂಕ್ಯಾಪ್ ಇಳಿಕೆ ಕಂಡಿವೆ.

10 ಕಂಪನಿಗಳ ಪೈಕಿ ಟಿಸಿಎಸ್ ₹62,148 ಕೋಟಿಯಷ್ಟು ಮೌಲ್ಯ ಗಳಿಸಿ, ಹೆಚ್ಚು ಲಾಭ ಗಳಿಸಿದ ಕಂಪನಿಯಾಗಿದೆ. ಇನ್ಫೊಸಿಸ್ ₹28,616 ಕೋಟಿ, ರಿಲಯನ್ಸ್ ಇಂಡಸ್ಟ್ರೀಸ್ ₹28,111 ಕೋಟಿ, ಎಚ್‌ಡಿಎಫ್‌ಸಿ ಬ್ಯಾಂಕ್ ₹11,136 ಕೋಟಿ, ಹಿಂದೂಸ್ತಾನ್ ಯೂನಿಲಿವರ್ ₹10,032 ಕೋಟಿ, ಭಾರ್ತಿ ಏರ್‌ಟೆಲ್ ₹6,828 ಮತ್ತು ಐಟಿಸಿ ₹3,803 ಕೋಟಿಯಷ್ಟು ಮಾರುಕಟ್ಟೆ ಮೌಲ್ಯ ಏರಿಕೆ ಆಗಿದೆ. ಆದರೆ, ಎಸ್‌ಬಿಐ ₹14,502 ಕೋಟಿ, ಐಸಿಐಸಿಐ ಬ್ಯಾಂಕ್ ₹11,308 ಕೋಟಿ ಹಾಗೂ ಬಜಾಜ್ ಫೈನಾನ್ಸ್ ₹4,973 ಕೋಟಿಯಷ್ಟು ಮಾರುಕಟ್ಟೆ ಮೌಲ್ಯ ಇಳಿಕೆ ಆಗಿದೆ.

ಅತ್ಯಂತ ಮೌಲ್ಯಯುತ ಕಂಪನಿ ಎಂಬ ಹೆಗ್ಗಳಿಕೆಯನ್ನು ರಿಲಯನ್ಸ್ ಇಂಡಸ್ಟ್ರೀಸ್ ಉಳಿಸಿಕೊಂಡಿದೆ. ನಂತರ ಸ್ಥಾನದಲ್ಲಿ ಟಿಸಿಎಸ್, ಎಚ್‌ಡಿಎಫ್‌ಸಿ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಇನ್ಫೊಸಿಸ್, ಹಿಂದೂಸ್ತಾನ್ ಯೂನಿಲಿವರ್, ಐಟಿಸಿ, ಭಾರ್ತಿ ಏರ್‌ಟೆಲ್, ಎಸ್‌ಬಿಐ ಮತ್ತು ಬಜಾಜ್ ಫೈನಾನ್ಸ್ ಇವೆ. ಕಳೆದ ವಾರ ಮುಂಬೈ ಷೇರು ವಿನಿಮಯ ಕೇಂದ್ರ (ಬಿಎಸ್‌ಇ) 890 ಅಂಶ (ಶೇ 1.37) ಏರಿಕೆ ಆಗಿತ್ತು.

ಒಂದು ಬಾಟಲಿ ಸ್ಕಾಚ್ ವಿಸ್ಕಿ ₹22 ಕೋಟಿಗೆ ಮಾರಾಟ!

ಲಂಡನ್ (ಎಪಿ): ಜಗತ್ತಿನಲ್ಲಿ ಅತಿಹೆಚ್ಚು ಬೇಡಿಕೆ ಹಾಗೂ ಮೌಲ್ಯಯುತ ವಿಸ್ಕಿಗಳಲ್ಲಿ ಒಂದಾಗಿರುವ ‘ದಿ ಮೆಕ್ಯಾಲನ್ ಅಡಾಮಿ 1926’ ಹೆಸರಿನ ಸ್ಕಾಚ್ ವಿಸ್ಕಿಯ ಒಂದು ಬಾಟಲಿಯು ₹22.48 ಕೋಟಿ (22 ಲಕ್ಷ ಪೌಂಡ್) ಮೊತ್ತಕ್ಕೆ ಹರಾಜಾಗಿದ್ದು, ಹೊಸ ದಾಖಲೆ ಬರೆದಿದೆ.

ಲಂಡನ್‌ನ ಹೆಸರಾಂತ ಹರಾಜು ಮನೆಯಾದ ಸದಬೀಸ್‌ನಲ್ಲಿ ನಡೆದ ಹರಾಜು ಪ್ರಕ್ರಿಯೆಯಲ್ಲಿ ಖರೀದಿದಾರರು ಈ ಮದ್ಯದ ಬಾಟಲಿ ಖರೀದಿಸಲು ಪೈಪೋಟಿಗೆ ಬಿದ್ದರು. ಇದರ ಲೇಬಲ್‌ಗಳನ್ನು ಇಟಲಿಯ ವರ್ಣಚಿತ್ರಕಾರ ವೆಲೆರಿಯೊ ಅಡಾಮಿ ವಿನ್ಯಾಸಗೊಳಿಸಿದ್ದಾರೆ.

ಈ ವಿಸ್ಕಿಯನ್ನು ಬಟ್ಟಿ ಇಳಿಸಿದ್ದು 1926ರಲ್ಲಿ. 1986ರಲ್ಲಿ ಇದನ್ನು ಬಾಟಲಿಯಲ್ಲಿ ಸಂಗ್ರಹಿಸುವುದಕ್ಕೂ ಮೊದಲು ಅರವತ್ತು ವರ್ಷಗಳವರೆಗೆ ಶೆರ್ರಿ ಪೀಪಾಯಿಗಳಲ್ಲಿ ಪಕ್ವಗೊಳಿಸಲಾಗಿತ್ತು. 40 ಬಾಟಲಿಗಳಷ್ಟು ವಿಸ್ಕಿಯನ್ನಷ್ಟೇ ತಯಾರಿಸಲಾಗಿದೆ.

ಇದೇ ಪೀಪಾಯಿಯಿಂದ ಸಂಗ್ರಹಿಸಿದ್ದ ಮತ್ತೊಂದು ಬಾಟಲಿ ವಿಸ್ಕಿಯು 2019ರಲ್ಲಿ ನಡೆದ ಹರಾಜಿನಲ್ಲಿ ₹15.56 ಕೋಟಿಗೆ ಹರಾಜು ಆಗಿತ್ತು.

‘ಈ ವಿಸ್ಕಿಯನ್ನು ಖರೀದಿಸಿ ಮಾರಾಟ ಮಾಡುವುದು ಹಾಗೂ ತಮ್ಮಲ್ಲಿ ಸಂಗ್ರಹಿಸಿಟ್ಟುಕೊಳ್ಳುವುದು ಪ್ರತಿಯೊಬ್ಬ ಮದ್ಯ ಹರಾಜುದಾರನ ಹೆಬ್ಬಯಕೆಯಾಗಿದೆ’ ಎಂದು ಸದಬೀಸ್‌ನ ಮುಖ್ಯಸ್ಥ ಜಾನಿ ಫೌಲ್ ಹೇಳಿದ್ದಾರೆ.

‘ದಿ ಮೆಕ್ಯಾಲನ್ ಅಡಾಮಿ 1926’ ಹೆಸರಿನ ಸ್ಕಾಚ್ ವಿಸ್ಕಿ ಬಾಟಲಿ – ಎಎಫ್‌ಪಿ ಚಿತ್ರ

ಶೆನಿಸ್ ಪಾಲಾಸಿಯಸ್ 2023ರ ಭುವನ ಸುಂದರಿ

ಶೆನಿಸ್ ಪಾಲಾಸಿಯಸ್

ನವದೆಹಲಿ (ಪಿಟಿಐ): ನಿಕರಾಗ್ವಾದ ಶೆನಿಸ್ ಪಾಲಾಸಿಯಸ್ ಅವರು 2023ನೇ ಸಾಲಿನ ಭುವನ ಸುಂದರಿ ಕಿರೀಟ ಮುಡಿಗೇರಿಸಿಕೊಂಡಿದ್ದಾರೆ.

ಈ ಮೂಲಕ ಮಧ್ಯ ಅಮೆರಿಕದ ನಿಕರಾಗ್ವಾ ದೇಶಕ್ಕೆ ಮೊದಲ ಭುವನ ಸುಂದರಿ ಕಿರೀಟ ದೊರೆತಂತಾಗಿದೆ.

ಭುವನ ಸುಂದರಿ ಸೌಂದರ್ಯ ಸ್ಪರ್ಧೆಯ 72ನೇ ಆವೃತ್ತಿಯ ಅಂತಿಮ ಸ್ಪರ್ಧೆಯು ಎಲ್ ಸಾಲ್ವಡಾರ್‌ನ ರಾಜಧಾನಿ ಸ್ಯಾನ್ ಸಾಲ್ವಡಾರ್‌ನಲ್ಲಿ ಶನಿವಾರ ಸಂಜೆ ನಡೆಯಿತು. 2022ನೇ ಸಾಲಿನ ಭುವನ ಸುಂದರಿ ಸ್ಪರ್ಧೆ ವಿಜೇತೆ, ಅಮೆರಿಕದ ಆರ್ಬಾನಿ ಗೇಬ್ರಿಯಲ್ ಅವರು ಶೆನಿಸ್ ಅವರಿಗೆ ಕಿರೀಟ ತೊಡಿಸಿದರು.

ಥಾಯ್ಲೆಂಡ್‌ನ ಆ್ಯಂಟೋನಿಯಾ ಪೋರ್ಸಿಲ್ಡ್ ಮತ್ತು ಆಸ್ಟ್ರೇಲಿಯಾದ ಮೊರಾಯ ವಿಲ್ಸನ್ ಅವರು ಕ್ರಮವಾಗಿ ಪ್ರಥಮ ರನ್ನರ್ ಅಪ್ ಹಾಗೂ ದ್ವಿತೀಯ ರನ್ನರ್ ಅಪ್ ಸ್ಥಾನ ಪಡೆದುಕೊಂಡರು.

ಈ ಬಾರಿ 83 ದೇಶಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದವು. ಭಾರತವನ್ನು ಪ್ರತಿನಿಧಿಸಿದ್ದ ಶ್ವೇತಾ ಶಾರ್ದಾ ಅವರು 20ರ ಪಟ್ಟಿಯಲ್ಲಿ ಸ್ಥಾನ ಪಡೆದರೂ ಅಂತಿಮ ಸುತ್ತು ಪ್ರವೇಶಿಸಲು ವಿಫಲರಾದರು.

ಬೆಂಗಳೂರಿನ 2 ವಸತಿ ಯೋಜನೆಗೆ ₹800 ಕೋಟಿ: ಮ್ಯಾಕ್ರೊಟೆಕ್

ನವದೆಹಲಿ (ಪಿಟಿಐ): ಬೆಂಗಳೂರಲ್ಲಿ ಎರಡು ವಸತಿ ಯೋಜನೆಗಳನ್ನು ನಿರ್ಮಿಸಲು ₹800 ಕೋಟಿ ಹೂಡಿಕೆ ಮಾಡಲಿರುವುದಾಗಿ ಮ್ಯಾಕ್ರೊಟೆಕ್ ಡೆವಲಪರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಅಭಿಷೇಕ್ ಲೋಧಾ ಹೇಳಿದ್ದಾರೆ.

ಕಳೆದ ವರ್ಷ ಜೂನ್‌ನಲ್ಲಿ ಕಂಪನಿ, ಬೆಂಗಳೂರಲ್ಲಿ ತನ್ನ ಮೊದಲ ವಸತಿ ಯೋಜನೆ ಅಭಿವೃದ್ಧಿ ಹಾಗೂ ಬೆಂಗಳೂರು ಮಾರುಕಟ್ಟೆಗೆ ಪ್ರವೇಶವನ್ನು ಘೋಷಿಸಿತ್ತು. ನಂತರ ಇನ್ನೊಂದು ವಸತಿ ಯೋಜನೆಯನ್ನು ಸೇರಿಸಿತ್ತು. ಅದರಂತೆ ಈ ತಿಂಗಳಲ್ಲಿ ತನ್ನ ಮೊದಲ ವಸತಿ ಯೋಜನೆಯನ್ನು ಆರಂಭಿಸಿದೆ.

ಪ್ರಸಕ್ತ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ನಮ್ಮ ಎರಡನೇ ಯೋಜನೆಯನ್ನು ಆರಂಭ ಮಾಡಲು ಗುರಿ ಹಾಕಿಕೊಂಡಿದ್ದೇವೆ. ಇದು ಮುಂದಿನ ಹಣಕಾಸು ವರ್ಷದ ಮೊದಲ ತ್ರೈಮಾಸಿಕಕ್ಕೆ ಜಾರಿಗೊಳ್ಳಬಹುದು ಎಂದು ಲೋಧಾ ತಿಳಿಸಿದರು. ಈ ಎರಡು ಯೋಜನೆಗಳ ನಿರ್ಮಾಣ ವೆಚ್ಚ ₹800 ಕೋಟಿ ಆಗಲಿದೆ ಎಂದು ಅಂದಾಜಿಸಲಾಗಿದೆ. ಇವೆರಡರ ಒಟ್ಟು ಮೌಲ್ಯ ಸುಮಾರು ₹2,500 ಕೋಟಿ ಆಗಲಿದೆ ಎಂದು ನಿರೀಕ್ಷಿಸಲಾಗಿದೆ ಎಂದು ತಿಳಿಸಿದರು.

ಮ್ಯಾಕ್ರೊಟೆಕ್ ಡೆವಲಪರ್ಸ್ ಪ್ರತಿ ಅಪಾರ್ಟ್‌ಮೆಂಟ್ ಮಾರಾಟ ಬೆಲೆ ₹1.5 ಕೋಟಿಯಿಂದ 2.5 ಕೋಟಿ ಇರಲಿದೆ. ಪ್ರಸಕ್ತ ಹಣಕಾಸು ವರ್ಷದ ಮೊದಲ ಆರು ತಿಂಗಳಲ್ಲಿ ₹6,890 ಕೋಟಿಯಷ್ಟು ಬುಕಿಂಗ್ ಗಳಿಸಿತ್ತು. ಕಳೆದ ವರ್ಷ ಇದೇ ಅವಧಿಯಲ್ಲಿ ಮಾರಾಟದ ಬುಕಿಂಗ್ ಮೌಲ್ಯ ₹6 ಸಾವಿರ ಕೋಟಿಗಳಷ್ಟಿತ್ತು.

ಪ್ರಧಾನಿ ನರೇಂದ್ರ ಮೋದಿ ಅವರು ತಾರಾನಗರದಲ್ಲಿ ಪಾಲ್ಗೊಂಡಿದ್ದ ಸಾರ್ವಜನಿಕ ಸಭೆಯಲ್ಲಿ ಭಾಗಿಯಾಗಿದ್ದ ಬಿಜೆಪಿ ಬೆಂಬಲಿಗರು (ಪಿಟಿಐ ಚಿತ್ರ)

ಒಳಜಗಳದಲ್ಲಿ ತೊಡಗಿರುವ ಕಾಂಗ್ರೆಸ್: ಮೋದಿ ಲೇವಡಿ

ಜೈಪುರ (ಪಿಟಿಐ): ರಾಜಸ್ಥಾನದ ಕಾಂಗ್ರೆಸ್ಸಿಗರು ಐದು ವರ್ಷಗಳಿಂದಲೂ ಒಬ್ಬರನ್ನು ಇನ್ನೊಬ್ಬರು ರನ್ ಔಟ್ ಮಾಡಲು ಯತ್ನಿಸುತ್ತ ಕಾಲ ಕಳೆದಿರುವ ಒಂದು ಕ್ರಿಕೆಟ್ ತಂಡದ ಸದಸ್ಯರಿದ್ದಂತೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಲೇವಡಿ ಮಾಡಿದರು.

ಚುರು ಜಿಲ್ಲೆಯಲ್ಲಿ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಮೋದಿ ಅವರು, ರಾಜ್ಯದ ಅಭಿವೃದ್ಧಿ ವೇಗವಾಗಿ ಆಗಬೇಕು ಎಂದಾದರೆ ಬಿಜೆಪಿಗೆ ಮತ ನೀಡಬೇಕು ಎಂದು ಮನವಿ ಮಾಡಿದರು. 'ಕ್ರಿಕೆಟ್ ಆಟದಲ್ಲಿ ಬ್ಯಾಟರ್‌ಗಳು ಕಣಕ್ಕೆ ಬಂದು ತಮ್ಮ ತಂಡಕ್ಕಾಗಿ ರನ್ ಪೇರಿಸುತ್ತಾರೆ. ಆದರೆ ಕಾಂಗ್ರೆಸ್ಸಿನಲ್ಲಿ ಒಳಜಗಳವು ಅದೆಷ್ಟರ-ಮಟ್ಟಿಗೆ ಇದೆ ಎಂದರೆ, ರನ್ ಪೇರಿಸುವ ಬದಲು ಪಕ್ಷದ ನಾಯಕರು ಪರಸ್ಪರರನ್ನು ರನ್ ಔಟ್ ಮಾಡಲು ಯತ್ನಿಸುತ್ತ ಐದು ವರ್ಷ ಕಳೆದಿದ್ದಾರೆ' ಎಂದು ಮೋದಿ ಅವರು ದೂರಿದರು. ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಮತ್ತು ಮಾಜಿ ಉಪ ಮುಖ್ಯಮಂತ್ರಿ ಸಚಿನ್ ಪೈಲಟ್ ನಡುವಿನ ಸಂಘರ್ಷವನ್ನು ಉಲ್ಲೇಖಿಸಿ ಅವರು ಈ ಮಾತು ಹೇಳಿದರು.

'ಕಾಂಗ್ರೆಸ್ ಮತ್ತು ಅಭಿವೃದ್ಧಿ ಪರಸ್ಪರ ಶತ್ರುಗಳು. ಅವೆರಡೂ ಶತ್ರುಗಳಾಗಿಯೇ ಇರಲಿವೆ' ಎಂದರು. ಜಲ ಜೀವನ ಮಿಷನ್ ಯೋಜನೆಯಲ್ಲಿ ನಡೆದಿದೆ ಎನ್ನಲಾದ ಹಗರಣದ ವಿಚಾರವಾಗಿ ಮೋದಿ ಅವರು, 'ಸದುದ್ದೇಶ ಮತ್ತು ಕಾಂಗ್ರೆಸ್ ಪಕ್ಷದ ನಡುವಿನ ಸಂಬಂಧವು ಕತ್ತಲು ಮತ್ತು ಬೆಳಕಿನ ಸಂಬಂಧದಂತೆ ಇದೆ. ಕುಡಿಯುವ ನೀರಿಗಾಗಿನ ಹಣವನ್ನು ನುಂಗುವ ಸರ್ಕಾರದ ಉದ್ದೇಶ ಏನಿರುತ್ತದೆ' ಎಂದು ಜನರನ್ನು ಪ್ರಶ್ನಿಸಿದರು.

ರಾಜಸ್ಥಾನದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ, ಭ್ರಷ್ಟರನ್ನು ಹೊರಹಾಕಲಾಗುತ್ತದೆ. ರಾಜ್ಯದಲ್ಲಿ ಅಭಿವೃದ್ಧಿಯು ವೇಗ ಪಡೆದುಕೊಳ್ಳುತ್ತದೆ ಎಂದು ಹೇಳಿದರು.

ನುಡಿ–ಕಿಡಿ

ತೆಲಂಗಾಣದ ಆಡಳಿತಾರೂಢ ಬಿಆರ್‌ಎಸ್, ಅಸಾದುದ್ದೀನ್ ಒವೈಸಿ ನೇತೃತ್ವದ ಎಐಎಂಐಎಂ ಮತ್ತು ಬಿಜೆಪಿ ನಡುವೆ ಒಳಒಪ್ಪಂದ ಏರ್ಪಟ್ಟಿದೆ. ಆ ಪಕ್ಷಗಳು ಒಟ್ಟಾಗಿ ಚುನಾವಣೆ ಎದುರಿಸುತ್ತಿವೆ. 'ಬಿಜೆಪಿ ಮತ್ತು ಬಿಆರ್‌ಎಸ್ ನಡುವೆ ಅಪ್ರಕಟಿತ ಒಪ್ಪಂದವಿದೆ. ಕೇಂದ್ರದಲ್ಲಿ ಎನ್‌ಡಿಎ ಸರ್ಕಾರವನ್ನು ಬಿಆರ್‌ಎಸ್ ಬೆಂಬಲಿಸಿದೆ.

ಪ್ರಿಯಾಂಕಾ ಗಾಂಧಿ ವಾದ್ರಾ, ಎಐಸಿಸಿ ಪ್ರಧಾನ ಕಾರ್ಯದರ್ಶಿ

ಮಾಜಿ ಪ್ರಧಾನಿ ಇಂದಿರಾ ಗಾಂಧಿ ಆಡಳಿತದ ಅವಧಿಯಲ್ಲಿ ಹಸಿವಿನಿಂದ ಜನರ ಸಾವು, ನಕ್ಸಲ್ ಚಳುವಳಿಗಳು ಮತ್ತು ಎನ್‌ಕೌಂಟರ್‌ಗಳು ಹೆಚ್ಚಿದ್ದವು. ಕೊಲ್ಲಾಪುರದಲ್ಲಿ ಕೃಷ್ಣಾ ನದಿ ಹತ್ತಿರದಲ್ಲಿ ಹರಿಯುತ್ತಿದ್ದರೂ ತಮ್ಮ ಆಳ್ವಿಕೆಯಲ್ಲಿ ಕುಡಿಯುವ ನೀರು ಒದಗಿಸಲು ಸಾಧ್ಯವಾಗದ ಕಾರಣ ಕಾಂಗ್ರೆಸ್ ನಾಯಕರು ಮತ ಕೇಳಲು ನಾಚಿಕೆಪಡಬೇಕು.

ಕೆ.ಚಂದ್ರಶೇಖರ ರಾವ್, ತೆಲಂಗಾಣ ಮುಖ್ಯಮಂತ್ರಿ

ರಾಜಸ್ಥಾನದ ಗಂಗಾನಗರ ಜಿಲ್ಲೆಯಲ್ಲಿ ಅವ್ಯಾಹತವಾಗಿರುವ ಮಾದಕ ವ್ಯಸನ

ಮಾದಕವಸ್ತು: ಚರ್ಚೆಯ ಕೇಂದ್ರ

ಗಂಗಾನಗರ (ರಾಜಸ್ಥಾನ) (ಪಿಟಿಐ): ಬಿಕಾನೇರ್‌ನಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ರಮೇಶ್ ಕುಮಾರ್ ಅವರು ಹೆರಾಯಿನ್ ಸೇವನೆಯ ಚಟಕ್ಕೆ ದಾಸರಾದರು. ಅದನ್ನು ಬಿಡುವ ಮನಸ್ಸು ಮಾಡುವ ಹೊತ್ತಿಗೆ ಐದು ವರ್ಷಗಳು ಕಳೆದಿದ್ದವು.

ಕುಮಾರ್ ಅವರು ಈಗ ಈ ಚಟದ ಹಿಡಿತದಿಂದ ಹೊರಬರುವ ಕಷ್ಟದ ಹಾದಿಯಲ್ಲಿದ್ದಾರೆ. ಗಂಗಾನ-ಗರದಲ್ಲಿ ಇಂಥವರು ಹಲವರಿದ್ದಾರೆ. ದುಶ್ಚಟದ ಹಿಡಿತದಿಂದ ತಪ್ಪಿಸಿಕೊಳ್ಳಲು ಅಲ್ಲಿ ಹಲವರು ವ್ಯಸನ ವರ್ಜನ ಶಿಬಿರಗಳಿಗೆ ಬರುತ್ತಾರೆ. ಗಂಗಾನಗರ ಜಿಲ್ಲೆಗೆ ಗಡಿಯಾಚೆಯಿಂದ ಮಾದಕ ವಸ್ತುಗಳನ್ನು ತರಲಾಗುತ್ತಿದೆ.

ಪಾಕಿಸ್ತಾನ ಗಡಿಗೆ ಸನಿಹದಲ್ಲಿ-ರುವ ಈ ಜಿಲ್ಲೆಯ ಜನ, ವಿಧಾನಸಭಾ ಚುನಾವಣೆ ಹತ್ತಿರವಾಗುತ್ತಿರುವ ಈ ಹೊತ್ತಿನಲ್ಲಿ ಮಾದಕವಸ್ತುಗಳ ಸಮಸ್ಯೆಗೆ ಶಾಶ್ವತ ಪರಿಹಾರ ಬೇಕು ಎಂದು ಆಗ್ರ-ಹಿಸುತ್ತಿದ್ದಾರೆ. 'ನಾನು ಹೆರಾಯಿನ್ ದಾಸನಾಗಿದ್ದೆ. ಬಿಕಾನೇರ್‌ನಲ್ಲಿ ಕೆಲಸ ಮಾಡುತ್ತಿದ್ದಾಗ ನನ್ನ ಸ್ನೇಹಿತರು ಹೆರಾಯಿನ್ ಸೇವಿಸುವಂತೆ ಮಾಡಿದರು. ಆರಂಭದಲ್ಲಿ ಕುತೂಹಲಕ್ಕೆ ಸೇವಿಸಿದ

ನಾನು, ನಂತರ ಅದಕ್ಕೆ ದಾಸನಾದೆ. ಹೆರಾಯಿನ್ ಸೇವಿಸದಿದ್ದರೆ ನನಗೆ ತಲೆನೋವು, ಹೊಟ್ಟೆನೋವು ಬರುತ್ತಿತ್ತು. ಕೆಲಸ ಮಾಡಲು ಮನಸ್ಸಿ-ರುತ್ತಿರಲಿಲ್ಲ. ಕೊನೆಯಲ್ಲಿ ನಾನು ಕೆಲಸ ಬಿಡಬೇಕಾಯಿತು' ಎಂದು ಕುಮಾರ್ ಹೇಳುತ್ತಾರೆ.

ವ್ಯಸನ ವರ್ಜನ ಚಿಕಿತ್ಸೆ ಪೂರ್ಣಗೊಳಿಸುವ ಹಂತದಲ್ಲಿರುವ ಕುಮಾರ್, 'ಜನರಲ್ಲಿ ಅರಿವು ಮೂಡಿಸಲು ಸರ್ಕಾರ ಕೂಡ ಏನಾದರೂ ಮಾಡಬೇಕು' ಎಂದು ಹೇಳುತ್ತಾರೆ. 26 ವರ್ಷ ವಯಸ್ಸಿನ ಸಿಂಧು ಅವರು ತಮ್ಮ ಪತಿಯನ್ನು ಇಂತಹ ಚಿಕಿತ್ಸಾ ಕೇಂದ್ರಕ್ಕೆ ಸೇರಿಸಿದ್ದಾರೆ. ಇಲ್ಲಿ ಅವ್ಯಾಹತವಾಗಿರುವ ಮಾದಕ

ಮುಖ್ಯಾಂಶಗಳು

- ಪಾಕಿಸ್ತಾನದ ಗಡಿಗೆ ಹೊಂದಿಕೊಂಡ ಪ್ರದೇಶಗಳಲ್ಲಿ ಸಮಸ್ಯೆ
- ಹಲವರು ವ್ಯಸನ ವರ್ಜನ ಶಿಬಿರಗಳಿಗೆ ದಾಖಲು
- ಸಮಸ್ಯೆಗೆ ಶಾಶ್ವತ ಪರಿಹಾರಕ್ಕೆ ಆಗ್ರಹ

ವಸ್ತುಗಳ ಬಳಕೆಯು ಯಾರಲ್ಲೂ ಆಶ್ಚರ್ಯ ಮೂಡಿಸುತ್ತಿಲ್ಲ.

'ಇಲ್ಲಿ ಮಾದಕ ವಸ್ತುಗಳ ಬಳಕೆಯು ದೊಡ್ಡ ಮಟ್ಟದಲ್ಲಿದೆ. ಈ ಸಮಸ್ಯೆಯನ್ನು ಶಾಶ್ವತವಾಗಿ ಇಲ್ಲವಾಗಿಸುವ ಕೆಲಸವನ್ನು ಸರ್ಕಾರ ಮಾಡಬೇಕು. ಈ ಸಮಸ್ಯೆಯು ಕುಟುಂಬಗಳನ್ನು ನಾಶ ಮಾಡುತ್ತಿದೆ' ಎಂದು ಸಿಂಧು ಅವರು ಹೇಳುತ್ತಾರೆ. ಸಮಸ್ಯೆಯನ್ನು ಕೊನೆಗೊಳಿಸುವುದಾಗಿ ಪ್ರತಿ ಚುನಾವಣೆಯಲ್ಲಿಯೂ ಹೇಳುವ ರಾಜಕಾರಣಿಗಳು ನಂತರ ಆ ಬಗ್ಗೆ ಗಮನ ಹರಿಸುವುದೇ ಇಲ್ಲ ಎಂದು ಅವರು ಆಕ್ರೋಶ ವ್ಯಕ್ತಪಡಿಸುತ್ತಾರೆ.

ಈ ಸಮಸ್ಯೆ ಬಗ್ಗೆ ಮಾತನಾಡಲು ಗಂಗಾನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ನಿರಾಕರಿಸಿದರು. ಆದರೆ ಬಿಜೆಪಿ ಹಾಗೂ ಪಕ್ಷೇತರ ಅಭ್ಯರ್ಥಿ, ಇದನ್ನು ಕೊನೆಗೊಳಿಸುವುದಾಗಿ ಹೇಳುತ್ತಾರೆ.

ವ್ಯಸನ ವರ್ಜನ ಕೇಂದ್ರಕ್ಕೆ ಬರುವವರಲ್ಲಿ ಹೆಚ್ಚಿನವರು ಗಂಗಾನಗರ ಹಾಗೂ ಹನುಮಾನ್‌ಗಢ ಜಿಲ್ಲೆಗೆ ಸೇರಿದವರು. ಅದರಲ್ಲೂ ಮುಖ್ಯವಾಗಿ ಪಾಕಿಸ್ತಾನದ ಗಡಿಗೆ ಹೊಂದಿಕೊಂಡಿರುವ ಪ್ರದೇಶಕ್ಕೆ ಸೇರಿದವರು ಎಂದು ವೈದ್ಯ ಮನೀಶ್ ಬಾಗ್ಲಾ ಹೇಳುತ್ತಾರೆ. 'ಹಿಂದೆ ನಮ್ಮಲ್ಲಿಗೆ ಬರುವವರು ಅಫೀಮು ಸೇವಿಸು-ವವರಾಗಿದ್ದರು. ಈಗ ಹೆಚ್ಚಿನವರು ಹೆರಾಯಿನ್ ಸೇವಿಸುತ್ತಿದ್ದಾರೆ' ಎಂದು ಬಾಗ್ಲಾ ಹೇಳುತ್ತಾರೆ.

ಗಡಿಯಾಚೆಯಿಂದ ಮಾದಕ ವಸ್ತುಗಳ ಕಳ್ಳಸಾಗಣೆ ನಡೆಯುವುದನ್ನು ತಡೆಯಲು ಗಡಿ ಭದ್ರತಾ ಪಡೆ ಜೊತೆಗೂಡಿ ಕೆಲಸ ಮಾಡಲಾಗುತ್ತಿದೆ, ಪಂಜಾಬ್ ಪೊಲೀಸರ ಜೊತೆಯೂ ಸಮನ್ವಯದಿಂದ ಕೆಲಸ ಮಾಡಲಾಗುತ್ತಿದೆ. ಔಷಧ ಅಂಗಡಿಗಳಲ್ಲಿ ಯಾವ ಬಗೆಯ ಔಷಧಗಳನ್ನು ಮಾರಲಾಗುತ್ತಿದೆ ಎಂಬ ಬಗ್ಗೆ ತಪಾಸಣೆ ನಡೆಸಲಾಗುತ್ತಿರುತ್ತದೆ ಎಂದು ಗಂಗಾನಗರ ಎಸ್‌ಪಿ ವಿಕಾಸ್ ಶರ್ಮ ಹೇಳುತ್ತಾರೆ.

ಚುನಾವಣಾ ಕಣದಲ್ಲಿ

- **'ನಮ್ಮ ಬಳಿ ಗ್ಯಾರಂಟಿ ಇದೆ':** ರಾಜಕೀಯ ಲಾಭಕ್ಕಾಗಿ ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ಐ.ಟಿಯನ್ನು ಬಿಜೆಪಿ ದುರ್ಬಳಕೆ ಮಾಡಿಕೊಳ್ಳುತ್ತಿದೆ. ಇದು ಜನರಿಗೂ ಅರ್ಥವಾಗಿದೆ. ಇಂಥ ಕೆಲಸಗಳಿಗೆ ಜನರು ಚುನಾವಣೆಯಲ್ಲಿ ತಕ್ಕ ಉತ್ತರ ನೀಡಲಿದ್ದಾರೆ ಎಂದು ರಾಜಸ್ಥಾನ ಮುಖ್ಯಮಂತ್ರಿ ಅಶೋಕ ಗೆಹಲೋತ್ ಅವರು ಭಾನುವಾರ ಹೇಳಿದರು. ಮಾಜಿ ಪ್ರಧಾನಿ ಇಂದಿರಾ ಗಾಂಧಿ ಜಯಂತಿ ಅಂಗವಾಗಿ ಪ್ರದೇಶ ಕಾಂಗ್ರೆಸ್ ಕಚೇರಿಯಲ್ಲಿ ಗೌರವ ಸಲ್ಲಿಸಿದ ಬಳಿಕ ಅವರು ಸುದ್ದಿಗಾರರ ಮುಂದೆ ಮಾತನಾಡಿದರು. 'ಬಿಜೆಪಿ ಬಳಿ ಇ.ಡಿ ಇದೆ. ಆದರೆ ನಮ್ಮ ಬಳಿ ಗ್ಯಾರಂಟಿಗಳು ಇವೆ' ಎಂದರು.
- **ಧರಣಿ ಕೈಬಿಟ್ಟ ದಿಗ್ವಿಜಯ್:** ಮಧ್ಯಪ್ರದೇಶ ಕಾಂಗ್ರೆಸ್ ಕಾರ್ಯಕರ್ತನ ಹತ್ಯೆಗೆ ಕಾರಣರಾದವರನ್ನು ಬಂಧಿಸುವಂತೆ ಆಗ್ರಹಿಸಿ ಖಜುರಾಹೊ ಪೊಲೀಸ್ ಠಾಣೆ ಎದುರು ಪಕ್ಷದ ರಾಜ್ಯಸಭೆ ಸದಸ್ಯ ದಿಗ್ವಿಜಯ್ ಸಿಂಗ್ ಅವರು ಶನಿವಾರ ಧರಣಿ ಆರಂಭಿಸಿದ್ದರು. ಶನಿವಾರ ಇಡೀ ರಾತ್ರಿ ಪೊಲೀಸ್ ಠಾಣೆ ಎದುರು ಧರಣಿ ಕೂತಿದ್ದ ಅವರು ಭಾನುವಾರ ಧರಣಿ ಅಂತ್ಯಗೊಳಿಸಿದರು. ಮಧ್ಯಪ್ರದೇಶ ವಿಧಾನಸಭೆ ಚುನಾವಣೆಯ ಮತದಾನದ ದಿನ ರಾಜ್‌ನಗರ್ ಕ್ಷೇತ್ರದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಘರ್ಷಣೆ ನಡೆದು ಸಲ್ಮಾನ್ ಖಾನ್ ಎಂಬ ಕಾಂಗ್ರೆಸ್ ಕಾರ್ಯಕರ್ತ ಮೃತಪಟ್ಟಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರು ಕ್ರಮ ಕೈಗೊಳ್ಳದಿದ್ದರೆ ರಾಜ್ಯವ್ಯಾಪಿ ಹೋರಾಟ ನಡೆಸಲಾಗುವುದು ಎಂದು ದಿಗ್ವಿಜಯ್ ಅವರು ಎಚ್ಚರಿಕೆ ನೀಡಿದ್ದಾರೆ.
- **ಆರು ಪೊಲೀಸರು ಮೃತ:** ರಾಜಸ್ಥಾನದ ಝುಂಝುನು ಜಿಲ್ಲೆಯಲ್ಲಿ ಆಯೋಜಿಸಲಾಗಿದ್ದ ಪ್ರಧಾನಿ ನರೇಂದ್ರ ಮೋದಿ ಅವರ ಸಾರ್ವಜನಿಕ ಸಭೆ ವೇಳೆ ಭದ್ರತಾ ಕರ್ತವ್ಯಕ್ಕೆ ನಿಯೋಜನೆ ಆಗಿದ್ದ ಪೊಲೀಸರಿದ್ದ ವಾಹನವು ಅಪಘಾತಕ್ಕೀಡಾಗಿ ಆರು ಪೊಲೀಸರು ಮೃತಪಟ್ಟು, ಒಬ್ಬರು ಗಾಯಗೊಂಡಿದ್ದಾರೆ. ಚುರು ಜಿಲ್ಲೆಯಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ 58ರಲ್ಲಿ ಅಪಘಾತ ಸಂಭವಿಸಿದೆ. ಪೊಲೀಸ್ ವಾಹನದಲ್ಲಿ ಒಬ್ಬ ಮಹಿಳಾ ಪೊಲೀಸ್ ಸೇರಿ ಏಳು ಮಂದಿ ಇದ್ದರು. ನಿಂತಿದ್ದ ಟ್ರಕ್‌ಗೆ ವಾಹನ ಡಿಕ್ಕಿ ಹೊಡೆದ ಪರಿಣಾಮ ಈ ಅಪಘಾತ ಸಂಭವಿಸಿದೆ.

'ದಲಿತ ಬಂಧು'ನಲ್ಲಿ ಶೇ 30 ಕಮಿಷನ್'

ಹೈದರಾಬಾದ್ (ಪಿಟಿಐ): ತೆಲಂಗಾಣ ಸರ್ಕಾರದ 'ದಲಿತ ಬಂಧು' ಯೋಜನೆಯಲ್ಲಿ ಬಿಆರ್‌ಎಸ್ ಶಾಸಕರು ಶೇಕಡ 30ರಷ್ಟು ಕಮಿಷನ್ ಸಂಗ್ರಹಿಸಿದ್ದಾರೆ ಎಂದು ಆರೋಪಿಸಿದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಕೆ. ಚಂದ್ರಶೇಖರ ರಾವ್ ನೇತೃತ್ವದ ಸರ್ಕಾರವನ್ನು ಮನೆಗೆ ಕಳುಹಿಸಬೇಕು ಎಂದರು.

ನಾರಾಯಣಪೇಟ್‌ನಲ್ಲಿ ನಡೆದ ರ‍್ಯಾಲಿಯಲ್ಲಿ ಮಾತನಾಡಿದ ನಡ್ಡಾ, 'ಕಾಳೇಶ್ವರಂ ನೀರಾವರಿ ಯೋಜನೆಯು ಕೆಸಿಆರ್ ಅವರಿಗೆ ಎಟಿಎಂ ಆಗಿ ಕಾರ್ಯನಿರ್ವಹಿಸಿತು. ತೆಲಂಗಾಣದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ಯೋಜನೆಯಲ್ಲಿನ ಭ್ರಷ್ಟಾಚಾರದ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರನ್ನು ಜೈಲಿಗೆ ಕಳುಹಿಸಲಾಗುವುದು' ಎಂದರು.

ಮತಗಳಿಗಾಗಿ ರಾವ್ ತುಷ್ಟೀಕರಣದಲ್ಲಿ ತೊಡಗಿದ್ದಾರೆ. ನಿರ್ದಿಷ್ಟ ಸಮುದಾಯದ ಮೀಸಲಾತಿಯನ್ನು ಶೇಕಡ 4ರಿಂದ 12ಕ್ಕೆ ಹೆಚ್ಚಿಸಲು ಪ್ರಸ್ತಾ-ಪಿಸುವುದರ ಜೊತೆಗೆ ಉರ್ದುವನ್ನು 2ನೇ ಅಧಿಕೃತ ಭಾಷೆಯಾಗಿ ಮಾಡಿ ದ್ದಾರೆ. ರಾಜ್ಯದ ದೇವಾಲಯಗಳ ಭೂಮಿಯನ್ನು ಇತರ ಉದ್ದೇಶಗಳಿಗಾಗಿ ಬಳಸಲಾಗುತ್ತಿದೆ ಎಂದು ಅವರು ದೂರಿದರು.

'ದಲಿತ ಬಂಧು ಯೋಜನೆಯಲ್ಲಿ ಬಿಆರ್‌ಎಸ್ ಶಾಸಕರು ಶೇ 30ರಷ್ಟು ಕಮಿಷನ್ ಪಡೆದಿದ್ದಾರೆಯೇ, ಇಲ್ಲವೇ? ಶಾಸಕರು ಶೇಕಡ 30ರಷ್ಟು ಕಡಿತಗೊ-ಳಿಸುತ್ತಿದ್ದಾರೆ ಎಂದು ನೀವು (ಕೆಸಿಆರ್) ಶಾಸಕರ ಸಭೆಯಲ್ಲಿ ಹೇಳಿಲ್ಲವೇ? ಈ ಸರ್ಕಾರವನ್ನು ನವೆಂಬರ್ 30ರಂದು ಮನೆಗೆ ಕಳುಹಿಸಬೇಕು ಮತ್ತು ಬಿಜೆಪಿ ಸರ್ಕಾರವನ್ನು ತರಬೇಕು' ಎಂದು ನಡ್ಡಾ ಹೇಳಿದರು. ತೆಲಂಗಾಣವು ಶೇಕಡ 8.5ರಷ್ಟು ಹಣದುಬ್ಬರದಿಂದ ತತ್ತ-ರಿಸುತ್ತಿದೆ ಮತ್ತು ಇಂಧನ ಬೆಲೆಗಳು ದೇಶದಲ್ಲೇ ಅತಿ ಹೆಚ್ಚು ಎಂದರು.

'ದಲಿತ ಬಂಧು' ಯೋಜನೆಯಡಿ ಪ್ರತಿ ಫಲಾನುಭವಿಗೆ ಅವರ ಆಯ್ಕೆಯ ಯಾವುದೇ ವ್ಯವಹಾರ ಕೈಗೊಳ್ಳಲು ₹10 ಲಕ್ಷದಷ್ಟು ಆರ್ಥಿಕ ಸಹಾಯ ಒದಗಿಸುತ್ತದೆ.

ಪ್ರಧಾನಿ ಮೋದಿ ವಿರುದ್ಧ ಕಾಂಗ್ರೆಸ್ ನಾಯಕ ರಾಹುಲ್ ವಾಗ್ದಾಳಿ

'ಜಾತಿ ಗಣತಿ ನಡೆದರೆ ಭಾರತಾಂಬೆಗೆ ಜಯ'

ಬೂಂದಿ/ದೌಸಾ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು 'ಭಾರತ್ ಮಾತಾ ಕಿ ಜೈ' ಬದಲು 'ಅದಾನಿ ಜಿ ಕಿ ಜೈ' ಎಂಬ ಘೋಷಣೆ ಕೂಗಬೇಕು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಭಾನುವಾರ ವ್ಯಂಗ್ಯವಾಡಿದರು.

ರಾಜಸ್ಥಾನದ ಬೂಂದಿಯಲ್ಲಿ ಚುನಾವಣಾ ರ‍್ಯಾಲಿ ನಡೆಸಿದ ಅವರು, 'ಮೋದಿ ಅವರು ಭಾರತ್ ಮಾತಾ ಕಿ ಜೈ ಎನ್ನುತ್ತಾರೆ. ಆದರೆ 24 ಗಂಟೆಗಳೂ ಅದಾನಿ ಅವರಿಗಾಗಿ ಕೆಲಸ ಮಾಡುತ್ತಾರೆ. ಎರಡು ಹಿಂದೂಸ್ಥಾನಗಳನ್ನು ನಿರ್ಮಿಸಲು ಮೋದಿ ಬಯಸಿದ್ದಾರೆ. ಒಂದು ಅದಾನಿ ಅವರಿಗಾಗಿ ಮತ್ತೊಂದು ಬಡವರಿಗಾಗಿ' ಎಂದರು. ಬಡವರು, ರೈತರು, ಕಾರ್ಮಿಕರೇ 'ಭಾರತ ಮಾತೆ' ಎಂದು ಬಣ್ಣಿಸಿದರು.

ಜಾತಿ ಗಣತಿ ಕುರಿತು ಮಾತನಾಡಿದ ರಾಹುಲ್, 'ಮೋದಿ ಅವರು ಎಂದಿಗೂ ಜಾತಿ ಗಣತಿ ನಡೆಸುವುದಿಲ್ಲ. ಜಾತಿ ಗಣತಿ ನಡೆಸಲು ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ. ರಾಜಸ್ಥಾನದಲ್ಲಿ ಜಾತಿ ಗಣತಿ ನಡೆಸಲು ಈಗಾಗಲೇ ನಾವು ಆದೇಶ ಹೊರಡಿಸಿದ್ದೇವೆ. ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮಾಡುವ ಮೊದಲ ಕೆಲಸ ಜಾತಿ ಗಣತಿ ಪ್ರಕ್ರಿಯೆಗೆ ಚಾಲನೆ ನೀಡುವುದು. ಜಾತಿ ಗಣತಿ ನಡೆಸಿದಾಗಲೇ ಭಾರತ ಮಾತೆಗೆ ಜಯ' ಎಂದರು. ರಾಜಸ್ಥಾನದಲ್ಲಿ ಒಂದುವೇಳೆ ಬಿಜೆಪಿ ಅಧಿಕಾರಕ್ಕೆ ಬಂದರೆ ಸಿಎಂ ಅಶೋಕ್ ಗೆಹಲೋತ್ ಅವರು ಆರಂಭಿಸಿರುವ ಎಲ್ಲಾ ಕಲ್ಯಾಣ ಕಾರ್ಯ-ಕ್ರಮಗಳೂ ಸ್ಥಗಿತಗೊಳ್ಳಲಿವೆ ಎಂದರು.

ರಾಜಸ್ಥಾನದ ದೌಸಾದಲ್ಲಿ ನಡೆದ ಕಾಂಗ್ರೆಸ್‌ನ ಸಾರ್ವಜನಿಕ ಸಭೆ ವೇಳೆ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಸ್ಥಳೀಯರ ಜೊತೆ ಮಾತುಕತೆ ನಡೆಸಿದರು –ಪಿಟಿಐ ಚಿತ್ರ

ದೌಸಾದಲ್ಲಿ ಪ್ರಚಾರ ನಡೆಸಿದ ರಾಹುಲ್, 'ಮೋದಿ ಅವರು ತಾವು ಒಬಿಸಿ ಸಮುದಾಯಕ್ಕೆ ಸೇರಿದವರು ಎಂದು ಹೇಳಿಕೊಳ್ಳುತ್ತಾರೆ. ಆದರೆ, ದೇಶದಲ್ಲಿ ಜಾತಿ ಗಣತಿ ನಡೆಸಬೇಕು ಎಂದು ನಾನು ಸಂಸತ್ತಿನಲ್ಲಿ ಆಗ್ರಹಿಸಿದರೆ ಮಾತು ಬದಲಿಸುತ್ತಾರೆ. ಒಬಿಸಿಗೆ ಸೇರಿದ ಎಷ್ಟು ಮಂದಿ ದೇಶದಲ್ಲಿದ್ದಾರೆ ಎಂದು ನಾನು ಮೋದಿ ಅವರಿಗೆ ಪ್ರಶ್ನೆ ಮಾಡಿದ್ದೆ. ರಾಗ ಬದಲಿಸಿದ ಅವರು, ದೇಶದಲ್ಲಿ ಜಾತಿಯೇ ಇಲ್ಲ. ಇರುವುದೊಂದೇ ಜಾತಿ ಅದು ಬಡವರು ಎಂದಿದ್ದರು. ದೇಶದಲ್ಲಿ ಜಾತಿ ಇಲ್ಲ, ಆದರೆ ಮೋದಿ ಮಾತ್ರ ಒಬಿಸಿ ಸಮುದಾಯಕ್ಕೆ ಸೇರಿದವರು' ಎಂದು ವ್ಯಂಗ್ಯವಾಡಿದರು.

'ಮೋದಿ ಅವರೇ ನೀವು ₹12,000 ಕೋಟಿ ಮೌಲ್ಯದ ವಿಮಾನ ಖರೀದಿಸಿದ್ದೀರಿ, ದಿನಕ್ಕೆ ಮೂರು ಬಾರಿ ಬಟ್ಟೆ ಬದಲಿಸುತ್ತೀರಿ, ₹12 ಕೋಟಿ ಮೌಲ್ಯದ ಕಾರಿನಲ್ಲಿ ಓಡಾಡುತ್ತೀರಿ. ಆದರೆ ಒಬಿಸಿ, ದಲಿತ ಅಥವಾ ಆದಿವಾಸಿ ಸಮುದಾಯಗಳ ಯುವಕರು ತಮ್ಮ ಜನಸಂಖ್ಯೆ ಕುರಿತು ತಿಳಿದುಕೊಳ್ಳ-ಬೇಕು ಎಂದು ಬಯಸಿದರೆ ದೇಶದಲ್ಲಿ ಜಾತಿಯೇ ಇಲ್ಲ ಎನ್ನುತ್ತೀರಿ' ಎಂದರು.

ಉತ್ತರಕಾಶಿಯ ಸಿಲ್ಕ್ಯಾರಾ ಸುರಂಗ ಕುಸಿತ: ಲಂಬಾಕಾರವಾಗಿ ರಂಧ್ರ ಕೊರೆಯಲು ಬಿಆರ್‌ಒ ಸಿಬ್ಬಂದಿ ಸಿದ್ಧತೆ

ಬೆಟ್ಟದ ತುದಿಗೆ ರಸ್ತೆ ನಿರ್ಮಿಸುವ ಕಾರ್ಯ ಚುರುಕು

ಉತ್ತರಕಾಶಿ (ಉತ್ತರಾಖಂಡ) (ಪಿಟಿಐ): ಇಲ್ಲಿನ ಸಿಲ್ಕ್ಯಾರಾ ಸುರಂಗದಲ್ಲಿ ಸಿಲುಕಿರುವ 41 ಮಂದಿ ಕಾರ್ಮಿಕರ ರಕ್ಷಣೆಗಾಗಿ ಭಾನುವಾರವೂ ಕಾರ್ಯಾಚರಣೆ ಮುಂದುವರಿದಿದ್ದು, ಲಂಬಾಕಾರವಾಗಿ ರಂಧ್ರ ಕೊರೆಯುವ ಉದ್ದೇಶದಿಂದ ಸುರಂಗದ ಮೇಲಿನ ಬೆಟ್ಟದ ತುದಿಗೆ ರಸ್ತೆ ನಿರ್ಮಿಸಲಾಗುತ್ತಿದೆ.

ಗಡಿ ರಸ್ತೆ ಸಂಸ್ಥೆಯ (ಬಿಆರ್‌ಒ) ಸಿಬ್ಬಂದಿ ರಸ್ತೆ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದಾರೆ. ಪ್ರಧಾನಿ ಕಾರ್ಯಾಲಯದ ಅಧಿಕಾರಿಗಳು ಸೇರಿದಂತೆ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದಾರೆ ಎಂದು ನಿಯಂತ್ರಣ ಕೊಠಡಿಯ ಅಧಿಕಾರಿಗಳು ತಿಳಿಸಿದ್ದಾರೆ.

ಕಾರ್ಮಿಕರಿಗೆ ಸಾಕಷ್ಟು ಆಹಾರ ಮತ್ತು ಇತರ ಅಗತ್ಯ ವಸ್ತುಗಳನ್ನು ತಲುಪಿಸುವ ಉದ್ದೇಶದಿಂದ ಅವಶೇಷಗಳ ನಡುವೆ 42 ಮೀಟರ್ ದೂರದವರೆಗೆ ದೊಡ್ಡ ವ್ಯಾಸದ ಪೈಪ್‌ಗಳನ್ನು ಅಳವಡಿ-ಸಲಾಗಿದೆ ಎಂದಿದ್ದಾರೆ.

ಕಾರ್ಮಿಕರನ್ನು ಆದಷ್ಟು ಶೀಘ್ರ ಸುರಂಗದಿಂದ ಹೊರತರುವ ಉದ್ದೇಶದಿಂದ ಸಿಲ್ಕ್ಯಾರಾ ಮತ್ತು ಬಾರ್ಕೋಟ್‌ನಲ್ಲಿ ಒಂದು ತುದಿಯಿಂದ ಇನ್ನೊಂದು ತುದಿಗೆ ರಂಧ್ರ ಕೊರೆಯುವ ಮತ್ತು ಸುರಂಗದ ಮೇಲಿನ ಬೆಟ್ಟದಿಂದ ಲಂಬಾಕಾರವಾಗಿ ರಂಧ್ರ ಕೊರೆಯುವ ಕಾರ್ಯತಂತ್ರವನ್ನು ಅನುಸರಿಸಲಾಗು-ತ್ತಿದೆ ಎಂದು ಉತ್ತರಾಖಂಡ ಸರ್ಕಾರದ ವಿಶೇಷ ಕರ್ತವ್ಯ ಅಧಿಕಾರಿ ಭಾಸ್ಕರ್ ಖುಲ್ಬೆ ತಿಳಿಸಿದ್ದಾರೆ.

ಬೆಟ್ಟದ ಮೇಲಿನಿಂದ 330 ಅಡಿಗೂ ಹೆಚ್ಚು ಆಳಕ್ಕೆ ಲಂಬಾಕಾರವಾಗಿ ರಂಧ್ರ ಕೊರೆಯಬೇಕಾಗಿದೆ. ಇದಕ್ಕೆ ಅಗತ್ಯವಿರುವ ಯಂತ್ರಗಳನ್ನು ಬೆಟ್ಟದ ಮೇಲಕ್ಕೆ ಕೊಂಡೊಯ್ಯಲು ರಸ್ತೆ ನಿರ್ಮಾಣ ಕಾರ್ಯ ನಡೆಯುತ್ತಿದೆ ಎಂದೂ ವಿವರಿಸಿದ್ದಾರೆ.

ರಂಧ್ರ ಕೊರೆಯುವ ಯಂತ್ರದಲ್ಲಿ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡ ಪರಿಣಾಮ ಶುಕ್ರವಾರದಿಂದ ರಕ್ಷಣಾ ಕಾರ್ಯಾಚರಣೆ ಸ್ಥಗಿತಗೊಂಡಿತ್ತು. ಬಳಿಕ ಪರ್ಯಾಯ ಕಾರ್ಯಾಚರಣೆ-ಗಾಗಿ ಬಿಆರ್‌ಒ ಮತ್ತು ಇತರ ಸಂಸ್ಥೆಗಳ ಸಿಬ್ಬಂದಿಯನ್ನು ನೇಮಿಸಲಾಗಿತ್ತು ಎಂದು ಮೂಲಗಳು ಹೇಳಿವೆ.

ರಕ್ಷಣಾ ಕಾರ್ಯಾಚರಣೆಯಲ್ಲಿ ಭಾಗಿಯಾಗಿರುವ ಕೇಂದ್ರ ಸಂಸ್ಥೆಗಳ ನಡುವಿನ ಸಮನ್ವಯಕ್ಕಾಗಿ ರಾಷ್ಟ್ರೀಯ ಹೆದ್ದಾರಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮದ (ಎನ್‌ಎಚ್‌ಐ-ಡಿಸಿಎಲ್) ವ್ಯವಸ್ಥಾಪಕ ನಿರ್ದೇಶಕ ಮಹಮೂದ್ ಅಹಮ್ಮದ್ ಅವರನ್ನು ಉಸ್ತುವಾರಿಯಾಗಿ ನೇಮಿಸಲಾಗಿದೆ ಎಂದಿವೆ. ಉತ್ತರಾಖಂಡ ಸರ್ಕಾರವು ನೋಡಲ್ ಅಧಿಕಾರಿಯಾಗಿ ನೀರಜ್ ಖೈರ್ವಾಲ್ ಅವರನ್ನು ನೇಮಕ ಮಾಡಿದೆ.

ಕೇಂದ್ರ ಸರ್ಕಾರದ ಚಾರ್‌ಧಾಮ್ ಸರ್ವಋತು ರಸ್ತೆ ಯೋಜನೆಯಡಿ ಸುರಂಗ ನಿರ್ಮಿಸುತ್ತಿದ್ದ ವೇಳೆ ಭೂಕುಸಿತ ಸಂಭವಿಸಿ ಕಾರ್ಮಿಕರು ಅದರೊಳಗೆ ಸಿಲುಕಿಕೊಂಡಿದ್ದರು.

ಕೇಂದ್ರ ಸಚಿವ ನಿತಿನ್ ಗಡ್ಕರಿ ಮತ್ತು ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ನಿರ್ಮಾಣ ಹಂತದ ಸುರಂಗ ಕುಸಿದ ಸ್ಥಳಕ್ಕೆ ಭಾನುವಾರ ಭೇಟಿ ನೀಡಿ ರಕ್ಷಣಾ ಕಾರ್ಯಾಚರಣೆಯನ್ನು ಪರಿಶೀಲಿಸಿದರು –ಪಿಟಿಐ ಚಿತ್ರ

ಇನ್ನೆರಡು ದಿನಗಳಲ್ಲಿ ರಕ್ಷಣೆ ಸಾಧ್ಯತೆ: ನಿತಿನ್ ಗಡ್ಕರಿ

ಪ್ರಜಾವಾಣಿ ವಾರ್ತೆ

ಡೆಹ್ರಾಡೂನ್: ಎಲ್ಲವೂ ಸುಗಮವಾಗಿ ನಡೆದರೆ ಇನ್ನೆರಡು ದಿನಗಳಲ್ಲಿ ಕಾರ್ಮಿಕರನ್ನು ರಕ್ಷಿಸಲಾಗುವುದು ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಭಾನುವಾರ ತಿಳಿಸಿದ್ದಾರೆ.

ರಂಧ್ರ ಕೊರೆಯುವ ಯಂತ್ರಗಳು ದುರಸ್ತಿಯಾದರೆ ಕಾರ್ಮಿಕರಿರುವ ಸ್ಥಳಕ್ಕೆ ರಕ್ಷಣಾ ಕಾರ್ಯಕರ್ತರು ಮಂಗಳವಾರ ತಲುಪಬಹುದು. ಪರ್ಯಾಯ ಮಾರ್ಗಗಳಲ್ಲೂ ಕಾರ್ಯಾಚರಣೆ ನಡೆಯುತ್ತಿದೆ ಎಂದು ಅವರು ತಿಳಿಸಿದರು. ಸುರಂಗ ಕುಸಿದ ಸ್ಥಳಕ್ಕೆ ಭೇಟಿ ನೀಡಿ ರಕ್ಷಣಾ ಕಾರ್ಯಚರಣೆಯನ್ನು ಪರಿಶೀಲಿಸಿ ಮಾತನಾಡಿದ ಅವರು, ಸುರಂಗದೊಳಗೆ ಸಿಲುಕಿರುವ ಕಾರ್ಮಿಕರಿಗೆ ಆಮ್ಲಜನಕ, ಆಹಾರ, ನೀರು ಮತ್ತು ಔಷಧಗಳನ್ನು ನಿರಂತರವಾಗಿ ಪೈಪ್‌ಗಳ ಮೂಲಕ ಪೂರೈಸಲಾಗುತ್ತಿದೆ. ವಿದ್ಯುತ್ ಸಂಪರ್ಕವನ್ನೂ ಒದಗಿಸಲಾಗಿದೆ' ಎಂದಿದ್ದಾರೆ.

ಹಿಮಾಲಯ ಪ್ರದೇಶದ ಮಣ್ಣಿನ ಪದರಗಳು ಏಕ ರೂಪದಲ್ಲಿಲ್ಲ. ಕೆಲವೆಡೆ ಗಟ್ಟಿಯಾಗಿಯೂ ಇನ್ನು ಕೆಲವೆಡೆ ಮೃದುವಾಗಿಯೂ ಇವೆ. ಈ ಕಾರಣಕ್ಕೆ ರಕ್ಷಣಾ ಕಾರ್ಯಾಚರಣೆ ವಿಳಂಬವಾಗುತ್ತಿದೆ ಎಂದು ವಿವರಿಸಿದ್ದಾರೆ. 'ಏಳು ದಿನಗಳಿಂದ ಕಾರ್ಮಿಕರಿಗೆ ಡ್ರೈಫ್ರೂಟ್ಸ್, ಖಿನ್ನತೆ ಶಮನಕಾರಿ ಔಷಧ ಮೊದಲಾದವುಗಳನ್ನು ಕೂಡ ಪೂರೈ-ಸಲಾಗುತ್ತಿದೆ' ಎಂದು ಹೆದ್ದಾರಿ ಹಾಗೂ ಸಾರಿಗೆ ಸಚಿವಾಲಯದ ಕಾರ್ಯದರ್ಶಿ ಅನುರಾಗ್ ಜೈನ್ ಹೇಳಿದ್ದಾರೆ.

ಇಂದಿನಿಂದ ಪಣಜಿ ವಿಶ್ವ ಸಿನಿಮೋತ್ಸವ

• ಪ್ರೇಮಕುಮಾರ್ ಹರಿಯಬ್ಬೆ

ಪಣಜಿ: ಐವತ್ತನಾಲ್ಕನೆಯ ಭಾರತದ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವಕ್ಕೆ ಕ್ಷಣಗಣನೆ ಆರಂಭವಾಗಿದ್ದರೂ ಸಿದ್ಧತೆಗಳು ಇನ್ನೂ ಪೂರ್ಣಗೊಂಡಿಲ್ಲ. ಹಿಂದಿನ ಹಲವು ವರ್ಷಗಳಿಗೆ ಹೋಲಿಸಿದರೆ ಈ ವರ್ಷ ಚಿತ್ರೋತ್ಸವಕ್ಕೆ ಹೆಚ್ಚಿನ ಉತ್ಸಾಹ ಕಂಡು ಬಂದಿಲ್ಲ.

ಚಿತ್ರೋತ್ಸವದ ಕೇಂದ್ರವಾದ ಪಣಜಿಯ ಐನಾಕ್ಸ್ ಕಾಂಪ್ಲೆಕ್ಸ್‌ನಲ್ಲಿ ಭಾನುವಾರ ಸಂಜೆವರೆಗೂ ಕೊನೆಯ ಹಂತದ ಸಿದ್ದತೆಗಳಲ್ಲಿ ಹಲವಾರು ಕಾರ್ಮಿಕರು ತೊಡಗಿದ್ದರು.

ನ.20 ರಿಂದ 28ರವರೆಗೆ ಚಿತ್ರೋ-ತ್ಸವಕ್ಕಾಗಿ ದೇಶ, ವಿದೇಶಗಳಿಂದ ಬರುವ ಪ್ರತಿನಿಧಿಗಳಿಗೆ ಮತ್ತು ಸ್ಥಳೀಯರಿಗೆ ಜಗತ್ತಿನ ವಿವಿಧ ದೇಶಗಳ 195ಕ್ಕೂ ಹೆಚ್ಚು ಸಿನಿಮಾಗಳನ್ನು ನೋಡುವ ಮತ್ತು ಚರ್ಚಿಸುವ ಅವಕಾಶವಿದೆ.

ಸೋಮವಾರ ಸಂಜೆ (ನ.20) 5 ಗಂಟೆಗೆ ಗೋವಾ ವಿಶ್ವ ವಿದ್ಯಾಲಯದ ಒಳಾಂಗಣ ಕ್ರೀಡಾಂ-ಗಣದಲ್ಲಿ ಚಿತ್ರೋತ್ಸವದ ಉದ್ಘಾಟನೆ ನೆರವೇರಲಿದೆ. ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಸಿಂಗ್ ಠಾಕೂರ್ ಅವರು ದೀಪ ಬೆಳಗಿಸಿ ಚಿತ್ರೋತ್ಸವವನ್ನು ಉದ್ಘಾಟಿಸುವರು. ರಾಜ್ಯಪಾಲ ಶ್ರೀಧರನ್ ಪಿಳ್ಳೈ , ಮುಖ್ಯಮಂತ್ರಿ ಪ್ರಮೋದ್ ಸಾವಂತ್, ಭಾರತೀಯ ಸಿನಿಮಾ ಕಲಾವಿದರಾದ ವಿಜಯ್ ಸೇತುಪತಿ, ಮಾಧುರಿ ದೀಕ್ಷಿತ್, ಪಂಕಜ್ ತ್ರಿಪಾಠಿ, ಸಾರಾ ಅಲಿಖಾನ್, ಸನ್ನಿ ಡಿಯೋಲ್, ಕರಣ್ ಜೋಹರ್, ಶ್ರೇಯಾ ಮತ್ತಿತರರು ಉದ್ಘಾಟನಾ ಸಮಾರಂಭದಲ್ಲಿ ಉಪಸ್ಥಿತರಿರುವರು.

ಸತ್ಯಜಿತ್ ರೇ ಹೆಸರಿನಲ್ಲಿ ನೀಡುವ ಜೀವಮಾನ ಸಾಧನೆ ಪುರಸ್ಕಾರಕ್ಕೆ ಸ್ವೀಕರಿಸಲಿರುವ ಹಾಲಿವುಡ್ ನಟ ಮೈಕೇಲ್ ಡಗ್ಲಾಸ್ ಚಿತ್ರೋತ್ಸವದಲ್ಲಿ ಪಾಲ್ಗೊಳ್ಳುವರು.

ಉದ್ಘಾಟನೆಗೆ ಮೊದಲೇ ಐನಾಕ್ಸ್ ಕಾಂಪ್ಲೆಕ್ಸ್‌ನ ನಾಲ್ಕು ತೆರೆಗಳಲ್ಲಿ ಮಧ್ಯಾಹ್ನ 2.30ಕ್ಕೆ ಬ್ರಿಟಿಷ್ ಸಿನಿಮಾ, ಕ್ಯಾಚಿಂಗ್ ಡಸ್ಟ್ ಪ್ರದರ್ಶನಗೊಳ್ಳ-ಲಿದೆ. ನ.21ರಂದು ಭಾರತೀಯ ಪನೋರಮಾ ವಿಭಾಗದ ಉದ್ಘಾಟನಾ ಚಿತ್ರವಾಗಿ ಅಸ್ಸಾಮಿ ಭಾಷೆಯ ಲಚಿತ್ ಬೋರ್ಪುಕಾನ್ ಪ್ರದರ್ಶನಗೊಳ್ಳಲಿದೆ.

ಇದೇ ವಿಭಾಗದಲ್ಲಿ ಕನ್ನಡದ ಆರಾರಿರಾರೋ ಪ್ರದರ್ಶನಗೊಳ್ಳಲಿವೆ. ಕನ್ನಡದ ಇನ್ನೊಂದು ಚಿತ್ರ ಕಾಂತಾರ ಅಂತರರಾಷ್ಟ್ರೀಯ ಸ್ಪರ್ಧಾ ವಿಭಾಗಕ್ಕೆ ಆಯ್ಕೆಯಾಗಿದೆ.

ಮೂರು ವರ್ಷಗಳಿಂದ ನವೀಕರಣದ ನೆಪದಲ್ಲಿ ಮುಚ್ಚಿದ್ದ ಕಲಾ ಅಕಾಡೆಮಿಯ 900 ಆಸನಗಳ ದೊಡ್ಡ ಆಡಿಟೋರಿಯಂನಲ್ಲಿ ಮಾಸ್ಟರ್ ಕ್ಲಾಸ್ ವಿಭಾಗದ ಚಿತ್ರಗಳು ಪ್ರದ-ರ್ಶನಗೊಳ್ಳಲಿವೆ. ಪಣಜಿ ಐನಾಕ್ಸ್ ಕಾಂಪ್ಲೆಕ್ಸ್‌ನ ಐದು ತೆರೆಗಳು ಮತ್ತು ಸಮೀಪದ ಪೊರ್ವರಿಂನ ಐನಾಕ್ಸ್ ನಾಲ್ಕು ತೆರೆಗಳಲ್ಲದೆ ಗೋವಾದ ಬೀಚುಗಳಲ್ಲಿ ಸಂಜೆಯ ವೇಳೆ ಸಿನಿಮಾಗಳ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ.

ಒತ್ತೆಯಾಳುಗಳ ಬಿಡುಗಡೆಗೆ 5 ದಿನ ಕದನ ಸ್ಥಗಿತ?

ಜೆರುಸಲೆಂ (ರಾಯಿಟರ್ಸ್): ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ ಕೆಲವು ಒತ್ತೆಯಾಳುಗಳನ್ನು ಬಿಡುಗಡೆ ಮಾಡುವುದಕ್ಕಾಗಿ ಐದು ದಿನಗಳ ಮಟ್ಟಿಗೆ ಕದನ ಸ್ಥಗಿತಗೊಳಿಸಲು ಇಸ್ರೇಲ್, ಅಮೆರಿಕ ಹಾಗೂ ಹಮಾಸ್ ತಾತ್ಕಾಲಿಕ ಒಪ್ಪಂದಕ್ಕೆ ಬಂದಿವೆ ಎಂದು ಮೂಲಗಳನ್ನು ಉಲ್ಲೇಖಿಸಿ 'ದಿ ವಾಷಿಂಗ್ಟನ್ ಪೋಸ್ಟ್' ಭಾನುವಾರ ವರದಿ ಮಾಡಿದೆ.

ಈ ಒಪ್ಪಂದ ಪ್ರಕಾರ, ಉಭಯತ್ರರು ಕನಿಷ್ಠ ಐದು ದಿನಗಳವರೆಗೆ ಯುದ್ಧ ಕಾರ್ಯಾಚರಣೆ ಸ್ಥಗಿತಗೊಳಿಸಲಿದ್ದು, ಪ್ರತಿ 24 ಗಂಟೆಗಳಿಗೊಮ್ಮೆ 50 ಅಥವಾ ಅದಕ್ಕಿಂತ ಹೆಚ್ಚಿನ ಒತ್ತೆಯಾಳುಗಳನ್ನು ಗುಂಪುಗಳಲ್ಲಿ ಬಿಡುಗಡೆ ಮಾಡಲಾಗುತ್ತದೆ ಎಂದು ಅದು ವರದಿ ಮಾಡಿದೆ. ಆದರೆ, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮತ್ತು ಅಮೆರಿಕದ ಅಧಿಕಾರಿಗಳು ಒಪ್ಪಂದ ನಡೆದಿಲ್ಲವೆಂದು ಹೇಳಿದ್ದಾರೆ.

ಹಮಾಸ್ ನಾಶಕ್ಕೆ ಕಾರ್ಯಾಚರಣೆ ವಿಸ್ತರಣೆ: ಇಸ್ರೇಲ್ ಸೇನೆ ಘೋಷಣೆ

ಅಲ್ ಶಿಫಾ ಈಗ 'ಸಾವಿನ ವಲಯ': ಡಬ್ಲ್ಯುಎಚ್‌ಒ

ಗಾಜಾ ಪಟ್ಟಿ (ಎಎಫ್‌ಪಿ): ಇಲ್ಲಿನ ಅತಿದೊಡ್ಡ ಚಿಕಿತ್ಸಾ ಕೇಂದ್ರ ಅಲ್ ಶಿಫಾ ಆಸ್ಪತ್ರೆ 'ವಲಯ'ವಾಗಿ ಮಾರ್ಪಟ್ಟಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ) ಕಳವಳ ವ್ಯಕ್ತಪಡಿಸಿದೆ.

ಆಸ್ಪತ್ರೆಯಲ್ಲಿನ ಸೌಲಭ್ಯಗಳನ್ನು ಸ್ಥಳಾಂತರಿಸುವ ಯೋಜನೆಯನ್ನು ಸಹ ಅದು ಪ್ರಕಟಿಸಿದೆ.

ಆಸ್ಪತ್ರೆಯ ಪ್ರವೇಶ ದ್ವಾರದಲ್ಲೇ ಸಾಮೂಹಿಕ ಸಮಾಧಿ ಕಂಡುಬಂದಿದೆ. ಆಸ್ಪತ್ರೆಯಲ್ಲಿ ಇನ್ನೂ 300 ರೋಗಿಗಳು ಮತ್ತು 25 ಆರೋಗ್ಯ ಸಿಬ್ಬಂದಿ ಸಿಲುಕಿದ್ದಾರೆ ಎಂದು ಅದು ಹೇಳಿದೆ.

ಕಳೆದ ಬುಧವಾರ ಇಸ್ರೇಲಿ ಪಡೆಗಳು ನಿಯಂತ್ರಣಕ್ಕೆ ತೆಗೆದುಕೊಂಡಿರುವ ಈ ಆಸ್ಪತ್ರೆಗೆ ಡಬ್ಲ್ಯುಎಚ್‌ಒ ಮತ್ತು ವಿಶ್ವಸಂಸ್ಥೆಯ ಅಧಿಕಾರಿಗಳ ನೇತೃತ್ವದ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಬಹುತೇಕ ಎಲ್ಲ ಚಿಕಿತ್ಸಾ ಕೇಂದ್ರಗಳು ಈಗಾಗಲೇ ತುಂಬಿತುಳುಕುತ್ತಿವೆ. ಗಾಜಾದ ಜನರು ತೀವ್ರ ನೋವು ಅನುಭ-ವಿಸುತ್ತಿದ್ದಾರೆ. ಕದನ ವಿರಾಮವೊಂದೇ ಪರಿಹಾರ. ಗಾಜಾ ಪಟ್ಟಿಯಿಂದ ಸುಮಾರು 16 ಲಕ್ಷ ಜನರು ಸ್ಥಳಾಂತರ-ಗೊಂಡಿದ್ದಾರೆ ಎಂದು ಅದು ಹೇಳಿದೆ.

ಕಾರ್ಯಾಚರಣೆ ವಿಸ್ತರಣೆ: ಹಮಾಸ್ ಸಂಘಟನೆಯ ನಾಶಕ್ಕಾಗಿ ಸೇನಾ ಕಾರ್ಯಾಚರಣೆಯನ್ನು ಮತ್ತಷ್ಟು ತೀವ್ರ-ಗೊಳಿಸಲಾಗುತ್ತಿದೆ ಎಂದು ಇಸ್ರೇಲ್ ಸೇನೆ ಭಾನುವಾರ ಹೇಳಿದೆ.

ಅ.7ರಂದು ಇಸ್ರೇಲಿಗರ ಮೇಲೆ ಹಮಾಸ್ ಭೀಕರ ದಾಳಿ ನಡೆಸಿ ಸುಮಾರು 1,200 ಮಂದಿಯನ್ನು ಕೊಂದು, ಸುಮಾರು 240 ಜನರನ್ನು ಒತ್ತೆ ಇರಿಸಿಕೊಂಡಿದೆ.

ಸಾವಿನ ಸಂಖ್ಯೆ 12,300ಕ್ಕೆ ಏರಿಕೆ: ಇಸ್ರೇಲ್ ಸೇನೆಯ ವೈಮಾನಿಕ ದಾಳಿ ಮತ್ತು ನೆಲದ ಮೇಲಿನ ಕಾರ್ಯಾಚರಣೆಯಲ್ಲಿ ಪ್ಯಾಲೆಸ್ಟೀನ್‌ನ ಸುಮಾರು 12,300 ನಾಗರಿಕರು ಸತ್ತಿದ್ದಾರೆ.

ಗಾಜಾ ಪಟ್ಟಿಯ ಅಲ್ ಶಿಫಾ ಆಸ್ಪತ್ರೆಯಿಂದ ಭಾನುವಾರ ರಫಾದ ಆರೋಗ್ಯ ಕೇಂದ್ರಕ್ಕೆ ಸ್ಥಳಾಂತರಿಸಲಾದ ಅವಧಿ ಪೂರ್ವ ಜನಿಸಿದ ಶಿಶುಗಳ ಆರೈಕೆಯಲ್ಲಿ ಪ್ಯಾಲೆಸ್ಟೀನ್ ವೈದ್ಯಕೀಯ ಸಿಬ್ಬಂದಿ ತೊಡಗಿದ್ದರು– ಎಎಫ್‌ಪಿ ಚಿತ್ರ

ಇಸ್ರೇಲ್–ಹಮಾಸ್ ಸಮರ

'ಇಸ್ರೇಲ್ ಸಂಬಂಧ ಕಡಿತಗೊಳಿಸಿ'

ದುಬೈ (ರಾಯಿಟರ್ಸ್): ಮುಸ್ಲಿಂ ರಾಷ್ಟ್ರಗಳು ಸೀಮಿತ ಅವಧಿಗಾದರೂ ಇಸ್ರೇಲ್ ಜೊತೆಗಿನ ರಾಜಕೀಯ ಸಂಬಂಧವನ್ನು ಕಡಿತಗೊಳಿಸಬೇಕು ಎಂದು ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಅವರು ಭಾನುವಾರ ಕರೆ ನೀಡಿದ್ದಾರೆ.

ವಿಶ್ವದ ಮುಸ್ಲಿಂ ದೇಶಗಳು ಇಸ್ರೇಲ್‌ಗೆ ತೈಲ ಮತ್ತು ಆಹಾರ ರಫ್ತು ಮಾಡುವುದನ್ನು ನಿಲ್ಲಿಸಬೇಕು ಎಂದು ವಾರದ ಹಿಂದೆ ಖಮೇನಿ ಒತ್ತಾಯಿಸಿದ್ದರು. ಆದರೆ ಮುಸ್ಲಿಂ ದೇಶಗಳು ಇದಕ್ಕೆ ಸಮ್ಮತಿ ಸೂಚಿಸಿರಲಿಲ್ಲ.

ವಿಶ್ವಸಂಸ್ಥೆಗೆ ಅವಮಾನ: ಈಜಿಪ್ಟ್

ಪ್ಯಾಲೆಸ್ಟೀನ್ ಪ್ರಾಂತ್ಯದ ಅತಿದೊಡ್ಡ ಜಬಾಲಿಯ ಶಿಬಿರದಲ್ಲಿನ ಶಾಲೆಯೊಂದರಲ್ಲಿ ಮೇಜುಗಳ ನಡುವೆ ರಕ್ತಸಿಕ್ತ ಹಾಸಿಗೆಗಳು, ರಕ್ತ ಕಲೆ ಮತ್ತು ದೂಳುಮೆತ್ತಿದ್ದ ಮೃತದೇಹಗಳು ಬಿದ್ದಿರುವ ದೃಶ್ಯಗಳಿರುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ. ಇದನ್ನು 'ಎಎಫ್‌ಪಿ' ಪರಿಶೀಲಿಸಿ ಖಚಿತಪಡಿಸಿಕೊಂಡಿದೆ. ಈ ದಾಳಿಯ ಬಗ್ಗೆ ಪ್ರತಿಕ್ರಿಯಿಸಿರುವ ಈಜಿಪ್ಟ್, 'ಈ ಬಾಂಬ್ ದಾಳಿ ಇಸ್ರೇಲ್‌ನ ಯುದ್ಧಾಪರಾಧವಾಗಿದ್ದು, ಅದು ಉದ್ದೇಶಪೂರ್ವಕವಾಗಿ ವಿಶ್ವಸಂಸ್ಥೆಗೆ ಅವಮಾನ ಮಾಡುತ್ತಿದೆ' ಎಂದು ಟೀಕಿಸಿದೆ.

ಸಂಸದರ ಹೇಳಿಕೆಗೆ ಆಕ್ಷೇಪ

ಕಾಸರಗೋಡು (ಪಿಟಿಐ): 'ಗಾಜಾ ಪಟ್ಟಿಯಲ್ಲಿ ಯುದ್ಧದ ಮೂಲಕ ಪ್ಯಾಲೆಸ್ಟೀನ್‌ನ ಸಾವಿರಾರು ನಾಗರಿಕರನ್ನು ಕೊಲೆಗೈದಿರುವ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಯುದ್ಧಾಪರಾಧಿಯಾಗಿದ್ದಾರೆ. ಅವರನ್ನು ಯಾವುದೇ ವಿಚಾರಣೆಗೆ ಒಳಪಡಿಸದೆ ಗುಂಡಿಟ್ಟು ಹತ್ಯೆ ಮಾಡಬೇಕಿದೆ' ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಹಾಗೂ ಸಂಸದ ರಾಜ್‌ಮೋಹನ್ ಉಣ್ಣಿತ್ತಾನ್ ನೀಡಿರುವ ಹೇಳಿಕೆಯು ವಿವಾದಕ್ಕೆ ಕಾರಣವಾಗಿದೆ.

ಪ್ಯಾಲೆಸ್ಟೀನ್ ಪರವಾಗಿ ಇತ್ತೀಚೆಗೆ ಯುನೈಟೆಡ್ ಮುಸ್ಲಿಂ ಜಮಾ-ಅತ್ ಹಮ್ಮಿಕೊಂಡಿದ್ದ ಒಗ್ಗಟ್ಟು ಪ್ರದರ್ಶನ ಕಾರ್ಯಕ್ರಮದಲ್ಲಿ ಅವರು ಮಾಡಿರುವ ಭಾಷಣ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಜಿನೀವಾ ಸಮಾವೇಶದ ಒಪ್ಪಂದವನ್ನು ನೆತನ್ಯಾಹು ಉಲ್ಲಂಘಿ-ಸಿದ್ದಾರೆ. ಆ ಮೂಲಕ ಜಗತ್ತಿನ ಮುಂದೆ ಯುದ್ಧಾಪರಾಧಿಯಾಗಿ ನಿಂತಿದ್ದಾರೆ. ಅವರು ಎಸಗಿರುವ ಕೃತ್ಯ ಪರಿಗಣಿಸಿ ಅವರನ್ನು ಹತ್ಯೆ ಮಾಡಬೇಕಿದೆ ಎಂದು ಸಂಸದರು ಹೇಳಿರುವುದು ವಿಡಿಯೊದಲ್ಲಿ ದಾಖಲಾಗಿದೆ.

ಇದಕ್ಕೆ ಪ್ರತಿಕ್ರಿಯಿಸಿರುವ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕೆ. ಸುರೇಂದ್ರನ್, 'ಸಂಸದರ ಮಾತಿನ ಹಿಂದೆ ಭಯೋತ್ಪಾದಕರ ಪರ ಪ್ರಚಾರ ಮಾಡುವ ಉದ್ದೇಶ ಅಡಗಿದೆ. ಹಾಗಾಗಿ, ಅವರ ವಿರುದ್ಧ ಕಾನೂನು ಕ್ರಮಕೈ-ಗೊಳ್ಳಬೇಕಿದೆ' ಎಂದು 'ಎಕ್ಸ್'ನಲ್ಲಿ ಆಗ್ರಹಿಸಿದ್ದಾರೆ.

ಏಕದಿನ ಕ್ರಿಕೆಟ್ ವಿಶ್ವಕಪ್ – 2023

ಟ್ರಾವಿಸ್ ಹೆಡ್ ಶತಕದ ಭರಾಟೆ • ಮಿಂಚಿದ ಸ್ಟಾರ್ಕ್, ಲಾಬುಷೇನ್ • ಐಸಿಸಿ ಟ್ರೋಫಿ ಬರ ನೀಗಿಸಲು ರೋಹಿತ್ ಪಡೆ ವಿಫಲ

ವಿಶ್ವಕಪ್ ಜಯದ ಭಾರತದ ಕನಸು ಭಗ್ನ

• ಗಿರೀಶ ದೊಡ್ಡಮನಿ

ಅಹಮದಾಬಾದ್: ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡವು ವಿಶ್ವಕಪ್ ಹೊತ್ತು ಮೆರೆಯುವುದನ್ನು ನೋಡುವ ಕೋಟ್ಯಂತರ ಅಭಿಮಾನಿಗಳ ಕನಸಿನ ಗೋಪುರ ಕುಸಿಯಿತು. ಆತಿಥೇಯ ತಂಡವು ಯಶಸ್ಸಿನ ಉತ್ತುಂಗದ ಶಿಖರದಿಂದ ಒಂದೇ ಸಲ ಸೋಲಿನ ಪ್ರಪಾತಕ್ಕೆ ಜಾರಿಬಿತ್ತು.

13ನೇ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಅಜೇಯ ಓಟದೊಂದಿಗೆ ಫೈನಲ್‌ಗೆ ಲಗ್ಗೆಯಿಟ್ಟಿದ್ದ ಭಾರತ ತಂಡವು ಭಾನುವಾರ ಮೊಟೇರಾದ ನರೇಂದ್ರ ಮೋದಿ ಕ್ರಿಕೆಟ್ ಅಂಗಳದಲ್ಲಿ ನಡೆದ ಫೈನಲ್‌ನಲ್ಲಿ ಆಸ್ಟ್ರೇಲಿಯಾ ಎದುರು 6 ವಿಕೆಟ್‌ಗಳಿಂದ ಮಣಿಯಿತು. ಅಮೋಘ ಶತಕ ಗಳಿಸಿದ ಟ್ರಾವಿಸ್ ಹೆಡ್ (137; 120ಎ, 4X15, 6X4) ಗೆಲುವಿನ ರೂವಾರಿಯಾದರು.

ಇದರೊಂದಿಗೆ 12 ವರ್ಷಗಳ ನಂತರ ವಿಶ್ವಕಪ್ ಜಯಿಸುವ ಭಾರತದ ಕನಸು ನನಸಾಗಲಿಲ್ಲ. 2003ರ ವಿಶ್ವಕಪ್ ಫೈನಲ್‌ನಲ್ಲಿ ಆಸ್ಟ್ರೇಲಿಯಾ ಎದುರು ಸೋತಿದ್ದ ಸೇಡು ತೀರಿಸಿಕೊಳ್ಳಲೂ ಸಾಧ್ಯವಾಗಲಿಲ್ಲ. ಕಳೆದೊಂದು ದಶಕದಿಂದ ಅನುಭವಿಸುತ್ತಿರುವ ಐಸಿಸಿ ಟ್ರೋಫಿಯ ಬರವೂ ನೀಗಲಿಲ್ಲ.

ಟೂರ್ನಿಯುದ್ದಕ್ಕೂ ಎಲ್ಲ ವಿಭಾಗಗಳಲ್ಲಿಯೂ ಅಮೋಘ ಆಟವಾಡಿದ್ದ ಆತಿಥೇಯ ಬಳಗಕ್ಕೆ ಫೈನಲ್ ಪಂದ್ಯ ಕಬ್ಬಿಣದ ಕಡಲೆಯಾಯಿತು. ಶಿಸ್ತಿನ ಬೌಲಿಂಗ್, ಚುರುಕಾದ ಫೀಲ್ಡಿಂಗ್ ಮತ್ತು ಛಲದ ಆಟದ ಮೂಲಕ ಆಸ್ಟ್ರೇಲಿಯಾ ಆರನೇ ಬಾರಿ ವಿಶ್ವ ಕಿರೀಟ ಧರಿಸಿತು.

ಟಾಸ್ ಗೆದ್ದು ಮೊದಲು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಕಮಿನ್ಸ್ ಯುದ್ಧವನ್ನು ಅರ್ಧ ಗೆದ್ದಂತೆ ನಸುನಕ್ಕಿದ್ದರು. ಅದರ ಮರ್ಮ ನಂತರದ ಆಟದಲ್ಲಿ ತಿಳಿಯಿತು. ಶುಷ್ಕವಾಗಿದ್ದ ಪಿಚ್ ಆರಂಭದಲ್ಲಿ ಬೌಲರ್‌ಗಳಿಗೆ ಮತ್ತು ಮುಸ್ಸಂಜೆಯ ಇಬ್ಬನಿಯಲ್ಲಿ ಮಿಂದು ಬ್ಯಾಟರ್‌ಗಳಿಗೆ ನೆರವು ನೀಡುತ್ತದೆಂಬ ಅವರ ಲೆಕ್ಕಾಚಾರ ಫಲ ನೀಡಿತು. ಮೂರು ವಿಕೆಟ್ ಗಳಿಸಿದ ವೇಗಿ ಮಿಚೆಲ್ ಸ್ಟಾರ್ಕ್, ತಲಾ ಎರಡು ವಿಕೆಟ್ ಕಿತ್ತ ಹ್ಯಾಜಲ್‌ವುಡ್ ಮತ್ತು ಕಮಿನ್ಸ್ ಭಾರತ ತಂಡವನ್ನು 240 ರನ್‌ಗಳಿಗೆ ಕಟ್ಟಿಹಾಕಿದರು.

ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ ತಂಡವೂ ಆರಂಭದಲ್ಲಿ ಆಘಾತ ಅನುಭವಿಸಿತು. ಜಸ್‌ಪ್ರೀತ್ ಬೂಮ್ರಾ (43ಕ್ಕೆ2) ಮತ್ತು ಮೊಹಮ್ಮದ್ ಶಮಿ(47ಕ್ಕೆ1) ಅವರ ದಾಳಿಯಿಂದಾಗಿ ಕೇವಲ 47 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತ್ತು.

ಆದರೆ ಟ್ರಾವಿಸ್ ಹೆಡ್ ಈ ಆತಂಕವನ್ನು ದೂರ ಮಾಡಿದರು. ಮಾರ್ನಸ್ ಲಾಬುಷೇನ್ (58; 110ಎ) ಅವರೊಂದಿಗೆ ತಾಳ್ಮೆಯ ಜೊತೆಯಾಟವಾಡಿದರು. ನಾಲ್ಕನೇ ವಿಕೆಟ್‌ಗೆ 192 ರನ್ ಸೇರಿಸಿ ತಂಡಕ್ಕೆ ಗೆಲುವಿನ ಕಾಣಿಕೆ ನೀಡಿದರು. 43 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 241 ರನ್ ಗಳಿಸಿ ಗೆದ್ದಿತು.

ಹಾಗೆ ನೋಡಿದರೆ; ಭಾರತ ತಂಡವು ಸಾಧಾರಣ ಮೊತ್ತ ಗಳಿಸಲೂ ಟ್ರಾವಿಸ್ ಹೆಡ್ ಅವರ ಅಮೋಘ ಫೀಲ್ಡಿಂಗ್ ಕಾರಣವಾಗಿತ್ತು.

ಗ್ಲೆನ್ ಮ್ಯಾಕ್ಸ್‌ವೆಲ್ ಹಾಕಿದ್ದ 10ನೇ ಓವರ್‌ನಲ್ಲಿ ರೋಹಿತ್ ಶರ್ಮಾ ಹತ್ತು ರನ್ ಗಳಿಸಿದ್ದರೂ, ಅನಗತ್ಯವಾದ ದೊಡ್ಡ ಹೊಡೆತವಾಡಿದರು. ಪಾಯಿಂಟ್ ಮತ್ತು ಕವರ್ಸ್ ಮಧ್ಯದಲ್ಲಿದ್ದ ಹೆಡ್ ಅವರು ಮಿಡ್ ಆನ್‌ನತ್ತ ಓಡಿ ಹೋಗಿ ಡೈವ್ ಮಾಡಿ ಕ್ಯಾಚ್ ಪಡೆದರು. ಇದು ಭಾರತದ ರನ್ ಗಳಿಕೆಗೆ ದೊಡ್ಡ ಪೆಟ್ಟುಕೊಟ್ಟಿತು.

ಕಳೆದ ಎಲ್ಲ ಪಂದ್ಯಗಳಂತೆ ಇಲ್ಲಿಯೂ ರೋಹಿತ್ (47 ರನ್) ಉತ್ತಮ ಲಯದಲ್ಲಿದ್ದರು. ಮೂರು ಸಿಕ್ಸರ್ ಮತ್ತು ನಾಲ್ಕು ಬೌಂಡರಿ ಹೊಡೆದು ಬೌಲರ್‌ಗಳ ಬೆವರಿಳಿಸಿದ್ದರು. ಶುಭಮನ್ ಗಿಲ್ ಬೇಗ ಔಟಾದಾಗ ಕೊಹ್ಲಿ ಅವರೊಂದಿಗೆ 46 ರನ್‌ಗಳ ಜೊತೆಯಾಟವಾಡಿದ್ದರು. 151ರ ಸ್ಟ್ರೈಕ್‌ರೇಟ್‌ನಲ್ಲಿ ಅವರು ಆಡಿದರು. ರೋಹಿತ್ ಔಟಾದ ನಂತರ ಭಾರತದ ಇನಿಂಗ್ಸ್‌ನಲ್ಲಿ ಒಂದೂ ಸಿಕ್ಸರ್ ದಾಖಲಾಗಲಿಲ್ಲ. ಬೌಂಡರಿಗಳೂ ವಿರಳವಾದವು.

ಕಮಿನ್ಸ್ ತಂತ್ರಗಾರಿಕೆ: 'ಈ ಬೃಹತ್ ಕ್ರೀಡಾಂಗಣದಲ್ಲಿ ಸೇರುವ ಅಪಾರ ಸಂಖ್ಯೆಯ ಹೆಚ್ಚು ಪ್ರೇಕ್ಷಕರನ್ನು ಸ್ತಬ್ಧಗೊಳಿಸುವುದು ನಮ್ಮ ಗುರಿ' ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಆಸ್ಟ್ರೇಲಿಯಾ ನಾಯಕ ಪ್ಯಾಟ್ ಕಮಿನ್ಸ್ ಹೇಳಿದ್ದರು. ಅದರಂತೆ ತಮ್ಮ ಗುರಿಯನ್ನು ಸಾಧಿಸಿದರು.

ಟೂರ್ನಿಯಲ್ಲಿ ಎರಡು ಶತಕ ಹೊಡೆದು ಅಮೋಘ ಲಯದಲ್ಲಿದ್ದ ಶ್ರೇಯಸ್ ಅಯ್ಯರ್ ಅವರ ವಿಕೆಟ್ ಕಬಳಿಸಿದ ಪ್ಯಾಟ್ ಸಂಭ್ರಮಿಸಿದರು. ರೋಹಿತ್ ಔಟಾಗಿ ಐದು ಎಸೆತಗಳ ಅಂತರದಲ್ಲಿ ಅಯ್ಯರ್ ಔಟಾಗಿದ್ದು ದೊಡ್ಡ ಪೆಟ್ಟಾಯಿತು.

ವಿಕೆಟ್ ಉಳಿಸಿಕೊಳ್ಳಲು ಕೆ.ಎಲ್. ರಾಹುಲ್ ಜೊತೆಗೆ ವಿರಾಟ್ ತಾಳ್ಮೆಯ ಜೊತೆಯಾಟವಾಡಿದರು. ಬೌಲರ್‌ಗಳ ಶಿಸ್ತಿನ ದಾಳಿಯ ಮುಂದೆ ಒಂದು ಮತ್ತು ಎರಡು ರನ್‌ಗಳಿಗೆ ಮಾತ್ರ ಮಹತ್ವ ಕೊಟ್ಟರು. ಒಂದು ಹಂತದಲ್ಲಿ 94 ಎಸೆತಗಳವರೆಗೆ ಬೌಂಡರಿಯನ್ನೇ ಗಳಿಸಿರಲಿಲ್ಲ. ರಾಹುಲ್ ಕೂಡ ತಮ್ಮ ಇನಿಂಗ್ಸ್‌ನಲ್ಲಿ ಕೇವಲ ಒಂದು ಬೌಂಡರಿ ಹೊಡೆದರು.

ತಾಳ್ಮೆಯ ಜೊತೆಯಾಟವಾಡುತ್ತಿದ್ದ ವಿರಾಟ್ ಕೊಹ್ಲಿ ಅವರಿಗೂ ಕಮಿನ್ಸ್ ಆಘಾತ ನೀಡಿದರು. 29ನೇ ಓವರ್‌ನಲ್ಲಿ ಕಮಿನ್ಸ್ ಎಸೆತವು ವಿರಾಟ್ ಸ್ಟಂಪ್ ಎಗರಿಸಿದಾಗ ಇಡೀ ಮೈದಾನವು ಗರಬಡಿದಂತೆ ಸ್ತಬ್ಧವಾಗಿ ಹೋಯಿತು. ಕ್ರೀಸ್‌ಗೆ ಬಂದ ರವೀಂದ್ರ ಜಡೇಜ 22 ಎಸೆತಗಳಲ್ಲಿ 9 ರನ್ ಗಳಿಸಿದರು. ಅವರು ಔಟಾದ ನಂತರ ಬಂದ ಸೂರ್ಯಕುಮಾರ್ ಯಾದವ್ ಅವರು ರಾಹುಲ್ ಜೊತೆಗೆ ಸೇರಿ ಮೊತ್ತವನ್ನು 200 ರನ್‌ಗಳ ಗಡಿ ದಾಟಿಸಿದರು. ಕೊನೆಯಲ್ಲಿ ಕುಲದೀಪ್ ಯಾದವ್ ಮತ್ತು ಸಿರಾಜ್ ಕೂಡ ಒಂದಿಷ್ಟು ರನ್‌ಗಳ ಕಾಣಿಕೆ ಕೊಟ್ಟರು.

ನಂತರದ ಇನಿಂಗ್ಸ್‌ನಲ್ಲಿಯೂ ಆಸ್ಟ್ರೇಲಿಯಾದ ಮೂರು ವಿಕೆಟ್ ಪತನವಾಗುವವರೆಗೂ ಪ್ರೇಕ್ಷಕರ ವಲಯದಲ್ಲಿ ಸಂಭ್ರಮದ ಅಲೆಯಿತ್ತು. ಆದರೆ ಹೆಡ್ ಆಟ ರಂಗೇರುತ್ತಿದ್ದಂತೆ, ಗ್ಯಾಲರಿಗಳು ನಿಧಾನವಾಗಿ ಖಾಲಿಯಾದವು.

ಫೈನಲ್‌ನಲ್ಲಿ ಶತಕ ಬಾರಿಸಿದವರು

- **1975:** ಕ್ಲೈವ್ ಲಾಯ್ಡ್ (ವೆಸ್ಟ್ ಇಂಡೀಸ್) **102** (85ಎ)
- **1979:** ವಿವ್ ರಿಚರ್ಡ್ಸ್ (ವೆಸ್ಟ್ ಇಂಡೀಸ್) **138*** (157)
- **1996:** ಅರವಿಂದ ಡಿ ಸಿಲ್ವ (ಶ್ರೀಲಂಕಾ) **107*** (124)
- **2003:** ರಿಕಿ ಪಾಂಟಿಂಗ್ (ಆಸ್ಟ್ರೇಲಿಯಾ) **140*** (121)
- **2007:** ಆ್ಯಡಂ ಗಿಲ್‌ಕ್ರಿಸ್ಟ್ (ಆಸ್ಟ್ರೇಲಿಯಾ) **149** (104)
- **2011:** ಮಹೇಲ ಜಯವರ್ಧನ (ಶ್ರೀಲಂಕಾ) **103** (88)
- **2023:** ಟ್ರಾವಿಸ್ ಹೆಡ್ (ಆಸ್ಟ್ರೇಲಿಯಾ) **137** (120)

₹33 ಕೋಟಿ ಚಾಂಪಿಯನ್ ತಂಡಕ್ಕೆ ದೊರೆತ ಬಹುಮಾನ

ಏಕದಿನ ವಿಶ್ವಕಪ್ ಜಯಿಸಿದ ಆಸ್ಟ್ರೇಲಿಯಾ ಆಟಗಾರರ ಸಂಭ್ರಮ –ಎಎಫ್‌ಪಿ ಚಿತ್ರ

ಭಾರತ ತಂಡದ ನಾಯಕ ರೋಹಿತ್ ಶರ್ಮಾ ನಿರಾಸೆ (ಎಡಚಿತ್ರ) ಪ್ರಧಾನಿ ನರೇಂದ್ರ ಮೋದಿ ಅವರು ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ ಅವರಿಗೆ ಟ್ರೋಫಿ ಹಸ್ತಾಂತರಿಸಿದರು. ಆಸ್ಟ್ರೇಲಿಯಾ ಉಪಪ್ರಧಾನಿ ರಿಚರ್ಡ್ ಮಾರ್ಲೆಸ್ ಇದ್ದಾರೆ –ಎಎಫ್‌ಪಿ ಚಿತ್ರ

ಟ್ರಾವಿಸ್ ಹೆಡ್ ಶತಕ ಸಂಭ್ರಮ



ವಿಶ್ವಕಪ್ ವಿಜೇತರು

ವರ್ಷ	ಚಾಂಪಿಯನ್	ರನ್ನರ್ಸ್ ಅಪ್
1975	ವೆಸ್ಟ್ ಇಂಡೀಸ್	ಆಸ್ಟ್ರೇಲಿಯಾ
1979	ವೆಸ್ಟ್ ಇಂಡೀಸ್	ಇಂಗ್ಲೆಂಡ್
1983	ಭಾರತ	ವೆಸ್ಟ್ ಇಂಡೀಸ್
1987	ಆಸ್ಟ್ರೇಲಿಯಾ	ಇಂಗ್ಲೆಂಡ್
1992	ಪಾಕಿಸ್ತಾನ	ಇಂಗ್ಲೆಂಡ್
1996	ಶ್ರೀಲಂಕಾ	ಆಸ್ಟ್ರೇಲಿಯಾ
1999	ಆಸ್ಟ್ರೇಲಿಯಾ	ಪಾಕಿಸ್ತಾನ
2003	ಆಸ್ಟ್ರೇಲಿಯಾ	ಭಾರತ
2007	ಆಸ್ಟ್ರೇಲಿಯಾ	ಶ್ರೀಲಂಕಾ
2011	ಭಾರತ	ಶ್ರೀಲಂಕಾ
2015	ಆಸ್ಟ್ರೇಲಿಯಾ	ನ್ಯೂಜಿಲೆಂಡ್
2019	ಇಂಗ್ಲೆಂಡ್	ನ್ಯೂಜಿಲೆಂಡ್
2023	ಆಸ್ಟ್ರೇಲಿಯಾ	ಭಾರತ

ಹೆಚ್ಚು ವಿಕೆಟ್ ಪಡೆದವರು

ಬೌಲರ್	ಒಟ್ಟು ವಿಕೆಟ್	ಶ್ರೇಷ್ಠ ಸಾಧನೆ
ಮೊಹಮ್ಮದ್ ಶಮಿ (ಭಾರತ)	24	57ಕ್ಕೆ7
ಆ್ಯಡಮ್ ಜಂಪಾ (ಆಸ್ಟ್ರೇಲಿಯಾ)	23	8ಕ್ಕೆ4
ದಿಲ್ಶಾನ್ ಮಧುಶಂಕಾ (ಶ್ರೀಲಂಕಾ)	21	80ಕ್ಕೆ5
ಜಸ್‌ಪ್ರೀತ್ ಬೂಮ್ರಾ (ಭಾರತ)	20	39ಕ್ಕೆ4
ಜೆರಾಲ್ಡ್ ಕೋಜಿ (ದಕ್ಷಿಣ ಆಫ್ರಿಕಾ)	20	44ಕ್ಕೆ4

ಹೆಚ್ಚು ರನ್ ಗಳಿಸಿದವರು

ಬ್ಯಾಟರ್	ಒಟ್ಟು ರನ್	ಗರಿಷ್ಠ	ಶತಕ	ಅರ್ಧಶತಕ
ವಿರಾಟ್ ಕೊಹ್ಲಿ (ಭಾರತ)	765	117	3	6
ರೋಹಿತ್ ಶರ್ಮಾ (ಭಾರತ)	597	131	1	3
ಕ್ವಿಂಟನ್ ಡಿ ಕಾಕ್ (ದ.ಆಫ್ರಿಕಾ)	594	174	4	-
ರಚಿನ್ ರವೀಂದ್ರ (ನ್ಯೂಜಿಲೆಂಡ್)	578	123	3	2
ಡೆರಿಲ್ ಮಿಚೆಲ್ (ನ್ಯೂಜಿಲೆಂಡ್)	552	134	2	2

ಸ್ಕೋರ್ ಕಾರ್ಡ್

ಭಾರತ 240 (50 ಓವರ್‌ಗಳಲ್ಲಿ)
ರೋಹಿತ್ ಸಿ ಹೆಡ್ ಬಿ ಮ್ಯಾಕ್ಸ್‌ವೆಲ್ 47 (31ಎ, 4X4, 6X3)
ಗಿಲ್ ಸಿ ಜಂಪಾ ಬಿ ಸ್ಟಾರ್ಕ್ 4 (7ಎ)
ಕೊಹ್ಲಿ ಬಿ ಕಮಿನ್ಸ್ 54 (63ಎ, 4X4)
ಶ್ರೇಯಸ್ ಸಿ ಇಂಗ್ಲಿಷ್ ಬಿ ಕಮಿನ್ಸ್ 4 (3ಎ, 4X1)
ರಾಹುಲ್ ಸಿ ಇಂಗ್ಲಿಷ್ ಬಿ ಸ್ಟಾರ್ಕ್ 66 (107ಎ, 4X1)
ಜಡೇಜ ಸಿ ಇಂಗ್ಲಿಷ್ ಬಿ ಹ್ಯಾಜಲ್‌ವುಡ್ 9 (22ಎ)
ಸೂರ್ಯಕುಮಾರ್ ಸಿ ಇಂಗ್ಲಿಷ್ ಬಿ ಹ್ಯಾಜಲ್‌ವುಡ್ 9 (22ಎ)
ಶಮಿ ಸಿ ಇಂಗ್ಲಿಷ್ ಬಿ ಸ್ಟಾರ್ಕ್ 6 (10ಎ, 4X1)
ಬೂಮ್ರಾ ಎಲ್‌ಬಿಡಬ್ಲ್ಯು ಬಿ ಜಂಪಾ 1 (3ಎ)
ಕುಲದೀಪ್ ರನ್‌ಔಟ್ (ಲಾಬುಷೇನ್/ಕಮಿನ್ಸ್) 10 (18ಎ)
ಸಿರಾಜ್ ಔಟಾಗದೆ 9 (8ಎ, 4X1)
ಇತರೆ: 12 (ಲೆಗ್‌ಬೈ 3, ವೈಡ್ 9)
ವಿಕೆಟ್ ಪತನ: 1-30 (ಶುಭಮನ್ ಗಿಲ್; 4.2), 2-76 (ರೋಹಿತ್ ಶರ್ಮಾ; 9.4), 3-81 (ಶ್ರೇಯಸ್ ಅಯ್ಯರ್; 10.2), 4-148 (ವಿರಾಟ್ ಕೊಹ್ಲಿ; 28.3), 5-178 (ರವೀಂದ್ರ ಜಡೇಜ; 35.5), 6-203 (ಕೆ.ಎಲ್. ರಾಹುಲ್; 41.3), 7-211 (ಮೊಹಮ್ಮದ್ ಶಮಿ; 43.4), 8-214 (ಜಸ್‌ಪ್ರೀತ್ ಬೂಮ್ರಾ; 44.5), 9-226 (ಸೂರ್ಯಕುಮಾರ್ ಯಾದವ್; 47.3), 10-240 (ಕುಲದೀಪ್ ಯಾದವ್; 49.6)
ಬೌಲಿಂಗ್: ಮಿಚೆಲ್ ಸ್ಟಾರ್ಕ್ 10-0-55-3, ಜೋಷ್ ಹ್ಯಾಜಲ್‌ವುಡ್ 10-0-60-2, ಗ್ಲೆನ್ ಮ್ಯಾಕ್ಸ್‌ವೆಲ್ 6-0-35-1, ಪ್ಯಾಟ್ ಕಮಿನ್ಸ್ 10-0-34-2, ಆ್ಯಡಂ ಜಂಪಾ 10-0-44-1, ಮಿಚೆಲ್ ಮಾರ್ಷ್ 2-0-5-0, ಟ್ರಾವಿಸ್ ಹೆಡ್ 2-0-4-0

ಆಸ್ಟ್ರೇಲಿಯಾ: 4ಕ್ಕೆ241 (43 ಓವರುಗಳಲ್ಲಿ)
ವಾರ್ನರ್ ಸಿ ಕೊಹ್ಲಿ ಬಿ ಶಮಿ 7 (3ಎ, 4x1)
ಹೆಡ್ ಸಿ ಗಿಲ್ ಬಿ ಸಿರಾಜ್ 137 (120ಎ, 4x15, 6x4)
ಮಾರ್ಷ್ ಸಿ ರಾಹುಲ್ ಬಿ ಬೂಮ್ರಾ 15 (15ಎ, 4x1, 6x1,)
ಸ್ಮಿತ್ ಎಲ್‌ಬಿಡಬ್ಲ್ಯು ಬಿ ಬೂಮ್ರಾ 4 (9ಎ, 4x1)
ಲಾಬುಷೇನ್ ಔಟಾಗದೇ 58 (110ಎ, 4X4)
ಮ್ಯಾಕ್ಸ್‌ವೆಲ್ ಔಟಾಗದೇ 2 (1ಎ)
ಇತರೆ: 18 (ಬೈ 5, ಲೆಗ್‌ಬೈ 2, ವೈಡ್ 11)
ವಿಕೆಟ್ ಪತನ: 1-16 (ಡೇವಿಡ್ ವಾರ್ನರ್, 1.1), 2-41 (ಮಿಚೆಲ್ ಮಾರ್ಷ್, 4.3), 3-47 (ಸ್ಟೀವ್ ಸ್ಮಿತ್, 6.6), 4-239 (ಟ್ರಾವಿಸ್ ಹೆಡ್;42.5)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 9-2-43-2; ಮೊಹಮ್ಮದ್ ಶಮಿ 7-1-47-1; ರವೀಂದ್ರ ಜಡೇಜ 10-0-43-0; ಕುಲದೀಪ್ ಯಾದವ್ 10-0-56-0; ಮೊಹಮ್ಮದ್ ಸಿರಾಜ್ 7-0-45-1
ಪಂದ್ಯದ ಆಟಗಾರ: ಟ್ರಾವಿಸ್ ಹೆಡ್
ಟೂರ್ನಿಯ ಶ್ರೇಷ್ಠ ಆಟಗಾರ: ವಿರಾಟ್ ಕೊಹ್ಲಿ

ಫಲಿತಾಂಶ: ಆಸ್ಟ್ರೇಲಿಯಾಕ್ಕೆ 6 ವಿಕೆಟ್ ಗೆಲುವು

ಮೋದಿ ಕ್ರೀಡಾಂಗಣದಲ್ಲಿ ನೀಲಿ ಸಮುದ್ರ

ವಿಶ್ವಕಪ್ ಫೈನಲ್ ಪಂದ್ಯ ನಡೆದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನೀಲಿ ಸಮುದ್ರ ಭೋರ್ಗರೆಯಿತು.

ಲಕ್ಷಕ್ಕೂ ಅಧಿಕ ಪ್ರೇಕ್ಷಕರ ಸಾಮರ್ಥ್ಯದ ಗ್ಯಾಲರಿಗಳೆಲ್ಲವೂ ನೀಲಿಮಯವಾಗಿದ್ದವು. ಭಾರತ ತಂಡದ ಅಭಿಮಾನಿಗಳು ನೀಲಿ ಪೋಷಾಕುಗಳನ್ನು (ಆತಿಥೇಯ ಆಟಗಾರರ ಸಮವಸ್ತ್ರ) ಧರಿಸಿ ಬಂದಿದ್ದರು. ಅಷ್ಟೇ ಅಲ್ಲ. ಕ್ರೀಡಾಂಗಣಕ್ಕೆ ಬಂದು ಸೇರುವ ರಸ್ತೆಗಳಲ್ಲಿಯೂ ನೀಲಿ ಪೋಷಾಕುಗಳನ್ನು ತೊಟ್ಟ ಜನರು ಸಾಗರೋಪಾದಿಯಲ್ಲಿ ಸಾಗಿ ಬಂದರು. ಮೈದಾನದೊಳಗಿದ್ದಷ್ಟೇ ಸಂಖ್ಯೆಗಿಂತಲೂ ಹೆಚ್ಚು ಮಂದಿ ಹೊರಗೂ ಇದ್ದರು.

ಯಾರು ಏನೆಂದರು....

'ರೋಹಿತ್ ಶರ್ಮಾ ಬಹುಶಃ ವಿಶ್ವದಲ್ಲೇ ದುರದೃಷ್ಟಶಾಲಿ ವ್ಯಕ್ತಿ. ನಾನು ಆ ಕ್ಯಾಚಿಗೆ ತುಂಬಾ ಶ್ರಮಹಾಕಿದ್ದೆ. ಆದರೆ ಅದನ್ನು ಹಿಡಿಯುವೆನೆಂದು ಯೋಚಿಸಿಯೇ ಇರಲಿಲ್ಲ. ಅದೊಂದು ಅವಿಸ್ಮರಣೀಯ ಕ್ಷಣ...'
ಡೈವ್ ಮಾಡಿ ಹಿಡಿದ ಕ್ಯಾಚ್ ಬಗ್ಗೆ ಹೆಡ್

'ಇಂದು ನಾವು ಸಾಧಿಸಿರುವುದು ನಂಬಲಸಾಧ್ಯವಾದುದು. ನಾನು ಭಾಗವಾಗಿರುವ ಅತ್ಯುತ್ತಮ ಸಾಧನೆಯಿದು. ಭಾರತ ಟೂರ್ನಿಯಲ್ಲೇ ಅಮೋಘವಾಗಿ ಆಡಿದ ತಂಡವಾಗಿತ್ತು. ಆದರೆ ಅತ್ಯುತ್ತಮ ಕ್ರಿಕೆಟ್ ಆಡಿದರೆ ನಮಗೂ ಅವಕಾಶವಿರುತ್ತದೆ ಎಂಬುದು ನಿಜವಾಯಿತು.
ಲಾಬುಷೇನ್, ಆಸ್ಟ್ರೇಲಿಯಾ ಆಟಗಾರ

'ಇದು ಸಣ್ಣ ವಿಷಯವಿರಬಹುದು. ಆದರೆ ಮೊಹಮ್ಮದ್ ಸಿರಾಜ್ ಬದಲು ಮೊಹಮ್ಮದ್ ಶಮಿ ಅವರನ್ನು ಹೊಸ ಚೆಂಡಿನೊಡನೆ ದಾಳಿಗಿಳಿಸಿದ್ದೇಕೆ ಎಂಬುದನ್ನು ಕೇಳಬಯಸುವೆ. ಅದು ಭಾರತದ ಯಶಸ್ಸಿನ ನೀಲನಕ್ಷೆಯಾಗಿತ್ತು. ಶಮಿ ಬೌಲಿಂಗ್ ಆರಂಭಿಸುವುದೇ ಆಗಿದ್ದರೆ, ಸಿರಾಜ್ ಬದಲು ಅಶ್ವಿನ್ ಅವರನ್ನು ಆಡಿಸಬಹುದಿತ್ತು.
ಮೈಕೆಲ್ ವಾನ್
ಬಿಬಿಸಿ ವೀಕ್ಷಕ ವಿವರಣೆಗಾರ, ಇಂಗ್ಲೆಂಡ್ ತಂಡದ ಮಾಜಿ ನಾಯಕ

ಆತಿಥೇಯ ಆಟಗಾರರ ಕಣ್ಣೀರು

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಮೋಟೆರಾದ ಕ್ರೀಡಾಂಗಣದಲ್ಲಿ ಒಂದೆಡೆ ಆಸ್ಟ್ರೇಲಿಯಾದ ಆಟಗಾರರು ಮತ್ತು ಗ್ಯಾಲರಿಯಲ್ಲಿದ್ದ ಹಳದಿ ಪೋಷಾಕು ಧರಿಸಿದ್ದ ಬೆರಳೆಣಿಕೆಯಷ್ಟು ಅಭಿಮಾನಿಗಳು ಕುಣಿದು ಕುಪ್ಪಳಿಸಿದರು.

ಅದೇ ಇನ್ನೊಂದೆಡೆ; ಆತಿಥೇಯ ಭಾರತ ತಂಡದ ಆಟಗಾರರು ಮತ್ತು 90 ಸಾವಿರಕ್ಕೂ ಹೆಚ್ಚು ಅಭಿಮಾನಿಗಳು ಕಣ್ಣೀರಲ್ಲಿ ಮುಳುಗಿದರು. ಈ ಬಾರಿಯ ವಿಶ್ವಕಪ್ ಟೂರ್ನಿಯ ಪ್ರತಿಯೊಂದು ಪಂದ್ಯದಲ್ಲಿ ಭಾರತ ತಂಡವು ಗೆಲುವಿನಿಂದ ಸಂಭ್ರಮಿಸಿದ್ದನ್ನೇ ನೋಡಿದ್ದ ಅಭಿಮಾನಿಗಳಿಗೆ ಈ ಸೋಲು ಅರಗಿಸಿಕೊಳ್ಳುವುದು ಕಷ್ಟವಾಯಿತು. ಪರಸ್ಪರ ಅಪ್ಪಿಕೊಂಡು ಬಿಕ್ಕಳಿಸಿದರು. ಭಾರವಾದ ಹೆಜ್ಜೆ ಹಾಕುತ್ತ ಹೊರನಡೆದರು.

ಆಟಗಾರರ ಕತೆಯೂ ಇದಕ್ಕಿಂತ ಭಿನ್ನವಾಗಿಯೇನೂ ಇರಲಿಲ್ಲ. ಆಸ್ಟ್ರೇಲಿಯಾ ವಿಜಯದ ರನ್ ಹೊಡೆಯುತ್ತಿದ್ದಂತೆ ಭಾರತದ ಆಟಗಾರರ ಕಣ್ಣಾಲಿಗಳು ತುಂಬಿದ್ದವು. ರೋಹಿತ್ ಶರ್ಮಾ ತಲೆ ತಗ್ಗಿಸಿಕೊಂಡೇ ಪೆವಿಲಿಯನ್‌ನತ್ತ ಹೊರಟರು. ಸಿರಾಜ್ ಅವರನ್ನು ಬೂಮ್ರಾ ಸಮಾಧಾನ ಪಡಿಸುತ್ತಾ ತಮ್ಮ ಕಣ್ಣುಗಳನ್ನೂ ಒರೆಸಿಕೊಂಡರು. ವಿರಾಟ್ ಮುಖದಲ್ಲಿಯೂ ಜೀವಕಳೆ ಬತ್ತಿಹೋಗಿತ್ತು. ರಾಹುಲ್ ಕುಸಿದು ಕುಳಿತಿದ್ದರು.

ಇದರ ನಡುವೆಯೇ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮೈಕ್ ಮುಂದೆ ಬಂದು ನಿಂತ ರೋಹಿತ್, 'ಇವತ್ತಿನ ದಿನದಲ್ಲಿ ನಾವು ನಿರೀಕ್ಷಿಸಿದಷ್ಟು ಚೆನ್ನಾಗಿ ಆಡಲಿಲ್ಲ. ಇನ್ನೂ 20-30 ರನ್‌ಗಳನ್ನು ಹೆಚ್ಚು ಗಳಿಸಿದ್ದರೆ ಚೆನ್ನಾಗಿತ್ತು' ಎಂದರು.

'280 ರನ್‌ಗಳ ಗುರಿಯನ್ನು ಒಡ್ಡುವುದು ನಮ್ಮ ಯೋಜನೆಯಾಗಿತ್ತು. ವಿರಾಟ್ ಮತ್ತು ರಾಹುಲ್ ಬ್ಯಾಟಿಂಗ್ ಮಾಡುವಾಗ ಇದು ಸಾಧ್ಯ ಎನಿಸಿತ್ತು. ನಾಲ್ಕನೇ ವಿಕೆಟ್‌ಗೆ ಅವರು ಉತ್ತಮ ಜೊತೆಯಾಟ ಹೆಣೆದಿದ್ದರು. ಆದರೆ ನಂತರ ವಿಕೆಟ್‌ಗಳು ಉರುಳತೊಡಗಿದಾಗ ಹಿನ್ನಡೆಯಾಯಿತು' ಎಂದರು.

ಕೊಹ್ಲಿ ಅವರನ್ನು ಸಂತೈಸಿದ ಪತ್ನಿ ಅನುಷ್ಕಾ –ಪಿಟಿಐ ಚಿತ್ರ

ನನಗೆ ಆಹ್ವಾನವಿರಲಿಲ್ಲ: ಕಪಿಲ್

ಅಹಮದಾಬಾದ್ (ಪಿಟಿಐ): ಭಾರತ ಮತ್ತು ಆಸ್ಟ್ರೇಲಿಯಾ ನಡುವಣ ವಿಶ್ವಕಪ್ ಫೈನಲ್‌ಗೆ ತಮ್ಮನ್ನು ಆಹ್ವಾನಿಸಿರಲಿಲ್ಲ ಎಂದು ಭಾರತ ತಂಡದ ಮಾಜಿ ನಾಯಕ ಕಪಿಲ್ ದೇವ್ ಭಾನುವಾರ ಹೇಳಿದ್ದಾರೆ.

ಕಪಿಲ್ ದೇವ್

ಭಾರತ 1983ರಲ್ಲಿ ಮೊದಲ ಬಾರಿ ವಿಶ್ವಕಪ್ ಗೆದ್ದಾಗ ತಂಡದ ನಾಯಕರಾಗಿದ್ದ ಕಪಿಲ್ ದೇವ್, ತಾವು ಆಗಿನ ತಂಡದ ಇತರ ಆಟಗಾರರ ಜೊತೆಗೆ ಈ ಪಂದ್ಯಕ್ಕೆ ಪ್ರಯಾಣಿಸಲು ಬಯಸಿದ್ದಾಗಿ ಹೇಳಿದ್ದಾರೆ.

'ನನಗೆ ಆಹ್ವಾನ ಕೊಟ್ಟಿರಲಿಲ್ಲ. ನನಗೆ ಕರೆಯನ್ನೂ ಮಾಡಿಲ್ಲ. ಹೀಗಾಗಿ ನಾನು ಹೋಗಿಲ್ಲ ಅಷ್ಟೇ. ನಾನು 1983ರಲ್ಲಿ ಗೆದ್ದ ತಂಡದ ಆಟಗಾರರ ಜೊತೆ ಫೈನಲ್ ಪಂದ್ಯಕ್ಕೆ ಹೋಗಬೇಕೆಂದಿದ್ದೆ. ಆದರೆ ಇದು ದೊಡ್ಡ ಕಾರ್ಯಕ್ರಮ. ಅಲ್ಲಿರುವವರೆಲ್ಲರೂ ಜವಾಬ್ದಾರಿ ನಿರ್ವಹಿಸುವಲ್ಲಿ ಬಿಝಿಯಾಗಿರುತ್ತಾರೆ. ಕೆಲವೊಮ್ಮೆ ಅವರು ಮರೆತುಬಿಡುತ್ತಾರೆ' ಎಂದು ಕಪಿಲ್ ದೇವ್ ಎಬಿಪಿ ನ್ಯೂಸ್‌ಗೆ ತಿಳಿಸಿದ್ದಾರೆ.

ಮಾಜಿ ನಾಯಕ ಸೌರವ್ ಗಂಗೂಲಿ ಅವರನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಮಾಜಿ ಅಧ್ಯಕ್ಷರೆಂಬ ನೆಲೆಯಲ್ಲಿ ಆಹ್ವಾನಿಸಲಾಗಿತ್ತು. ಮಾಜಿ ಅಧ್ಯಕ್ಷರು ಮತ್ತು ಪದಾಧಿಕಾರಿಗಳನ್ನು ಆಹ್ವಾಣಿಸುವುದು ಬಿಸಿಸಿಐ ಸಂಪ್ರದಾಯ.

ಹಾಜರಿದ್ದ ಇತರ ಗಣ್ಯರಲ್ಲಿ ಶಾರೂಕ್ ಖಾನ್, ದೀಪಿಕಾ ಪಡುಕೋಣೆ ಮತ್ತು ರಣವೀರ್ ಸಿಂಗ್, ಬ್ಯಾಡ್ಮಿಂಟನ್ ದಿಗ್ಗಜ ಪಡುಕೋಣೆ ಅವರೂ ಸ್ಟ್ಯಾಂಡ್‌ನಲ್ಲಿ ಕಾಣಿಸಿಕೊಂಡಿದ್ದರು.

ಕೊಹ್ಲಿಗೆ ಕಾಣಿಕೆ ನೀಡಿದ ಸಚಿನ್

ಅಹಮದಾಬಾದ್: ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ 50 ಶತಕಗಳನ್ನು ಗಳಿಸಿದ ಮೊದಲ ಬ್ಯಾಟರ್ ವಿರಾಟ್ ಕೊಹ್ಲಿ ಅವರಿಗೆ ದಿಗ್ಗಜ ಸಚಿನ್ ತೆಂಡೂಲ್ಕರ್ ತಮ್ಮ ನಂಬರ್ 10 ಜೆರ್ಸಿಯನ್ನು ಕಾಣಿಕೆಯಾಗಿ ನೀಡಿದ್ದಾರೆ.

ಸಚಿನ್ ತಮ್ಮ ಕೊನೆಯ ಏಕದಿನ ಪಂದ್ಯದಲ್ಲಿ ಧರಿಸಿ ಆಡಿದ್ದ ಜೆರ್ಸಿ ಇದಾಗಿದೆ. 2012ರಲ್ಲಿ ಮೀರ್‌ಪುರದಲ್ಲಿ ನಡೆದ ಏಷ್ಯಾ ಕಪ್ ಟೂರ್ನಿಯ ಆ ಪಂದ್ಯದಲ್ಲಿ ಭಾರತ ತಂಡವು ಪಾಕಿಸ್ತಾನ ತಂಡದ ವಿರುದ್ಧ ಆಡಿತ್ತು.

ಅಂಗಳಕ್ಕೆ ನುಗ್ಗಿದ ಪ್ಯಾಲೆಸ್ಟೀನ್ ಬೆಂಬಲಿಗ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಪ್ಯಾಲೆಸ್ಟೀನ್ ಬೆಂಬಲಿಗ ವ್ಯಕ್ತಿಯೊಬ್ಬ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ವಿಶ್ವಕಪ್ ಫೈನಲ್ ಪಂದ್ಯ ನಡೆಯುವ ವೇಳೆ ಪಿಚ್‌ಗೆ ನುಗ್ಗಿದ್ದರಿಂದ ಕೆಲಕಾಲ ಆಟ ಸ್ಥಗಿತಗೊಂಡಿತು.

ಈ ವ್ಯಕ್ತಿಯನ್ನು ಆಸ್ಟ್ರೇಲಿಯಾದ ವೇಯ್ನ್ ಜಾನ್ಸನ್ ಎಂದು ಗುರುತಿಸಲಾಗಿದೆ. ಈತ ಚೀನಾ–ಫಿಲಿಪಿನೊ ಮೂಲದ ವ್ಯಕ್ತಿ ಎಂದೂ ಪೊಲೀಸರು ತಿಳಿಸಿದ್ದಾರೆ.

ಭಾರತದ ಇನಿಂಗ್ಸ್‌ನ 14ನೇ ಓವರ್‌ನಲ್ಲಿ ಈ ಘಟನೆ ನಡೆಯಿತು. ಪಂದ್ಯ ವೀಕ್ಷಣೆಗಾಗಿ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಸೇರಿದಂತೆ ಹಲವು ಗಣ್ಯರು ಆಗಮಿಸಲಿದ್ದ ಕಾರಣ ಅತ್ಯಂತ ಬಿಗಿ ಭದ್ರತೆಯನ್ನು ಏರ್ಪಡಿಸಲಾಗಿತ್ತು.

ಆದರೂ ಯುವಕನೊಬ್ಬ ಎಲ್ಲವನ್ನೂ ದಾಟಿ ಮೈದಾನಕ್ಕೆ ನುಗ್ಗಿ, ಕ್ರೀಸ್‌ನಲ್ಲಿದ್ದ ವಿರಾಟ್ ಕೊಹ್ಲಿ ಅವರತ್ತ ಸಾಗಿದ. ಅವರನ್ನು ಆಲಂಗಿಸಿಕೊಳ್ಳಲು ಯತ್ನಿಸಿದ. ಆತನ ಟಿಶರ್ಟ್ ಮೇಲೆ 'ಸ್ಟಾಪ್ ಬಾಂಬಿಂಗ್ ಆನ್ ಪ್ಯಾಲೆಸ್ಟೈನ್' (ಪ್ಯಾಲೆಸ್ಟೈನ್ ಮೇಲೆ ಬಾಂಬ್ ದಾಳಿ ನಿಲ್ಲಿಸಿ) ಎಂಬ ಒಕ್ಕಣೆಗಳಿದ್ದವು. ಬಹುವರ್ಣದ ಪ್ರೈಡ್ ಧ್ವಜವನ್ನೂ ಹಿಡಿದುಕೊಂಡಿದ್ದು, ಮುಖಗವಸು ಪ್ಯಾಲೆಸ್ಟೈನ್ ಧ್ವಜದಂತಿತ್ತು.

ಭದ್ರತಾ ಸಿಬ್ಬಂದಿ ಆ ವ್ಯಕ್ತಿಯನ್ನು ಮೈದಾನದಿಂದ ಹೊರಕ್ಕೆ ಕರೆದೊಯ್ದರು. ನಂತರ ಪೊಲೀಸರು ಬಂಧಿಸಿದರು ಎಂದು ಕ್ರೀಡಾಂಗಣದ ಮೂಲಗಳು ತಿಳಿಸಿವೆ.

ಹಮಾಸ್ ಮತ್ತು ಇಸ್ರೇಲ್ ನಡುವಣ ಯುದ್ಧದಲ್ಲಿ ಪ್ಯಾಲೆಸ್ಟೈನ್ ಮೇಲೆ ನಡೆಯುತ್ತಿರುವ ಬಾಂಬ್ ದಾಳಿಯನ್ನು ಹಲವು ದೇಶಗಳು ಖಂಡಿಸುತ್ತಿವೆ. ಯುದ್ಧ ನಿಲ್ಲಿಸುವಂತೆ ಇಸ್ರೇಲ್ ಅನ್ನು ಒತ್ತಾಯಿಸಿವೆ. ಕೆಲವು ದೇಶಗಳಲ್ಲಿ ಪ್ರತಿಭಟನೆಗಳೂ ನಡೆಯುತ್ತಿವೆ.



ಅಂಗಳಕ್ಕೆ ನುಗ್ಗಿದ ಪ್ಯಾಲೆಸ್ಟೀನ್ ಬೆಂಬಲಿಗನನ್ನು ಭದ್ರತಾ ಸಿಬ್ಬಂದಿ ಹಿಡಿದಿರುವುದು –ಪಿಟಿಐ ಚಿತ್ರ

ಸೂರ್ಯ ಕಿರಣದ ರೋಮಾಂಚನ: ವಿಶ್ವದ ಅತಿ ದೊಡ್ಡ ಕ್ರಿಕೆಟ್ ಕ್ರೀಡಾಂಗಣದಲ್ಲಿ ಭಾರತೀಯ ವಾಯುಪಡೆಯ ಸೂರ್ಯಕಿರಣ ವಿಮಾನಗಳ ಏರ್ ಷೋ ಕಣ್ಮನ ಸೆಳೆಯಿತು.

ಈ ತಂಡವು ಇದೇ ಮೊದಲ ಬಾರಿಗೆ ಕ್ರಿಕೆಟ್ ಪಂದ್ಯವೊಂದರ ಸಂದರ್ಭದಲ್ಲಿ ಏರ್ ಶೋ ನೀಡಿದ ಇತಿಹಾಸ ದಾಖಲಾಯಿತು.

ಫೈನಲ್ ಪಂದ್ಯದ ಆರಂಭಕ್ಕೂ ಮುನ್ನ ಈ ಏರ್ ಷೋ ನಡೆಯಿತು. ಸೂರ್ಯಕಿರಣ ತಂಡದ ಹಾಕ್ ಎಂ.ಕೆ 132 ಸ್ಕಾಟ್ ವಿಮಾನಗಳು ಆಗಸದಲ್ಲಿಯೇ ಹಲವು ಸಾಹಸಮಯ ದೃಶ್ಯಗಳನ್ನು ತೋರಿಸಿ ನೋಡುಗರನ್ನು ರೋಮಾಂಚನಗೊಳಿಸಿದವು.

ಆ ಹೊತ್ತಿನಲ್ಲಿ ಮೈದಾನದಲ್ಲಿ ಅಭ್ಯಾಸ ಮಾಡುತ್ತಿದ್ದ ಉಭಯ ತಂಡಗಳ ಆಟಗಾರರು ಮತ್ತು ಪಿಚ್ ಸಿಬ್ಬಂದಿಗಳೂ ಈ ಪ್ರದರ್ಶನವನ್ನು ನೋಡಿದರು.